ಐಕ್ಯರಂಗ

ಮೇ ದಿನ ವಿಶೇಷಾಂಕ - ೧೯೯೦



ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಮೇ ದಿನ ೧೯೯೦



ಈ ವಿಶೇಷಾಂಕದಲ್ಲಿ

ಸಂಪುಟ ೧೩ ಸಂಚಿಕೆ ೧೭ ಏಪ್ರಿಲ್ ೨೯ ೧೯೯೦ ರೂ ೪.೦೦

ಸಂಪಾದಕೀಯ

ಏಪ್ರಿಲ್ 22,1990. ಮಾರ್ಕ್ಸ್‌ವಾದವನ್ನು ತನ್ನ ಕಾಲದ ಸತ್ಯಗಳಿಂದ ಶ್ರೀಮಂತಗೊಳಿಸಿ, ಸಾಣೆಹಿಡಿದು ಜಗತ್ತಿನೆಲ್ಲಾ ಬಂಡವಾಳಶಾಹಿ ಕುಲದ ಸಾವಿರಾರು ಕೋಟಿಗಳೊಡೆಯರ ಎದೆ ಝಲ್ಲೆನ್ನುವಂತೆ ಝಳಪಿಸಿದ ಲೆನಿನ್ನರ 120 ನೆಯ ಜನ್ಮ ದಿನ. ಹೊಸ ಯುಗದ ಹರಿಕಾರ ಲೆನಿನ್‌ರವರು ಭೂತಕಾಲದ ಗೂಢಗಳನ್ನು ಅಗೆದು ಭವಿಷ್ಯದ ಸಮಾಜದ ರತ್ನಬೀಜಗಳನ್ನು ಹೆಕ್ಕಿದ ಮಾರ್ಕ್ಸ್, ಎಂಗೆಲ್ಸರು ಕಂಡ ಕಾಣ್ಕೆಯನ್ನು ನನಸುಮಾಡಿದ ಮಹಾಪುರುಷ ಲೆನಿನ್. ಜಗತ್ತಿನ ಆರನೇ ಒಂದು ಭಾಗ ಭೂಮಿಯನ್ನು ಅವರ ಮುಷ್ಟಿಯಿಂದ ಸ್ವತಂತ್ರಗೊಳಿಸಿ ಇಡೀ ಜಗತ್ತನ್ನೇ ಬಿಡಿಸಲು ಅಡಿಪಾಯ ಹಾಕಿದವರು ಲೆನಿನ್. 20ನೆಯ ಶತಮಾನದಲ್ಲಿ ಲೆನಿನ್‌ವಾದವಿಲ್ಲದೇ ಮಾರ್ಕ್ಸ್‌ವಾದವಿಲ್ಲ ಎಂಬುದು ಜಗತ್ತಿನೆಲ್ಲಾ ಕಾರ್ಮಿಕರು ಅಪ್ಪಿಕೊಂಡ ಸತ್ಯ. ಈ ಸತ್ಯವನ್ನು ನಿರಾಕರಿಸಿದವರು ಮಾರ್ಕ್ಸ್‌ವಾದಿಗಳೇ ಅಲ್ಲ ಎಂಬುದು ಕಮ್ಯುನಿಷ್ಟರೆಲ್ಲಾ ಒಪ್ಪಿಕೊಳ್ಳುವ ಮಾತು.

ಆದರೆ ಇಂದು ಯಾರ ಮಾತುಗಳಿಂದ ಜಗತ್ತಿನೆಲ್ಲಾ ಬಂಡವಾಳಶಾಹಿಗಳ ಎದೆ ತಲ್ಲಣಗೊಳ್ಳುತ್ತಿತ್ತೋ, ವಿಶ್ವದೆಲ್ಲೆಡೆಗೆ ತಮ್ಮ ಕಬಂಧ ಬಾಹುಗಳನ್ನು ಚಾಚಿ ಗುಡಿಸಲು ಪಾಳು ನೆಲಗಳನ್ನೂ ಬಿಡದೆ ವಿಶಾಪೋಶನ ಮಾಡಬಯಸುವ ಯಾವ ಸಾಮ್ರಾಜ್ಯಶಾಹಿ ಅತಿ ಶ್ರೀಮಂತರ ಆಟಗಳು ಯಾರಿಂದ ಬಯಲಾದುವೋ ಆ ಲೆನಿನ್‌ರವರ ಮೇಲೆ ಎಲ್ಲ ರಣಹದ್ದುಗಳು ಮುಗಿದು ಬಿದ್ದಿದ್ದಾರೆ. ಕಾರ್ಮಿಕರ ಮನದಲ್ಲಿ ಬೆಳೆದು ಹೆಮ್ಮರವಾಗಿರುವ ಲೆನಿನ್‌ವಾದದ ಮಹಾವೃಕ್ಷವನ್ನು ಅಲುಗಾಡಿಸುವ ಅದು ಮಾರ್ಕ್ಸ್‌ವಾದವೇ ಅಲ್ಲವೆಂದು ಹೀಗಳೆಯುವ ಕುತಂತ್ರ ಒಂದು ಕಡೆ ಮಾರ್ಕ್ಸ್‌ವಾದವೇ ಕುಸಿದು ಬೀಳುತ್ತಿದೆ ಇನ್ನು ಲೆನಿನ್‌ವಾದವೆಲ್ಲಿ ಎಂಬ ವಿತಂಡವಾದ ಮತ್ತೊಂದು ಕಡೆ.

ಜೀವಂತ ಲೆನಿನ್‌ರವರನ್ನು ಮುಟ್ಟಲಾರದ ಜನರು ಇಂದು ಲೆನಿನ್‌ರವರ ಪ್ರತಿಮೆಗಳ ಮೇಲೆ ಧಾಳಿಯೆಸಗಿ ತಮ್ಮ ರೊಚ್ಚು ತೀರಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ

ವಿಶ್ವದ ಕಾರ್ಮಿಕವರ್ಗ, ಮೂರನೆಯ ವಿಶ್ವದ ದೇಶಗಳ ಎಲ್ಲಾ ಜನತೆ ಹಾಗೂ ಸಾಮ್ರಾಜ್ಯಶಾಹಿಗಳ ಪೈಶಾಚಿಕ ಶೋಷಣೆಯ ನಡುವೆ ನಡೆಯುತ್ತಿರುವ ಮಹಾಸಂಘರ್ಷದಲ್ಲಿ ಕಾರ್ಮಿಕರ ಬ್ರಹ್ಮಾಸ್ತ್ರವಾದ ಲೆನಿನ್‌ವಾದದಮೇಲಿನ ಈ ಧಾಳಿಯನ್ನು ಜಗತ್ತಿನೆಲ್ಲಾ ಕಾರ್ಮಿಕವರ್ಗ ಕಮ್ಯುನಿಸ್ಟ್ ಪಕ್ಷಗಳು ಧೃಡತೆಯಿಂದ ಧೀರತೆಯಿಂದ ಎದುರಿಸಬೇಕು.

ಲೆನಿನ್‌ವಾದವನ್ನು ಮತ್ತಷ್ಟು ಆಳವಾಗಿ ಅಭ್ಯಸಿಸಲು, ಈ ಅಭ್ಯಾಸ ನಮ್ಮನ್ನು ಲೆನಿನ್‌ವಾದದ ಶತ್ರುಗಳನ್ನು ಕೊಚ್ಚಿಹಾಕಬಲ್ಲ ಸಮರಶೀಲರನ್ನಾಗಿ ಪರಿವರ್ತಿಸಬೇಕು. ಲೆನಿನ್‌ವಾದದ ಕವಚ, ಕೂರಸಿ, ಖಡ್ಗಗಳನ್ನು ಹಿಡಿದು ವರ್ಗಸಂಘರ್ಷದ ರಣಾಂಗಣಕ್ಕೆ ಧುಮುಕುವ ಕೋಟಿ ಕೋಟಿ ಕಾರ್ಮಿಕವರ್ಗವೇ ಲೆನಿನ್‌ವಾದದ ಮೇಲಿನ ಧಾಳಿಗಳಿಗೆ ನಮ್ಮ ಉತ್ತರವಾಗಬೇಕು.

ಇಂತಹ ಪ್ರಯತ್ನದಲ್ಲಿ ಕನ್ನಡ ಕಾರ್ಮಿಕವರ್ಗಕ್ಕೆ ನೆರವಾಗಲು "ಐಕ್ಯರಂಗ" ತನ್ನ ಮೇ ಶತಮಾನೋತ್ಸವ" ಸಂಚಿಕೆಯನ್ನು "ಲೆನಿನ್‌ವಾದ"ದ ಸಂಚಿಕೆಯನ್ನಾಗಿ ತರುತ್ತಿದೆ. ಸಂಗಾತಿಗಳೆಲ್ಲರೂ ಇದರ ಪೂರ್ಣ ಪ್ರಯೋಜನ ಪಡೆದುಕೊಳ್ಳತ್ತಾ ಲೆನಿನ್‌ರ ಕೃತಿಗಳನ್ನೇ ನೇರವಾಗಿ ಅಭ್ಯಾಸ ಮಾಡುವವರಾಗಬೇಕು.



ಅಕ್ಟೋಬರ್ ಚಂಡಮಾರುತದ ನಿರೀಕ್ಷೆಯಲ್ಲಿ




ಸಮಾಜವಾದ ಮತ್ತು ಮಾರ್ಕ್ಸ್‌ವಾದದ ರಕ್ಷಣೆಗಾಗಿ ಒಂದು ಧೀರ್ಘ ಹೋರಾಟ ಬೆಳೆದು ಬರುತ್ತಿದೆ. ಸಮಾಜವಾದ ಮತ್ತೆಂದೂ ಏಳದಂತೆ ಹುಗಿದು ಬಿಡಬಹುದೆಂಬ ಅಖಂಡ ವಿಶ್ವಾಸ ಸಾಮ್ರಾಜ್ಯಶಾಹಿಗಳದ್ದು, ಅವರ ಸಿದ್ಧಾಂತಿಗಳದ್ದು. ಇದು ಅವರ ಭ್ರಮೆ. ಲೆನಿನ್‌ವಾದದಿಂದ ಸಜ್ಜಿತರಾದ, ಲೆನಿನ್‌ವಾದೀ ಪರಂಪರೆಯನ್ನು ಸೃಜನಾತ್ಮಕವಾಗಿ ರಕ್ಷಿಸುತ್ತಾ ಸಮಾಜವಾದ ಮತ್ತು ಪ್ರಗತಿಯ ಶಕ್ತಿಗಳು ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಅಡ್ಡಿ ಆತಂಕಗಳನ್ನು ಮೀರಿ ನಿಂತು ಮುಂದುವರಿಯುತ್ತವೆ. ಇದು ಇತಿಹಾಸದ ನಿಯಮ ಲೆನಿನ್ ನಮಗೆ ಕಲಿಸಿದ ಪಾಠ ವಿದು."

ಲೆನಿನ್‌ರ ಜನ್ಮದ ೧೨೦ ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಲೆನಿನ್‌ವಾದದ ಸತ್ವವನ್ನು, ಮಹತ್ವವನ್ನು ಸಂಗ್ರಹ ರೂಪದಲ್ಲಿ ಕೊಟ್ಟಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋದ ನಿರ್ಣಯ ಇದು.

ಎಪ್ರಿಲ್ ೨೨, ೧೯೯೦. ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ವೈಜ್ಞಾನಿಕ ಸಿದ್ಧಾಂತವನ್ನು ಬೆಳೆಸಿದ ಮಹಾನ್ ಕ್ರಾಂತಿಕಾರಿ, ಮೊದಲ ಸಮಾಜವಾದಿ ಪ್ರಭುತ್ವದ ಮುಖಂಡ ವಿ.ಐ. ಲೆನಿನ್‌ರ ಜನ್ಮದ ೧೨೦ನೇ ವಾರ್ಷಿಕೋತ್ಸವದ ದಿನ. ಸಮಾಜವಾದಕ್ಕೊಂದು ಹಿನ್ನಡೆಯಾದ ಪೂರ್ವಯುರೋಪಿನ ದೇಶಗಳ ಇತ್ತೀಚಿನ ಘಟನೆಗಳು, ಸಮಾಜವಾದಿ ದೇಶಗಳು ಎದುರಿಸುತ್ತಿರುವ ಹೊಸ ಸಮಸ್ಯೆಗಳು, ಮಾರ್ಕ್ಸ್‌ವಾದ-ಲೆನಿನ್‌ವಾದದ ಬಗ್ಗೆ ಮತ್ತು ಅದೀಗ ಎಷ್ಟು ಪ್ರಸ್ತುತ ಎಂಬುದರ ಬಗ್ಗೆ ಮತ್ತೆ ಚರ್ಚೆಗೆ ಗಾಳಿಬೀಸಿದೆ. ಹಲವು ಕೂಗುಗಳು ಮತ್ತೆ ಕೇಳಲಾರಂಬಿಸಿವೆ. ಇಂದಿನ ಜಗತ್ತಿನಲ್ಲಿ ಲೆನಿನ್ ಹಾಗು ಅವರ ಸಿದ್ಧಾಂತಗಳು ಹಳಸಲಾಗಿವೆ, ಲೆನಿನ್‌ವಾದ ರಷ್ಯನ್ ಪರಿಸ್ಥಿತಿಯಲ್ಲಿ ಉದ್ಭವವಾದ ಕೇವಲ ಒಂದು ರಾಷ್ಟ್ರೀಯ ವಿದ್ಯಮಾನವಷ್ಟೆ, ಲೆನಿನ್‌ವಾದ ಮಾರ್ಕ್ಸ್‌ರ ಮೂಲ ಕನಸಿನ ಒಂದು ವಿಕೃತಿಯಲ್ಲದೆ ಬೇರೇನಲ್ಲ, ಎಂದೆಲ್ಲಾ ತಮ್ಮ ಹಳೆಯ ಕೂಗುಗಳನ್ನು ಅಂತರ್ರಾಷ್ಟ್ರೀಯ ಬೂರ್ಜ್ವಾ ವಲಯಗಳು, ಸಾಮಾಜಿಕ ಪ್ರಜಾತಂತ್ರವಾದಿಗಳು ಮತ್ತು ಸುಧಾರಣಾವಾದಿಗಳು ಮತ್ತೆ ಹಾಕಲಾರಂಭಿಸಿದ್ದಾರೆ. ಇವೆಲ್ಲಾ ದೋಷಪೂರ್ಣವಾದಗಳು.ಇವೆಲ್ಲಕ್ಕೆ ಪ್ರತ್ಯುತ್ತರ ನೀಡಬೇಕು, ತಿರಸ್ಕರಿಸಬೇಕು.

ಲೆನಿನ್ ಸಿದ್ಧಾಂತ ಮತ್ತು ಆಚರಣೆಯ ಕ್ರಾಂತಿಕಾರಿ ಸತ್ವವನ್ನು ರಕ್ಷಿಸುವ ಮೂಲಕ ಈ ಮಹಾನ್ ಸೃಜನಶೀಲ ಮಾರ್ಕ್ಸ್‌ವಾದಿಗೆ ಸಿ.ಪಿ.ಐ.(ಎಂ.) ಮತ್ತು ವಿಶ್ವಾದ್ಯಂತ ಎಲ್ಲಾ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಶಕ್ತಿಗಳು ತಮ್ಮ ಶ್ರದ್ಧಾಂಜಲಿ ಅರ್ಪಿಸುತ್ತವೆ, ಅವರ ಜನ್ಮದಿನೋತ್ಸವನ್ನು ನೆನಪಿಸಿಕೊಳ್ಳುತ್ತವೆ. ಕಾರ್ಮಿಕರ ವರ್ಗ ಆಂದೋಲನದ, ವೈಜ್ಞಾನಿಕ ಸಮಾಜವಾದದ ಅವಿಭಾಜ್ಯ ಅಂಗಗಳಾದ ಲೆನಿನ್‌ರ ಬೋಧೆಗಳನ್ನು ಎತ್ತಿಹಿಡಿಯಲು ಪ್ರತಿಜ್ಞೆಗೈಯುತ್ತವೆ. ಸಂಕೀರ್ಣ ಹಾಗೂ ರಭಸದ ಬದಲಾವಣೆಗಳನ್ನು ಕಾಣುತ್ತಿರುವ ಇಂದಿನ ಜಗತ್ತಿನಲ್ಲಿ ಉಚ್ಛದನಿಯಿಂದ ಮಾರ್ಕ್ಸ್‌ವಾದ ಲೆನಿನ್‌ವಾದದ ರಕ್ಷಣೆ ನಡೆಸಬೇಕಾಗಿದೆ.

ಸಾಮ್ರಾಜ್ಯಶಾಹಿಯ ವಿಶ್ಲೇಷಣೆ



ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಸಿದ್ಧಾಂತವನ್ನು ಸಮಕಾಲೀನ ಸನ್ನಿವೇಶಗಳಿಗೆ ಅನುಗುಣವಾಗಿ ಬೆಳೆಸುವುದು, ವಿಶದ ಪಡಿಸುವುದು ಮತ್ತು ಕಾರ್ಮಿಕವರ್ಗದ ಆಂದೋಲನವನ್ನು ಶ್ರಮಜೀವಿವರ್ಗದ ವಿಶ್ವಕ್ರಾಂತಿ ನೆಡೆಸಲು ಸವನ್ನದ್ಧಗೊಳಿಸುವುದು - ಇದೇ ಲೆನಿನ್ನರ ಸಮಸ್ತ ಸೈದ್ಧಾಂತಿಕ ಬರವಣಿಗೆಗಳ, ಶ್ರಮದ ಗುರಿ. ಇಪ್ಪತ್ತನೇ ಶತಮಾನದ ಆರಂಭದಲ್ಲಿ ವಿಶ್ವ ಬಂಡವಾಳಶಾಹಿಯ ಸ್ಥಿತಿಯ ಮೂಲಭೂತ ವಿಶ್ಲೇಷಣೆಯನ್ನು ಲೆನಿನ್ ಕೈಗೆತ್ತಿಕೊಂಡದ್ದು ಈ ಕೇಂದ್ರ ಉದ್ದೇಶದಿಂದಲೇ ಗುತ್ತೇದಾರಿಕೆ ಬಂಡವಾಳಶಾಹಿಯ ಬೆಳವಣಿಗೆಯ ಅತ್ಯುನ್ನತ್ತ ಘಟ್ಟ, ಅದೇ ಸಾಮ್ರಾಜ್ಯಶಾಹಿ ಎಂದು ಚಾರಿತ್ರ್ಯ ವಿಶ್ಲೇಷಣೆ ಮಾಡಿದರು ಲೆನಿನ್. ಆಧುನಿಕ ಕಾಲದಲ್ಲಿ ಸಾಮ್ರಾಜ್ಯಶಾಹಿಯ, ಬಂಡವಾಳಶಾಹಿಯ ಸ್ವರೂಪ ಕುರಿತಾದ ಈ ಮೌಲಿಕ ಕೊಡುಗೆ ಈಗಲೂ ವಿಶ್ವ ಬಂಡವಾಳಶಾಹಿ ಬೆಳವಣಿಗೆಗಳ ಆಳಅಧ್ಯಯನದ ಆಧಾರ ಬಂಡವಾಳಶಾಹಿ ಉದಯಗೊಳ್ಳುತ್ತಿದ್ದ ಉತ್ಪಾದನಾ ವಿಧಾನವಾಗಿದ್ದಾಗ ಮಾರ್ಕ್ಸ್ ನಡೆಸಿದ ವಿಶ್ಲೇಷಣೆಯನ್ನು ಲೆನಿನ್ ಸೃಜನಾತ್ಮಕವಾಗಿ ಬೆಳೆಸಿದರು. ಲೆನಿನ್‌ರ ಮರಣದ ಆರೂವರೆ ದಶಕಗಳ ನಂತರವೂ ಬಂಡವಾಳಶಾಹಿಯ ವಿರುದ್ಧ, ಬಂಡವಾಳಶಾಹಿಯ ಮೊದಲಿನ ಶೋಷಣಾ ಸ್ವರೂಪಗಳ ವಿರುದ್ಧ ಹೋರಾಟದಲ್ಲಿ, ಪ್ರತಿಯೊಂದು ಶ್ರಮಜೀವಿ ಆಂದೋಲನವೂ ತನ್ನ ಸರಿಯಾದ ನೆಲೆ ಕಂಡುಕೊಳ್ಳಲು ಮೂಲಭೂತ ಮಾರ್ಗದರ್ಶನ ನೀಡುತ್ತಿರುವುದು, ಅದರ ಜಾಗತಿಕ ಶೋಷಣಾ ಜಾಲದ ಲೆನಿನ್‌ವಾದೀ ವಿಶ್ಲೇಷಣೆಯೇ.


ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಬಂಡವಾಳಶಾಹಿ ವೈಜ್ಞಾನಿಕ, ತಾಂತ್ರಿಕ ಕ್ರಾಂತಿಯನ್ನು ಬಳಸಿ ಉತ್ಪಾದನಾ ಶಕ್ತಿಗಳನ್ನು ಮತ್ತಷ್ಟು ಬೆಳೆಸಿದೆ. ಮೂರನೇ ಜಗತ್ತಿನ ನವ-

ಲೆನಿನ್ ವಾದದ ಸೃಜನಶೀಲತೆಯನ್ನು ಎತ್ತಿ ಹಿಡಿಯೋಣ

ವಸಾಹತುಶಾಹೀ ಶೋಷಣೆಯನ್ನು ಮುಂದುವರಿಸಲು, ತೀವ್ರಗೊಳಿಸಲು ಅದು ಹೊಸ ವಿಧಾನಗಳನ್ನು ರೂಪಿಸಿದೆ. ಸಾಮ್ರಾಜ್ಯ ಶಾಹಿಯೊಳಗಡೆ ವೈರುಧ್ಯಗಳ ಹೊಸ ರೂಪಗಳು ಬೆಳೆಯುತ್ತಿರುವುದನ್ನು ವಿಶ್ವ ಬಂಡವಾಳಶಾಹಿ ಕಂಡಿದೆ. ಹೆಚ್ಚುತ್ತಿರುವ ಸಮಾಜವಾದಿ ಸವಾಲವನ್ನು ಎದುರಿಸಲು ಬಂಡವಾಳಶಾಹಿ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಆರಂಭಿಸಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಪರಾಮರ್ಶಿಸಿ ಸರಿಯಾದ ತೀರ್ಮಾನಗಳಿಗೆ ಬರಲು ಬಂಡವಾಳಶಾಹಿಯನ್ನು ಅರ್ಥಮಾಡಿಕೊಳ್ಳುವ ಲೆನಿನ್‌ರ ವಿಧಾನವೇ ವೈಜ್ಞಾನಿಕ ಮಾರ್ಗದರ್ಶನ ನೀಡಬಲ್ಲಂತದ್ದು.

ಲೆನಿನ್ ಮೂಲಭೂತ ಬೋಧೆ ಸಮಂಜಸವಾಗಿಯೇ ಉಳಿದಿದೆ, ಒಂದು ಚೈತನ್ಯಶಾಲಿ ಶಕ್ತಿಯಾಗಿ ಉಳಿದಿದೆ. ಲೆನಿನ್‌ರ ದಿನಗಳಿಗೆ ಹೋಲಿಸಿದರೆ ಬಂಡವಾಳಶಾಹಿಯ ರಚನೆಯಲ್ಲಿ, ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳು ಸಂದಿವೆ. ಅವು ಸಾಮ್ರಾಜ್ಯಶಾಹಿ ಕುರಿತಾದ ಲೆನಿನ್‌ರ ಸಿದ್ಧಾಂತ ಸರಿಯೆಂಬುದನ್ನು ಸಾಬೀತುಪಡಿಸಿವೆ. ಇಂದು ಜಗತ್ತಿನಲ್ಲಿ ಸಾಮಾಜಿಕ ವೈರುಧ್ಯಗಳು ಹೆಚ್ಚೆಚ್ಚು ತೀಕ್ಷ್ಣಗೊಳ್ಳುತ್ತಿರುವುದಕ್ಕೆ ರುಜುವಾತು ನೀಡಿವೆ. ಸಾಮ್ರಾಜ್ಯಶಾಹಿ ಒಂದು ಬಿಕ್ಕಟ್ಟು ರಹಿತ ವ್ಯವಸ್ಥೆಯಲ್ಲ. ಮೂರನೇ ಜಗತ್ತಿನ ನಗ್ನ ಶೋಷಣೆ ನಡೆಸದೆ, ಕೊಳ್ಳೆ ಹೊಡೆಯದೆ ತನ್ನ ಪ್ರಬಲ ಸ್ಥಾನಮಾನವನ್ನು ಉಳಿಸಿಕೊಳ್ಳುವುದು ಅದಕ್ಕೆ ಸಾಧ್ಯವಿಲ್ಲ. ಶೋಷಣೆಯ ಅದರ ಹೊಸ ಸಾಧನಗಳನ್ನು ಅರಿಯಬೇಕು, ಅವನ್ನು ಎದುರಿಸಬೇಕು. ತೃತೀಯ ಜಗತ್ತಿನ ಕೋಟಿ-ಕೋಟಿ ಜನಗಳ ಹಸಿವು, ನಿರಕ್ಷರತೆ, ರೋಗಪೀಡಿತ ಸ್ಥಿತಿ ಸಾಮ್ರಾಜ್ಯಶಾಹಿ ಪ್ರತಿನಿಧಿಸುವ ಸುಲಿಗೆಖೋರ ವಿಶ್ವವ್ಯವಸ್ಥೆಯ ಜೀವಂತ ಸಾಕ್ಷಿ. ಮಾರ್ಕ್ಸ್‌ವಾದ -ಲೆನಿನ್‌ವಾದ ಸದಾ ಇಂತಹ ಸಾಮ್ರಾಜ್ಯಶಾಹಿಯ ವಿರುದ್ಧ ವಿಶ್ವವ್ಯಾಪೀ ಹೋರಾಟಕ್ಕೆ ದಾರಿತೋರಬಲ್ಲ ದೀಪಸ್ತಂಭ.. ಲೆನಿನ್‌ವಾದಿ ವಿಧಾನವೇ ಸಾಮ್ರಾಜ್ಯಶಾಹಿಯ ಮೂಲಭೂತ ಸ್ವರೂಪ ಇಂದೂ ಬದಲಾಗಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲು ಮಾರ್ಕ್ಸ್‌ವಾದಿಗಳಿಗೆ ನೆರವಾಗುವ ಸಾಧನ.

ಕಾರ್ಮಿಕ ರಕ್ಷಣಾಮಂಡಳಿ ಅಧ್ಯಕ್ಷ



ಪ್ರಭುತ್ವ ಕುರಿತಾದ ಚಿರಸ್ಥಾಯೀ ಶಿಕ್ಷಣ



ಕ್ರಾಂತಿಕಾರಿ ಆಂದೋಲನ ಪ್ರಭುತ್ವದ ವರ್ಗಗುಣದ ಸರಿಯಾದ ತಿಳುವಳಿಕೆ ಪಡೆದು, ಈ ಪ್ರಭುತ್ವವನ್ನು ಕಿತ್ತೊಗೆಯುವ ಕ್ರಾಂತಿಯ ನೇತೃತ್ವವನ್ನು ಕಾರ್ಮಿಕವರ್ಗ ವಹಿಸಿ ಒಂದು ಹೊಸ ಪ್ರಭುತ್ವ ವ್ಯವಸ್ಥೆಯನ್ನು ಶ್ರಮಜೀವಿ ವರ್ಗದ ಸರ್ವಾಧಿಕಾರವನ್ನು ಅಗತ್ಯವನ್ನು ಅರಿತು ಸನ್ನದ್ಧಗೊಳ್ಳುವಂತೆ ಮಾಡಿದರು ಲೆನಿನ್. ಪ್ಯಾರಿಸ್ ಕಮ್ಯೂನ್ ಅನುಭವದ ಬಗ್ಗೆ ಮಾರ್ಕ್ಸ್‌ರ ವಿಶ್ಲೇಷಣೆಯ ಆಧಾರದ ಮೇಲೆ ಆರಂಭಿಸಿದ ಲೆನಿನ್‌ರದ್ದು ವರ್ಗಪ್ರಭುತ್ವದ ಸ್ವರೂಪವನ್ನು ಸ್ಪಷ್ಟಪಡಿಸುವಲ್ಲಿ, ಶೋಷಕ ವರ್ಗಗಳ ಪ್ರಭುತ್ವವನ್ನು ಕಿತ್ತೊಗೆಯುವ ಕೇಂದ್ರ ಗುರಿಯಾಗುಳ್ಳ ಕ್ರಾಂತಿಕಾರಿ ಪ್ರಕ್ರಿಯೆಯ ಸ್ವರೂಪವನ್ನು ಸ್ಪಷ್ಟಪಡಿಸುವಲ್ಲಿ ಆದರ್ಶಪ್ರಾಯ ಕಾಣಿಕೆ. ಲೆನಿನ್ ಬಂಡವಾಳಶಾಹಿ ಪ್ರಭುತ್ವವನ್ನು ಕಿತ್ತೊಗೆಯಲು ನಿರಾಕರಿಸಿ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಸುಧಾರಣೆಗಳನ್ನು ಪ್ರತಿಪಾದಿಸುವ ಸಾಮಾಜಿಕ ಪ್ರಜಾತಂತ್ರವಾದಿಗಳಿಂದ ಸಂಬಂಧ ಕಡಿದುಕೊಂಡದ್ದು ತನ್ನ ಈ ಸವಾಲೆಸೆದ ವಿಶ್ಲೇಷಣೆಯ ಮೂಲಕ.

ಪ್ರಭುತ್ವ ಕುರಿತಾದ ಲೆನಿನ್ ನೀಡಿದ ಶಿಕ್ಷಣ ಚಿರಸ್ಥಾಯೀ ಮಹತ್ವದ ಶಿಕ್ಷಣ. ಶಾಂತಿ, ಪ್ರಜಾಪ್ರಭುತ್ವ, ಸಮಾಜವಾದದ ಶಕ್ತಿಗಳು ದೊಡ್ಡ ಮುನ್ನಡೆ ಸಾಧಿಸಿವೆ. ಆದರೂ ಈಗಿನ ಬಂಡವಾಳಶಾಹಿ, ಬೂರ್ಜ್ವಾ - ಭೂಮಾಲೀಕ ಪ್ರಭುತ್ವಗಳು ವಸ್ತುತಃ ಆಳುವ ವರ್ಗಗಳ ಸರ್ವಾಧಿಕಾರಗಳೇ. ಶೋಷಿತ ವರ್ಗಗಳು ಪ್ರಜಾಪ್ರಭುತ್ವವಾದೀ ಬಹುಸಂಖ್ಯಾತರಿಗೆ ಪ್ರಭುತ್ವದ ಅಧಿಕಾರ ಬಿಟ್ಟುಕೊಡುವುದಿಲ್ಲ. ಕಳೆದ ಕೆಲವು ದಶಕಗಳಲ್ಲಿ ವಿಶ್ವಾದ್ಯಂತ ಕ್ರಾಂತಿಕಾರಿ ಆಂದೋಲನವನ್ನು ದಮನ ಮಾಡುವಲ್ಲಿ ಕ್ರಾಂತಿವಿರೋಧಿ ಶಕ್ತಿಗಳಿಗೆ ಬೆಂಬಲವಾಗಿ ಹಲವುಬಾರಿ ಸಾಮ್ರಾಜ್ಯಶಾಹಿಗಳು ಹಸ್ತಕ್ಷೇಪ ನಡೆಸಿರುವುದೇ ಶೋಷಕ ವರ್ಗಗಳು ತಮ್ಮ ಅಧಿಕಾರ ಶಾಶ್ವತಗೊಳಿಸಲು ಏನು ಮಾಡಲೂ ಹೇಸರು ಎಂದು ಸಾಬೀತುಗೊಳಿಸಿದೆ. ಆದರೆ ವರ್ಗ ಹೋರಾಟ ಇತಿಹಾಸದ ಚಾಲಕಶಕ್ತಿ. ಶೋಷಿತರು ತಮ್ಮ ವಿಮುಕ್ತಿಗಾಗಿ ನಡೆಸುತ್ತಿರುವ ಅಸಂಖ್ಯ ಹೋರಾಟಗಳು ಮಾನವಕುಲದ ಭವಿಷ್ಯವನ್ನು ರೂಪಿಸುತ್ತಿವೆ. ಲೆನಿನ್‌ವಾದ ಸುಧಾರಣೆ ಮತ್ತು ಕ್ರಾಂತಿಯ ನಡುವಿನ ವಿಭಜನರೇಖೆ. ಲೆನಿನ್‌ವಾದವೆಂದರೆ ಜನಸಮೂಹಗಳು ಬಂಡವಾಳಶಾಹಿಯೊಂದಿಗೆ ರಾಜಿ ಮಾಡಿಕೊಳ್ಳುವಂತೆ ಮಾಡುವ ಎಲ್ಲಾ ಸುಧಾರಣಾವಾದಿ ಪ್ರಯತ್ನಗಳೊಂದಿಗೆ ವಿಚ್ಛೇದ.

ಕ್ರಾಂತಿಯ ವ್ಯೂಹ, ತಂತ್ರಗಳನ್ನು ರೂಪಿಸಿದ ಅಪ್ರತಿಮ ವಿಜ್ಞಾನಿ

ಲೆನಿನ್ ಶ್ರಮಜೀವಿ ವರ್ಗದ ಕ್ರಾಂತಿಯ ರಣನೀತಿ ಮತ್ತು ತಂತ್ರಗಳನ್ನು ಆರಂಭಿಸಿದವರು. ಸಿದ್ಧಾಂತಿ. ಸಾಮ್ರಾಜ್ಯಶಾಹಿಯ ಬೀಜಮೂಲದ ಕುರಿತಾದ ವಿಶ್ಲೇಷಣೆಯಿಂದ ಅವರು ವಿಶ್ವ ಬಂಡವಾಳಶಾಹಿ ತನ್ನ ಅತ್ಯಂತ ದುರ್ಬಲಕೊಂಡಿಯಲ್ಲಿ ಕುಸಿಯುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಇದಕ್ಕೆ ಕಾರಣ ಸಾಮ್ರಾಜ್ಯಶಾಹಿ ಜಾಗತಿಕ ಸಾಮಾಜಿಕ ಕ್ರಾಂತಿಯ ಪೂರ್ವಭಾವೀ ಘಟ್ಟ ಎಂಬ ದೃಢದ ವಿಚಾರ ಅಕ್ಟೋಬರ್ ೧೯೧೭ ರಲ್ಲಿ ರಷ್ಯಾದಲ್ಲಿ ಮೊದಲ ಸಮಾಜವಾದಿ ಕ್ರಾಂತಿಗೆ ನಾಂದಿಹಾಕಿದ ಬೋಲ್ಷೆವಿಕ್ ಪಕ್ಷದ ರಣನೀತಿ, ತಂತ್ರಗಳಿಗೆ ಪ್ರೇರಣೆ ನೀಡಿದ್ದು ಈ ವೈಜ್ಞಾನಿಕ ತಿಳುವಳಿಕೆಯೇ. ಅವರು ಕಾರ್ಮಿಕ - ರೈತರ ಸಖ್ಯತೆಯನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಪ್ರಜಾಪ್ರಭುತ್ವವಾದಿ ವರ್ಗಗಳ ಕೂಟವನ್ನು ಕಡೆದು ಮೂರ್ತೀಕರಿಸಿದ, ಕ್ರಾಂತಿಯ ಘಟ್ಟಗಳನ್ನು, ಪ್ರಜಾಪ್ರಭುತ್ವ ಕ್ರಾಂತಿಯ ಶ್ರಮಜೀವಿ ವರ್ಗದ ಪ್ರಾಬಲ್ಯದಿಂದಾಗಿ ಆ ಕ್ರಾಂತಿ ಸಮಾಜವಾದಿ ಕ್ರಾಂತಿಯ ಘಟ್ಟದತ್ತ ಸಾಗುತ್ತದೆ ಎಂದು ತೋರಿಸಿಕೊಟ್ಟ ಅಪ್ರತಿಮ ಕ್ರಾಂತಿಕಾರಿ ರಣನೀತಿಜ್ಞ, ವ್ಯೂಹತಜ್ಞ. ೧೯೧೭ರ ನಂತರ ವಿಶ್ವದ ಹೊಸ ಗುಣಾತ್ಮಕ ವೈರುಧ್ಯದ, ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಎಂಬೆರಡು ಸಾಮಾಜಿಕ ವ್ಯವಸ್ಥೆಗಳ ವೈರುಧ್ಯದ ಒಂದು ಸರಿಯಾದ ತಿಳುವಳಿಕೆಯೊಂದಿಗೆ ಒಂದು ದೇಶದಲ್ಲಿ ಸಮಾಜವಾದ ಕಟ್ಟಲು ಸಾಧ್ಯ ಎಂದು ತೋರಿಸಿಕೊಟ್ಟವರು ಲೆನಿನ್.




ಕೇಂದ್ರ ಸಮಿತಿಯ ಪ್ಲೀನರಿ ಸಭೆಯಲ್ಲಿ ಅಕ್ಟೋಬರ್ ೧೯೨೨

ವಿಶ್ವ ಕ್ರಾಂತಿಯೊಂದಿಗೆ ರಾಷ್ಟ್ರೀಯ ವಸಾಹತು ಪ್ರಶ್ನೆ ಬೆಸೆದವರು

ಲೆನಿನ್ನರದ್ದು ಇಪ್ಪತ್ತನೇ ಶತಮಾನದಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಸೈದ್ಧಾಂತಿಕ ನೀತಿಗಳನ್ನು ರೂಪಿಸುವಲ್ಲಿ ನಿರ್ಣಾಯಕ ಕೊಡುಗೆ. ಅವರು ರಾಷ್ಟ್ರೀಯ ಮತ್ತು ವಸಾಹತು ಪ್ರಶ್ನೆಯನ್ನು ವಿಶ್ವ ಕ್ರಾಂತಿಯ ರಣನೀತಿ ಮತ್ತು ತಂತ್ರಗಳೊಂದಿಗೆ ಬೆಸೆದರು. ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಕಾರ್ಮಿಕ ವರ್ಗದ ಶಕ್ತಿಗಳು ತುಳಿಯಬೇಕಾದ ದಾರಿಯನ್ನು ಲೆನಿನ್ನರ ರಾಷ್ಟ್ರೀಯ ಮತ್ತು ವಸಾಹತು ಪ್ರಶ್ನೆ ಕುರಿತಾದ ಪ್ರಬಂಧ ಬೆಳಗಿತು. ಹೇಗೆ ವಸಾಹತುಗಳಲ್ಲಿ ರಾಷ್ಟ್ರೀಯ ಉತ್ಕ್ರಾಂತಿ ಸಾಮ್ರಾಜ್ಯಶಾಹಿಯ ವಿರುದ್ಧ ವಿಶ್ವವ್ಯಾಪಿ ಹೋರಾಟಗಳ ಭಾಗ, ಈ ಶಕ್ತಿಗಳು ಸಮಾಜವಾದಕ್ಕಾಗಿ ಹೋರಾಡುತ್ತಿರುವ ವಿಶ್ವ ಶ್ರಮಜೀವಿ ವರ್ಗದ ಮಿತ್ರರು ಹೇಗೆ ಎಂದು ಲೆನಿನ್ ತೋರಿಸಿಕೊಟ್ಟರು. ಮೊದಲ ಮಹಾ ಯುದ್ಧದ ನಂತರದ ಘಟನೆಗಳು ಲೆನಿನ್‌ರ ವಿಶ್ಲೇಷಣೆಯನ್ನು ಪೂರ್ಣವಾಗಿ ಸಮರ್ಥಿಸಿವೆ.

ಶ್ರಮಜೀವಿಗಳ ಅಂತರ್‍ರಾಷ್ಟ್ರೀಯತೆ ಮಾರ್ಗದರ್ಶಕ ಹೋರಾಟ

ಮಾರ್ಕ್ಸ್‌ರ ಅಂತರಾಷ್ಟ್ರೀಯವಾದಿ ದರ್ಶನವನ್ನು ಮುಂದುವರೆಸಿದ ಲೆನಿನ್ ಶ್ರಮಜೀವಿ ವರ್ಗದ ಅಂತರಾಷ್ಟ್ರೀಯತೆಯ ನೀತಿಗಳನ್ನು ವಿಶದ ಪಡಿಸಿದರು. ಬಂಡವಾಳಶಾಹೀ ದೇಶಗಳಲ್ಲಿ ಕಾರ್ಮಿಕವರ್ಗದ ಹೋರಾಟಗಳ ದೊಡ್ಡ ಪ್ರವಾಹಗಳು ಮತ್ತು ವಸಾಹತುಗಳಲ್ಲಿ ದಮನಕ್ಕೊಳಗಾದ ಜನಗಳ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಸಾಮ್ರಾಜ್ಯಶಾಹಿಯ ವಿರುದ್ಧ ಅಂತರ್ರಾಷ್ಟ್ರೀಯ ಹೋರಾಟದ ಅಭಿನ್ನ ಅಂಗ ಎಂದು ತೋರಿಸಿದರು. ಅವರು ಸ್ಥಾಪಿಸಿದ ತೃತೀಯ ಅಂತರ್ರಾಷ್ಟ್ರೀಯ ದ್ವಿತೀಯ ಅಂತರ್ರಾಷ್ಟ್ರೀಯ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಬಡಿದ ಸುಧಾರಣಾವಾದ ಮತ್ತು ಸಾಮಾಜಿಕ ಸಂಕುಚಿತತೆಯ ರೋಗದ ವಿರುದ್ಧ ದೀರ್ಘ ಹೋರಾಟದ ಫಲವದು. ವಿಶ್ವಾದ್ಯಂತ ಶ್ರಮಜೀವಿ ವರ್ಗದ ಸಿದ್ಧಾಂತ ಹರಡಲು ಒಂದು ದೊಡ್ಡ ಕೊಡುಗೆ ನೀಡಿರುವುದು ಲೆನಿನ್ ರೂಪಿಸಿದ ಈ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ. ವಸಾಹತುಗಳಲ್ಲಿ, ಪೌರ್ವಾತ್ಯದಲ್ಲಿ ಕಮ್ಯುನಿಸ್ಟ್ ಆಂದೋಲನಗಳಿಗೆ ಬುನಾದಿ ಹಾಕಿದ ಇದು ಚೀಣಾ, ವಿಯೆಟ್ನಾಮ್, ಕೊರಿಯಾ ಮುಂತಾದೆಡೆ ಮಹಾನ್ ಪ್ರಜಾಪ್ರಭುತ್ವ ಕ್ರಾಂತಿಗಳ ಸಮಾಜವಾದದೆಡೆಗೆ ಮುನ್ನಡೆಯ ಬೀಜ ಬಿತ್ತಿತು.



ಬೋಲ್ಷೇವಿಕ್ ಪಕ್ಷದ ೯ನೇ ಮಹಾಧಿವೇಶನದ ಅಧ್ಯಕ್ಷ ಮಂಡಳಿಯಲ್ಲಿ, ಮಾರ್ಚ್ ೧೯೨೦


ಲೆನಿನ್ ಮಾರ್ಕ್ಸ್‌ವಾದದ ಕ್ರಾಂತಿಕಾರಿ ಶುದ್ಧತೆಯನ್ನು ರಕ್ಷಿಸಿದರು. ಪರಿಷ್ಕರಣವಾದ ಮಾರ್ಕ್ಸ್‌ವಾದವನ್ನು ದುರ್ಬಲಗೊಳಿಸದಂತೆ, ಎಡಪಂಥವಾದ ಅದನ್ನು ವಿಕೃತಗೊಳಿಸದಂತೆ ಅಂತಹ ಎಲ್ಲಾ ಪ್ರಯತ್ನಗಳ ವಿರುದ್ಧ ಕ್ರಿಥವಾಗಿ ಅವರು ಹೋರಾಡಿದರು. ಮಾರ್ಕ್ಸ್‌ವಾದವನ್ನು ತಾತ್ವಿಕವಾಗಿ ರಕ್ಷಿಸುವಲ್ಲಿ, ಅದನ್ನು ಶ್ರೀಮಂತಗೊಳಿಸುವಲ್ಲಿ ಅವರು ಬಹುದೊಡ್ಡ ಕೊಡುಗೆ ನೀಡಿದರು. ಶ್ರಮಜೀವಿ ವರ್ಗದ ಕ್ರಾಂತಿ ಮತ್ತು ಕಮ್ಯುನಿಸಂನ ಉದ್ದೇಶ ಸಾಧನೆಗೆ ಬದ್ಧವಾದ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಿಗೆ ಕಾರ್ಮಿಕ ವರ್ಗದ ಸಿದ್ಧಾಂತವನ್ನು ಕಾಪಾಡಲು ಲೆನಿನ್‌ರ ಸೈದ್ಧಾಂತಿಕ ಕೊಡುಗೆ ಮತ್ತು ಕಾರ್ಯತಃ ಹೋರಾಟ ಒಂದು ಸತತ ಮಾರ್ಗದರ್ಶನವಾಗಿದೆ.

ಶಾಂತಿಯುತ ಸಹಬಾಳ್ವೆ

ಲೆನಿನ್ ವಿಭಿನ್ನ ಸಾಮಾಜಿಕ ವ್ಯವಸ್ಥೆಗಳ ಪ್ರಭುತ್ವಗಳ ನಡುವೆ ಶಾಂತಿಯುತ ಸಹಬಾಳ್ವೆಯ ನೀತಿಗಳನ್ನು ಪ್ರತಿಪಾದಿಸಿದರು. ಸಮಾಜವಾದಿ ಪ್ರಭುತ್ವಗಳು ಶಾಂತಿಗಾಗಿ ಹಾಗೂ ಪರಮಾಣು ಯುದ್ಧದ ವಿರುದ್ಧ ಹೋರಾಟ ನಡೆಸುದುದರ ಬುನಾದಿ ಇದು. ವಿಶ್ವಶಾಂತಿ ಮತ್ತು ಸಮಾಜವಾದಿ ವ್ಯವಸ್ಥೆಯ ರಕ್ಷಣೆಯ ಜೀವಂತ ಹೋರಾಟಕ್ಕೆ ಜೀವ, ಚೈತನ್ಯ ತುಂಬಿರುವುದು ಈ ಲೆನಿನ್‌ವಾದೀ ನಿಲುವು. ಆದರೆ ವಿಭಿನ್ನ ಸಾಮಾಜಿಕ ವ್ಯವಸ್ಥೆಗಳ ನಡುವೆ ಶಾಂತಿಯುತ ಸಹಬಾಳ್ವೆಯನ್ನು ವರ್ಗ ಹೋರಾಟಕ್ಕೆ ಅಥವಾ ಸಾಮ್ರಾಜ್ಯಶಾಹಿಯ ವಿರುದ್ಧ ಸೆಟೆದಿರುವ ದಮನ ಪೀಡಿತ ಜನರ ಹೋರಾಟಕ್ಕೆ ವಿಸ್ತರಿಸಲು ಸಾಧ್ಯವಿಲ್ಲ.

ವಿಸ್ತರಿಸಿಕೊಂಡರು ಎಂದು ಹೇಳಿದರು. ಇದು ಲೆನಿನ್‌ವಾದೀ ಧೈರ್ಯದ ನಿಲುವು. ವಿಭಿನ್ನ ಸಾಮಾಜಿಕ ವ್ಯವಸ್ಥೆಗಳ ನಡುವೆ ಶಾಂತಿಯುತ ಸಹಬಾಳ್ವೆಯನ್ನು ವಿಶ್ವದಲ್ಲಿ ನಡೆಯುತ್ತಿರುವ ಹೋರಾಟಗಳ ಎದುರಿಟ್ಟು ಹೋಲಿಸುವುದು ಲೆನಿನ್‌ರ ದೃಷ್ಟಿಕೋನದ ಒಂದು ವಿಕೃತಿ.

ಹೊಸ ಮಾದರಿಯ ಪಕ್ಷದ ಶಿಲ್ಪಿ



ಒಂದು ಹೊಸ ತರದ ಪಕ್ಷವನ್ನು ಕಡೆದುನಿಲ್ಲಿಸಿದವರು ಲೆನಿನ್. ಕ್ರಾಂತಿಯ ದಾರಿಯನ್ನು ರೂಪಿಸಿ ಕಾರ್ಮಿಕವರ್ಗಕ್ಕೆ ನೇತೃತ್ವವನ್ನು ನೀಡಬೇಕಾದ ಮುಂಚೂಣಿ ಪಕ್ಷಕ್ಕೆ ಅಗತ್ಯವಾದ ಒಂದು ಕ್ರಾಂತಿಕಾರಿ ಸಂಘಟನಾ ಸಿದ್ಧಾಂತ ರೂಪಿಸಿದವರು. ಲೆನಿನ್ ದಮನದ ಮತ್ತು ಜಾಗತಿಕ ವ್ಯಾಪ್ತಿಯಲ್ಲಿ ನಡೆಯುವ ವ್ಯಾಪಕ ಸಾಧನಸಂಪನ್ನ ಆಧುನಿಕ ಬಂಡವಾಳಶಾಹಿ ಪ್ರಭುತ್ವದ ದೈತ್ಯ ಶಕ್ತಿಯನ್ನು ಎದುರಿಸಲು ಅದಕ್ಕೆ ಪ್ರತ್ಯುತ್ತರ ನೀಡಲು ಕಾರ್ಮಿಕ ವರ್ಗಕ್ಕೆ ಇರುವ ಏಕೈಕ ಅಸ್ತ್ರವಾದ ಸಂಘಟನೆಯನ್ನು ನೀಡಿದ ರೀತಿಯೆಂದರೆ ಪಕ್ಷದೊಳಗಿನ ಪ್ರಜಾಪ್ರಭುತ್ವ, ಕಟ್ಟುನಿಟ್ಟಾದ ಶಿಸ್ತು, ಟೀಕೆ ಮತ್ತು ಸ್ವಯಂಟೀಕೆಯ ಮೇಲೆ ನಿಂತ ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿ. ಈ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಗಳ ನೇತೃತ್ವದಲ್ಲಿದ್ದದ್ದು, ಹಳೆಯ ಪ್ರಭುತ್ವವನ್ನು ನಿರ್ನಾಮ ಮಾಡಿದ್ದು, ಸಮಾಜವಾದವನ್ನು ಕಟ್ಟಿ ಹೊಸದೊಂದು ಸಮಾಜದತ್ತ ಸಾಗುವ ದಾರಿ ಶೋಧಿಸಿದ್ದು ಈ ಲೆನಿನ್‌ವಾದೀ ಪಕ್ಷ. ವರ್ಗ ಪ್ರಜ್ಞೆಯ ಆಗರವಾದ ಒಂದು ನಿಜವಾಗಿಯೂ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವುದು ಹೇಗೆ, ಅಧಿಕಾರಶಾಹಿಯನ್ನು ಎದುರಿಸಿ ಸಮಾಜವಾದೀ ಪ್ರಭುತ್ವದ ವ್ಯವಹಾರಗಳಲ್ಲಿ ಎಲ್ಲಾ ಪೌರರು ಅತ್ಯಂತ ವ್ಯಾಪಕ ರೀತಿಯಲ್ಲಿ ಭಾಗವಹಿಸುವಂತೆ ಮಾಡುವುದು ಹೇಗೆ ಎಂಬ ಶ್ರೀಮಂತ ಅನುಭವವನ್ನು, ಪಕ್ಷದ ನೇತೃತ್ವದ ಪಾತ್ರ ಹಾಗೂ ಸಮಾಜವಾದಿ ಪ್ರಭುತ್ವ ರಚನೆಯ ಬಗ್ಗೆ ಲೆನಿನ್ನರು ತಮ್ಮ ಬೋಧನೆಗಳಲ್ಲಿ ಒದಗಿಸಿದ್ದಾರೆ. ಕೆಲವು ಸಮಾಜವಾದಿ ದೇಶಗಳಲ್ಲಿ ಪಕ್ಷದ ಪಾತ್ರದಲ್ಲಿ, ಪ್ರಭುತ್ವದ ನಿರ್ವಹಣೆಯಲ್ಲಿ ಹಲವಾರು ನ್ಯೂನತೆಗಳು, ವಿಕೃತಿಗಳು ಸೇರಿಕೊಂಡಿರುವ ಸಮಕಾಲೀನ ಪರಿಸ್ಥಿತಿಗಳಲ್ಲಿ ಲೆನಿನ್‌ರು ಬಿಟ್ಟುಹೋದ ಈ ಬಳುವಳಿಯನ್ನು ಸೃಜನಾತ್ಮಕವಾಗಿ ಅನ್ವಯಿಸಬೇಕು.

ಸಮಾಜವಾದ ಕಟ್ಟುವ ಕಠಿಣ ಹಾದಿಯಲ್ಲಿ

ಲೆನಿನ್ ಸಾವಪ್ಪುವವರೆಗಿನ ಆರು ವರ್ಷಗಳ ಅಲ್ಪಕಾಲಾವಧಿಯಲ್ಲಷ್ಟೆ ಹೊಸ ಸಮಾಜವಾದಿ ಪ್ರಭುತ್ವ, ಸೋವಿಯೆತ್ ಒಕ್ಕೂಟದ ಮುಖ್ಯಸ್ಥರಾಗಿದ್ದರು. ಈ ಅಲ್ಪಾವಧಿಯಲ್ಲಿ ಅವರು ಮಾರ್ಕ್ಸ್‌ವಾದದ ಬುನಾದಿಯ ಮೇಲೆ ಸಮಾಜವಾದವನ್ನು ಕಟ್ಟುವ ಕಲ್ಲುಮುಳ್ಳಿನ ಹಾದಿಯಲ್ಲಿ ಮುಂದೆ ಸಾಗುವುದು ಹೇಗೆ ಎಂದು ತೋರಿಸಿಕೊಟ್ಟರು. ವಿಶ್ವ ಸಾಮ್ರಾಜ್ಯ ಶಾಹಿಯಿಂದ ಸುತ್ತುವರಿಯಲ್ಪಟ್ಟ, ಅಂತರ್ಯುದ್ಧದ, ವಿದೇಶೀ ಬುಡಮೇಲು ಯತ್ನಗಳ ಬೆದರಿಕೆ ಎದುರಿಸುತ್ತಿದ್ದ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ಕಟ್ಟಲು ಮೂರ್ತ ಸನ್ನಿವೇಶದ ಮೂರ್ತ ಅಧ್ಯಯನದಿಂದ ಅವರಿಗೆ ಸಾಧ್ಯವಾಯಿತು. ಶ್ರಮಜೀವಿ ವರ್ಗದ ಸರ್ವಾಧಿಕಾರವನ್ನು ಪ್ರಯೋಗಿಸಿ ಅವರು ಆಗಷ್ಟೇ ಠಿಕಾಣಿ ಪುಕ್ತ ಮಾಡುತ್ತಿದ್ದ ಸೋವಿಯೆತ್ ಪ್ರಭುತ್ವದ ರಕ್ಷಣೆಯ ಹೋರಾಟಕ್ಕೆ ನೇತೃತ್ವ ನೀಡಿದರು. ಕಾರ್ಮಿಕ ರೈತ ಸಖ್ಯತೆಯನ್ನು ರೂಪಿಸಲು ಮತ್ತು ಒಂದು ಶಕ್ತಿಶಾಲಿ ಸೋವಿಯೆತ್ ಆರ್ಥಿಕವನ್ನು ಕಟ್ಟಲಿಕ್ಕೆ ಭೌತಿಕ ಸಂಪನ್ಮೂಲ ಒದಗಿಸಲು ಅವರು ಸರ್ಕಾರದ ಧೋರಣೆಗಳ ಸತತ ವಿಮರ್ಶೆ ನಡೆಸಿದರು. ಈ ಆರುವರ್ಷಗಳು ಒಬ್ಬ ಮೇಧಾವಿ ಮಾರ್ಕ್ಸ್‌ವಾದಿ ಮುತ್ಸದ್ದಿಯ ಸೃಜನಾತ್ಮಕ ಪ್ರಯತ್ನಗಳ ಅವಧಿ. ಲೆನಿನ್‌ವಾದಿ ವಿಧಾನಗಳ ಶ್ರೀಮಂತ ಪಾಠಗಳು. ಪಕ್ಷದೊಳಗೆ ನೇತೃತ್ವದ ಅವರ ಶೈಲಿ, ತಂತ್ರಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಬದಲಿಕೆ ಆದರೆ ಮೂಲಭೂತ ಅಂಶಗಳ ಮೇಲೆ ಒತ್ತು, ವಾಸ್ತವತೆಯನ್ನು ಗುರುತಿಸಿ ರಾಜಿಮಾಡಿಕೊಳ್ಳಲು ಅವರು (ಹೊಸ ಆರ್ಥಿಕ ನೀತಿ ಅಥವಾ ಎನ್.ಇ.ಪಿ. ಘಟ್ಟದಲ್ಲಿ ಕಂಡುಬಂದಂತೆ) ಸಿದ್ಧರಿರುತ್ತಿದ್ದುದು. ಅಂತರಾ ಧ್ಯೇಯತೆಗೆ ಎಂದೆಂದೂ ರಾಜಿಮಾಡಿಕೊಳ್ಳದ ಅವರ ಬದ್ಧತೆ ಇವೆಲ್ಲಾ, ಉತ್ಪಾದನಾ ಸಂಬಂಧಗಳಲ್ಲಿ ಸೂಕ್ತ ಬದಲಾವಣೆಗಳನ್ನು ತಂದು ಸಮಾಜವಾದವನ್ನು ನಿರಂತರವಾಗಿ ಹೆಚ್ಚೆಚ್ಚು ಪರಿಪೂರ್ಣಗೊಳಿಸುವುದು ಹೇಗೆ, ಈ ಬದಲಾವಣೆಗಳಲ್ಲಿ ಜನಸಮೂಹಗಳನ್ನು ಒಳಗೊಳ್ಳುವ ಬಗೆಯೇನು ಎಂಬ ಬಗ್ಗೆ ಅವರು ನೀಡಿದ ವಸ್ತುನಿಷ್ಠ ಪಾಠಗಳು. ಯಾವುದೇ ಒಂದು ಸಮಾಜದ ಅನುಭವವನ್ನು ನಕಲು ಮಾಡಿ ಸಮಾಜವಾದದ ರಚನೆಯ ಮಾರ್ಗವನ್ನು ಯಾಂತ್ರಿಕವಾಗಿ ಅನುಕರಿಸಲು ಸಾಧ್ಯವಿಲ್ಲ ಎಂಬ ಅಂಶದ ಮೇಲೆ ಲೆನಿನ್ ಸದಾ ವಿಶೇಷ ಒತ್ತು ನೀಡಿದರು. ಪೂರ್ವ ಯು[illegible]ದಲ್ಲಿ ಕ್ರಾಂತಿ-ವಿರೋಧಿ ಪ್ರವೃತ್ತಿಯ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದದೊಂದಿಗೆ ಲೆನಿನ್ನರನ್ನು ತ್ಯಜಿಸಿ ಬೆಂ[illegible] ಪಕ್ಷಗಳು ಈ ದೇಶಗಳಲ್ಲಿ ಅಧಿಕಾರಕ್ಕೆ ಬಂದಿವೆ. ಅವರು ಲೆನಿನ್‌ವಾದದ ಹೆಸರಿಗೆ ಮಸಿಬಳಿಯಲು ಸಾಧ್ಯವೇ ಇಲ್ಲ. ಈ ದೇಶಗಳಲ್ಲಿ ಕಳಂಕ ಬಂದಿರುವುದು ಸಮಾಜ ವಾದವನ್ನು ಕಟ್ಟುವ ಲೆನಿನ್‌ವಾದಿ ಬೋಧೆಗಳ ವಿಕೃತಿಗಳ ಮೇಲೆ. ಸಮಾಜವಾದ ಅಥವಾ ಮಾರ್ಕ್ಸ್‌ವಾದ ಲೆನಿನ್‌ವಾದದ ಮೇಲಲ್ಲ.



ಕೆಂಪು ಚೌಕದಲ್ಲಿ ಮೇದಿನ ಭಾಷಣ. ೧೯೧೯

ಕ್ರಾಂತಿಕಾರಿ ಸತ್ವವನ್ನು ಎತ್ತಿ ಹಿಡಿಯುತ್ತೇವೆ

ಸಿ.ಪಿ.ಐ.(ಎಂ) ಲೆನಿನ್‌ವಾದದ ಕ್ರಾಂತಿಕಾರಿ ಸತ್ವವನ್ನು ಎತ್ತಿಹಿಡಿಯುತ್ತದೆ. ಸಾಮ್ರಾಜ್ಯಶಾಹಿ ಎಂಬುದು ಬಂಡವಾಳಶಾಹೀ ವರ್ಗ ಶೋಷಣೆಯ ಒಂದು ವಿಶ್ವವ್ಯಾಪೀ ವ್ಯವಸ್ಥೆಯೆಂಬ ವಿಶ್ಲೇಷಣೆಯನ್ನು, ಪ್ರಭುತ್ವ ಗುತ್ತೇದಾರಿ ಬಂಡವಾಳಶಾಹಿಯ ಚಲನ ದಿಕ್ಕಿನ ವಿಶ್ಲೇಷಣೆಯನ್ನು, ಪ್ರಭುತ್ವ ಸ್ವರೂಪದ ವಿಶ್ಲೇಷಣೆಯನ್ನು ರಣನೀತಿ ಮತ್ತು ತಂತ್ರದ ಬಗ್ಗೆ ಲೆನಿನ್‌ವಾದಿ ನಿಲುವನ್ನು, ಶ್ರಮಜೀವಿ ವರ್ಗದ

ಪುಟ 21→



ಶರತ್‌ಚಂದ್ರ

ಪೆಟ್ರೋಗ್ರಾಡ್‌ನತ್ತ ರೈಲ್ವೇ ಕಾರ್ಮಿಕನ ಮಾರುವೇಷದಲ್ಲಿ, 1917

ಮಹಾನ್ ಅಕ್ಟೋಬರ್ ಕ್ರಾಂತಿಯಲ್ಲಿ ಬೆಳಗಿದ ಮಹಾನ್ ಮಾರ್ಕ್ಸ್‌ವಾದಿ - ಲೆನಿನ್


"ಕಾಮ್ರೇಡ್ ರಷ್ಯದಲ್ಲಿ ಕ್ರಾಂತಿ ಆಗಿದೆ" ಬ್ರೊನ್‌ಸ್ಕಿ ಎಂಬ ಕಾಮ್ರೇಡ್ ಬಂದು ಒಂದೇ ಉಸಿರಿನಲ್ಲಿ ಹೇಳಿದ. ಲೆನಿನ್ ರಾತ್ರಿ ಊಟದ ನಂತರ ಅಧ್ಯಯನ ದಲ್ಲಿ ತೊಡಗಿದ್ದಾರೆ. ಮೊದಲನೆ ಮಹಾ ಯುದ್ಧದ ಆರಂಭಾನಂತರ ಬೋಲ್ಶೆವಿಕ್ ಪಕ್ಷದ ಮೇಲಿನ ದಮನದ ಫಲವಾಗಿ ಸ್ವಿಟ್ಸರ್ ಲ್ಯಾಂಡ್ (ಇದು ಯುದ್ಧದಲ್ಲಿ ಭಾಗವಹಿಸದ ತಟಸ್ಥ ದೇಶ) ನಲ್ಲಿರುವ ಝೂರಿಚ್‌ನ ತಮ್ಮ ಮನೆಯಲ್ಲಿ. ರಷ್ಯದಲ್ಲಿ ಫೆಬ್ರವರಿಯಲ್ಲಿ ಝಾರನನ್ನು ಕಿತ್ತೊಗೆದು ಪ್ರಜಾಪ್ರಭುತ್ವ ಕ್ರಾಂತಿ ಆದಾಗ ಲೆನಿನ್ ರಷ್ಯದಲ್ಲೇ ಇರಲಿಲ್ಲ. ಆದರೆ ಫೆಬ್ರವರಿ ಕ್ರಾಂತಿಯನ್ನು ಮುಂದಕ್ಕೆ ಒಯ್ದು ಅಕ್ಟೋಬರ್ ಕ್ರಾಂತಿಯನ್ನು ನಡೆಸು ವಲ್ಲಿ ಲೆನಿನ್‌ರ ಪಾತ್ರ ಅವರ ಕ್ರಾಂತಿಕಾರಿ ಜೀವನದಲ್ಲೇ ರೋಮಾಂಚಕಾರಿ ಅಧ್ಯಾಯ ಕಾರ್ಮಿಕ ಕ್ರಾಂತಿಯ ಕಾರ್ಯ ನೀತಿ ಮತ್ತು ಕಾರ್ಯತಂತ್ರಗಳನ್ನು ಹೇಗೆ ರೂಪಿಸಬೇಕು ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿದರು. ಈ ಎಂಟು ತಿಂಗಳುಗಳಲ್ಲಿ ಲೆನಿನ್ ಪಕ್ಷ ಕಾರ್ಮಿಕ ವರ್ಗವನ್ನು ನಡೆಸುವುದರಲ್ಲಿ ತೋರಿಸಿದ ಚಾಕಚಕ್ಯತೆ, ವೇಗವಾಗಿ ಬೆಳೆಯುತ್ತಿದ್ದ ಪರಿಸ್ಥಿತಿಗೆ ಅನುಗುಣವಾಗಿ ತೋರಿದ ಪ್ರತಿಕ್ರಿಯೆ ಎಲ್ಲಾ ಕಾಲಕ್ಕೂ ಮಾರ್ಗದರ್ಶಕ.

ನರಕದ ಮೂಲಕ ಹೋಗಬೇಕಾದರೂ ಸರಿ, ರಷ್ಯಕ್ಕೆ ತಕ್ಷಣ ವಾಪಾಸಾಗಬೇಕು

ಫೆಬ್ರವರಿ ಕ್ರಾಂತಿಯ ಮಹತ್ವ, ಅದು ಒಡ್ಡಿದ್ದ ಸವಾಲುಗಳನ್ನು, ಅವಕಾಶಗಳನ್ನು ಲೆನಿನ್ ತಕ್ಷಣ ಗ್ರಹಿಸಿದರು. ತಕ್ಷಣ ರಷ್ಯಕ್ಕೆ ವಾಪಸಾಗಬೇಕು ಎಂದು ನಿರ್ಧರಿಸಿದರು. ಫೆಬ್ರುವರಿ ಕ್ರಾಂತಿ ಸುದ್ದಿ ಕೇಳಿದಾಗಿಂದ ಲೆನಿನ್ ನಿದ್ದೆಗೆಟ್ಟು ರಷ್ಯಕ್ಕೆ ಹಿಂತಿರುಗುವುದು ಹೇಗೆ ಎಂದು ಯೋಚಿಸತೊಡಗಿದರು. ಬ್ರಿಟನ್, ಫ್ರಾನ್ಸ್‌ನ ಮಿತ್ರಕೂಟದ ಯಾವ ದೇಶಗಳೂ ಬೊಲ್ಶೆವಿಕರಿಗೆ ವೀಸಾ ಕೊಡಲು ತಯಾರಿರಲಿಲ್ಲ. ಆದರೆ 'ಶತ್ರು ದೇಶ'ವಾದ ಜರ್ಮನಿಯ ಮಿತ್ರಕೂಟ ದೇಶಗಳು ವೀಸಾ ಕೊಡಲು ಒಪ್ಪಬೇಕೆಂದು ತರ್ಕಿಸಿದ ಲೆನಿನ್ ತಕ್ಷಣ ಈ ಬಗ್ಗೆ ಸ್ವಿಸ್ ಸಮಾಜವಾದಿ ಪಕ್ಷದ ನಾಯಕರ ಮೂಲಕ ಕಾರ್ಯಪ್ರವೃತ್ತರಾದರು. 'ಶತ್ರು ದೇಶ'ದ ಮೂಲಕ ತಾಯ್ನಾಡಿಗೆ ಹಿಂತಿರುಗುವುದನ್ನು ಮೆನ್ಶೆವಿಕರು, ಸೋಶಿಯಲಿಸ್ಟ್ ರಿವಲ್ಯೂಶನರಿ (ಎಸ್.ಆರ್)ಗಳು 'ದೇಶಭಕ್ತಿ'ಯ ಆಧಾರದ ಮೇಲೆ ಬಲವಾಗಿ ವಿರೋಧಿಸಿದರು. ಹಲವು ಬೊಲ್ಶೆವಿಕರಿಗೂ 'ದೇಶ ದ್ರೋಹ'ದ ಆರೋಪ ಬರಬಹುದೆಂಬ ಆತಂಕ ವಿತ್ತು. ಆದರೆ ಲೆನಿನ್, ಎಲ್ಲರಿಗೂ ತಾಯ್ನಾಡಿಗೆ ಮರಳಿ ಕ್ರಾಂತಿಯ ಬೆಳವಣಿಗೆಯಲ್ಲಿ ಭಾಗವಹಿಸಲು ಇರುವುದು ಇದು ಒಂದೇ ದಾರಿ ಎಂದು ತಿಳಿ ಹೇಳಿದರು. ಲೆನಿನ್‌ರ ಮಾತುಗಳಿಗೆ ಒಪ್ಪಿದ ೩೨ ಜನ ಕ್ರಾಂತಿಕಾರಿಗಳು (ಅದರಲ್ಲಿ ೧೯ ಬೋಲ್ಶೆವಿಕರು) ಜರ್ಮನಿ, ಸ್ವೀಡನ್, ಫಿನ್ಲೆಂಡ್ (ಆಗ ಅದು ರಷ್ಯನ್ ಸಾಮ್ರಾಜ್ಯದ ಭಾಗವಾಗಿತ್ತು) ಮೂಲಕ ಪೆಟ್ರೋಗ್ರಾಡ್ (ಆಗಿನ ರಾಜಧಾನಿ, ಈಗಿನ ಹೆಸರು ಲೆನಿನ್‌ಗ್ರಾಡ್)ಗೆ ವಾಪಸಾದರು. ತಾಯ್ನಾಡಿಗೆ ವಾಪ ಸಾಗಲು ಸಾಮ್ರಾಜ್ಯಶಾಹಿಗಳ ನಡುವಣ ಬಿಕ್ಕಟ್ಟನ್ನು

ಮಹಾನ್ ಅಕ್ಟೋಬರ್ ಕ್ರಾಂತಿಯಲ್ಲಿ ಮಹಾನ್ ಮಾರ್ಕ್ಸ್‌ವಾದಿ ಲೆನಿನರು ಮಹತ್ವದ ಕ್ರಾಂತಿಕಾರಿಯಾಗಿ ಬೆಳಗುತ್ತಾರೆ. ಯಾವಾಗಲೂ ಜನರ ಮೇಲೆ ಕಣ್ಣಿಟ್ಟು ಅವರ ಪ್ರತಿ ಚಲನ ವಲನವನ್ನು ಗಮನಿಸುತ್ತಾ ಅವರ ಹೃದಯದ ಆಸೆ ಆಕಾಂಕ್ಷೆಗಳಿಗೆ ನೇರ ಧ್ವನಿಯಾಗುತ್ತಾ ಕಂಗೊಳಿಸುವ ಲೆನಿನ್ ಪ್ರತಿಯೊಂದು ಘಟ್ಟದಲ್ಲಿಯೂ ತಮ್ಮ ಕಾರ್ಯ ತಂತ್ರವನ್ನು ಬದಲಾಯಿಸುತ್ತಾ ಅತ್ಯಮೂಲ್ಯಕ್ಷಣಗಳಲ್ಲಿ ಪಟ್ಟು ಹಿಡಿದು ವಾದಿಸುತ್ತಾ ಅಕ್ಟೋಬರ್ ಕ್ರಾಂತಿಯನ್ನು ಯಶಸ್ವಿನಿಂದ ಯಶಸ್ಸಿನೆಡೆಗೆ ಮುನ್ನಡೆಸುತ್ತಾರೆ.

ವಿಶ್ವದಲ್ಲೇ ಅಪ್ರತಿಮನಾದ ಈ ಕ್ರಾಂತಿ ಕಾರಿಯ ತಂತ್ರಗಳ ನಿರೂಪಣೆಗೆ ಪಕ್ಷವನ್ನು ಕಟ್ಟಿದಾಗಿನ ದಿನಗಳಿಂದ ಹಿಡಿದು ಸಮಾಜವಾದಿ ಕ್ರಾಂತಿಯನ್ನು ಉಳಿಸುವ ಅಂತರ್ಯುದ್ಧ ನಂತರದಲ್ಲಿ ಸಮಾಜವಾದದ ನಿರ್ಮಾಣಕ್ಕೆ ನೇತೃತ್ವ ಕೊಡುವ ಎಲ್ಲಾ ದಿನಗಳಿಂದ ಅಸಂಖ್ಯ ಉದಾಹರಣೆಗಳನ್ನು ಕೊಡಬಹುದು. ಒಂದು ಯುಗದಿಂದ ಮತ್ತೊಂದು ಯುಗಕ್ಕೆ ದಾಪುಗಾಲು ಹಾಕಿದ ಆ ಅಪೂರ್ವ ಎಂಟು ತಿಂಗಳುಗಳಲ್ಲಿನ ಅವರ ತಂತ್ರ ನಿರೂಪಣೆಯ ವಿವರಣೆಯಿಂದ ಇದನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ. ಎಷ್ಟು ಬಣ್ಣಿಸಿದರೂ ಮುಗಿಯಲಾರದ ಈ ಅಪೂರ್ವ ಕ್ರಾಂತಿ ಕಾರಿಯ ಬಗ್ಗೆ ನಮ್ಮ ಸಂಗಾತಿಗಳು ನೇರವಾಗಿ ಅವರು ಬರೆದುದನ್ನೇ ಓದಿ ತಿಳಿಯಬೇಕು.



ಶಾಲಾ ವಿದ್ಯಾರ್ಥಿ ೧೮೯೧

ಲೆನಿನ್ ಉಪಯೋಗಿಸಿಕೊಂಡಿದ್ದರು. ಜರ್ಮನಿಯ ಮೂಲಕ ವಾಪಸಾಗುವ 'ದೇಶದ್ರೋಹ'ವನ್ನು ಬಲವಾಗಿ ವಿರೋಧಿಸಿದ ಸುಮಾರು ೨೦೦ ಜನ ರಷ್ಯನ್ ಕ್ರಾಂತಿಕಾರಿಗಳು ಅದೇ ದಾರಿಯಲ್ಲಿ ರಷ್ಯಕ್ಕೆ ಹಿಂತಿರುಗಬೇಕಾಯಿತು. ದಾರಿಯಲ್ಲೇ ಸ್ವೀಡನ್‌ನಲ್ಲಿ ಲೆನಿನ್ ಅವರನ್ನು ಕೊಲೆ ಮಾಡಬೇಕೆಂಬ ಪಿತೂರಿ ನಡೆದಿತ್ತು ಎಂದು ಆಮೇಲೆ ತಿಳಿದು ಬಂತು.

ಪೆಟ್ರೋಗ್ರಾಡ್‌ಗೆ ವಾಪಸಾಗುವ ಮೊದಲೇ ಲೆನಿನ್ ಕ್ರಾಂತಿಯ ಮುನ್ನಡೆ, ಬೋಲ್ಶೆವಿಕ್ ಕಾರ್ಯತಂತ್ರಗಳ ಬಗ್ಗೆ ವಿವರವಾದ ಪತ್ರಗಳನ್ನು ಬರೆದರು. ಬೋಲ್ಶೆವಿಕ್ ಕೇಂದ್ರ ಸಮಿತಿಯ ರಷ್ಯನ್ ವಿಭಾಗಕ್ಕೆ ಇದು "Letters from A Far" (ದೂರ ದೇಶದ ಪತ್ರಗಳು) ಎಂದೇ ಪ್ರಸಿದ್ಧವಾಗಿದೆ. ೧೯೧೬ ಕೊನೆ ಅಥವಾ ೧೯೧೭ರಲ್ಲಿ ರಷ್ಯದಲ್ಲಿ ಜನ ದಂಗೆ ಏಳಬಹುದು ಎಂದು ಲೆನಿನ್ ಆಗಾಗ ಹೇಳುತ್ತಲೇ ಇದ್ದರು. ಹಲವು ಕ್ರಾಂತಿಕಾರಿಗಳು (ಬೋಲ್ಶೆವಿಕರೂ ಸೇರಿದಂತೆ) ಇದನ್ನು ಊಹಿಸಿಯೇ ಇರಲಿಲ್ಲ. ಲೆನಿನ್ ಕೂಡಲೇ ಮುಂದಿನ ಕಾರ್ಯತಂತ್ರಗಳನ್ನು ರೂಪಿಸುವುದರಲ್ಲಿ ನಿರತರಾದರು. ಬೋಲ್ಶೆವಿಕರು ತಾತ್ಕಾಲಿಕ ಸರ್ಕಾರದಲ್ಲಿ ಯಾವುದೇ ವಿಶ್ವಾಸವನ್ನಿಡ ಕೂಡದು ಸಶಸ್ತ್ರ ಹೋರಾಟಕ್ಕೆ ತಯಾರಿ ನಡೆಸಬೇಕು. ಸಶಸ್ತ್ರ ಹೋರಾಟದ ಮೂಲಕ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುಂದಿನ ಹಂತವಾದ ಸಮಾಜವಾದಿ ಕ್ರಾಂತಿಯ ಹಂತಕ್ಕೆ ಕೊಂಡೊಯ್ಯಬೇಕು. ಝಾರನನ್ನು ಕಿತ್ತೊಗೆದದ್ದು ಕ್ರಾಂತಿಯ ಕೊನೆಯ ಕೆಲಸವಲ್ಲ, ಸಮಾಜವಾದಿ ಕ್ರಾಂತಿಯ ಆರಂಭವಷ್ಟೇ ಎಂದರು. ಸಾಮ್ರಾಜ್ಯಶಾಹಿ ಹಂತದಲ್ಲಿ ಬಂಡವಾಳಶಾಹಿ ಕೊಂಡಿ ದುರ್ಬಲವಾಗಿದ್ದ ಕಡೆ ಮುರಿಯುತ್ತದೆ. ಅಂತಹ ಒಂದು ದೇಶದಲ್ಲಿ ಸಮಾಜವಾದಿ ಕ್ರಾಂತಿ ಸಾಧ್ಯ. ಅದು ಹಿಂದುಳಿದ ರಷ್ಯದಲ್ಲಿ ನಡೆಯುತ್ತದೆ ಎಂಬ ಕಣ್ಣೋಟದ ನೇರ ಪರಿಣಾಮವೇ ಲೆನಿನ್‌ರ ವಿಶ್ವಾಸ. ಆದರೆ ಅವರು ವಿಶ್ವಾಸಕ್ಕೆ ಅಂಟಿಕೊಳ್ಳಲಿಲ್ಲ. ಪರಿಸ್ಥಿತಿ ಬದಲಾದಂತೆ ತಮ್ಮ ಗ್ರಹಿಕೆಯನ್ನು ಬದಲಾಯಿಸುತ್ತಾ ಹೋದರು. ಅದಕ್ಕೆ ಸ್ಪಂದಿಸುತ್ತಾ ಹೋದರು.

ಏಪ್ರಿಲ್ ೩ಕ್ಕೆ ಪೆಟ್ರೋಗ್ರಾಡ್‌ಗೆ ವಾಪಸಾದ ಲೆನಿನ್‌ಗೆ ಕಾರ್ಮಿಕ ವರ್ಗ, ಬೋಲ್ಶೆವಿಕ್ ಪಕ್ಷ ಅಭೂತಪೂರ್ವ ಸ್ವಾಗತ ನೀಡಿತು. ಕಿವಿಮಾತು ಮೂಲಕ ಲೆನಿನ್ ಆಗಮನವನ್ನು ತಿಳಿದಿದ್ದ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಅಷ್ಟಲ್ಪ ಸಮಯದಲ್ಲಿ ಕಾರ್ಮಿಕರು, ಸೈನಿಕರು, ನೌಕಾ ಸೈನಿಕರು ಪೆರೇಡ್ ಸಹ ಏರ್ಪಡಿಸಿದ್ದರು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಾರ್ಮಿಕವರ್ಗ, ಪಕ್ಷ ಲೆನಿನ್‌ರ ನಿರ್ದೇಶನಕ್ಕಾಗಿ ಹಾತೊರೆಯುತ್ತಿತ್ತು.

"ಎಲ್ಲಾ ಅಧಿಕಾರಗಳು ಸೋವಿಯತ್‌ಗಳಿಗೆ"

ಪೆಟ್ರೋಗ್ರಾಡ್‌ಗೆ ವಾಪಸಾದ ಕೂಡಲೇ ಲೆನಿನ್ ರಷ್ಯದ ರಾಜಕೀಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಆಮೇಲೆ 'ಏಪ್ರಿಲ್ ಸಿದ್ಧಾಂತ' ಎಂದು ಪ್ರಸಿದ್ಧವಾದ ಕ್ರಾಂತಿಕಾರಿ ಕಾರ್ಯತಂತ್ರ ನಿರೂಪಿಸಿದರು. ಆಗ ಸೋವಿಯತ್‌ಗಳ ಅಖಿಲ ರಷ್ಯಾ ಸಮ್ಮೇಳನ ನಡೆಯುತ್ತಿತ್ತು. ಸೋವಿಯತ್‌ಗಳು ಝಾರನನ್ನು ಕಿತ್ತೊಗೆದ ಕಾರ್ಮಿಕರು, ಸೈನಿಕರು, ರೈತರು ರಚಿಸಿಕೊಂಡ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಸಂಘಟನೆಗಳಾಗಿದ್ದವು. ಈ ಸಮ್ಮೇಳನದ ಬೋಲ್ಶೆವಿಕ್ ವಿಭಾಗವನ್ನು ಸಂಬೋಧಿಸುತ್ತಾ ಲೆನಿನ್ ಮೊದಲ ಬಾರಿಗೆ ಇದನ್ನು ಮಂಡಿಸಿದರು.

ಫೆಬ್ರವರಿ ಕ್ರಾಂತಿಯ ನಂತರ ರಷ್ಯದಲ್ಲಿ 'ದ್ವಂದ್ವ ಅಧಿಕಾರ' (Dual Power) ಅಸ್ತಿತ್ವಕ್ಕೆ ಬಂದಿದೆ. ಒಂದು ಕಡೆ ಸಶಸ್ತ್ರ ಸೈನಿಕರು, ಕಾರ್ಮಿಕರು ರೈತರ ಸೋವಿಯಟ್‌ಗಳು ಅಧಿಕಾರ ಹೊಂದಿದ್ದರೆ. ಇನ್ನೊಂದು ಕಡೆ ಬಂಡ ವಾಳಶಾಹಿ ಬೋಲ್ಶೆವಿಕ್ ಸಮ್ಮಿಶ್ರ ತಾತ್ಕಾಲಿಕ ಸರ್ಕಾರ. ತಾತ್ಕಾಲಿಕ ಸರ್ಕಾರ ಬಂಡವಾಳಶಾಹಿ ಹಿಡಿತದಲ್ಲಿದ್ದು, ಅದು ಜನತೆಗೆ ಶಾಂತಿ, ಆಹಾರ ಮತ್ತು ಭೂಮಿ ಒದಗಿಸುವುದಿಲ್ಲ. ಆದ್ದರಿಂದ ಈ ಸರ್ಕಾರದ ಮೇಲೆ ಹುಸಿ ಭರವಸೆಗಳನ್ನಿಟ್ಟುಕೊಳ್ಳಕೂಡದು. ಸಶಸ್ತ್ರ ಸೋವಿಯತ್‌ಗಳ

"ರಷ್ಯನ್ ರೈತ ಕಾರ್ಮಿಕರಿಗೆ ಮಕ್ಕಳೇ ಆಸ್ತಿ!!"

1917 ಜುಲೈನಲ್ಲಿ ಅಲ್ಲಿನ ಪ್ರಭುತ್ವ ಬೋಲ್ಶೆವಿಕ್ ಪಕ್ಷದ ಮೇಲೆ ದಮನ ಆರಂಭಿಸಿತು. ಲೆನಿನ್‌ರ ಹೆಸರಲ್ಲಿ ಅರೆಸ್ಟ್ ವಾರೆಂಟ್ ಹೊರಟಿತು. ಆಗ ಕೇಂದ್ರ ಸಮಿತಿ ಪೆಟ್ರೋಗ್ರಾಡ್‌ಗೆ ಹತ್ತಿರವಿರುವ ರಾಜ್‌ಲಿವ್ ಎಂಬಲ್ಲಿ ಯಮೆಲ್ಯಾನೋವ್ ಎಂಬ ಕಾರ್ಖಾನೆದಾರನ ಮನೆಯಲ್ಲಿ ಲೆನಿನ್ ತಲೆಮರೆಸಿಕೊಂಡಿರಬೇಕೆಂದು ನಿರ್ಧರಿಸಿತು. ಯಮೆಲ್ಯಾನೋವ್ ಹಳೆ ಬೋಲ್ಶೆವಿಕ್. ಆತ ಮನೆ ಕಟ್ಟುವಾಗಲೇ ಎರಡು ಅಡಿಪಾಯ ಇರುವ ಮನೆ ಕಟ್ಟಿದ್ದ. ಒಂದು ನಿಜವಾದ ಅಡಿಪಾಯ. ಇನ್ನೊಂದು ಪಕ್ಷದ ಪುಸ್ತಕಗಳು, ದಾಖಲೆಗಳನ್ನು ಬಚ್ಚಿಡಲು ಬಳಸಬಹುದಾದ ಅಡಿಪಾಯ. ಯಮೆಲ್ಯಾನೋವ್‌ಗೆ ೭ ಜನ ಗಂಡು ಮಕ್ಕಳು. ಯಮೆಲ್ಯಾನೋವ್ ಬಗ್ಗೆ ಲೆನಿನ್‌ರಿಗೆ ಕೇಂದ್ರ ಸಮಿತಿ ಎಲ್ಲವನ್ನೂ ತಿಳಿಸಿತ್ತು. ಮಕ್ಕಳ ಬಗ್ಗೆ ಬಿಟ್ಟು! ಈ ದೊಡ್ಡ ಕುಟುಂಬದ ಬಗ್ಗೆ ಲೆನಿನ್ ವಿಚಾರಿಸಿದಾಗ ಯಮೆಲ್ಯಾನೋವ್ ಹೇಳಿದ "ಕಾಮ್ರೇಡ್, ರಷ್ಯನ್ ಕಾರ್ಮಿಕ-ರೈತರಿಗೆ ಮಕ್ಕಳೇ ಆಸ್ತಿ. ಬೇರೇನೂ ಆಸ್ತಿ ಇಲ್ಲ" ಎಂದ. ಆದರೆ ಈ ಆಸ್ತಿ ಲೆನಿನ್‌ರ ಭೂಗತ ಜೀವನಕ್ಕೆ ನಿಜವಾಗಿಯೂ ಪ್ರಯೋಜನಕಾರಿಯಾಗಿತ್ತು. ಲೆನಿನ್ ಪೆಟ್ರೋಗ್ರಾಡ್‌ನಿಂದ ಪ್ರಕಟವಾಗುವ ಎಲ್ಲಾ ದೈನಿಕ ಪತ್ರಿಕೆಗಳನ್ನು ಗಮನವಿಟ್ಟು ಓದುತ್ತಿದ್ದರು. ಇಂತಹ ೨೦ - ೨೫ ಪತ್ರಿಕೆಗಳನ್ನು ಯಮೆಲ್ಯಾನೋವ್ ಲೆನಿನ್‌ರಿಗೆ ದಿನಾ ಒದಗಿಸಬೇಕಾಗಿತ್ತು. ಆದರೆ ದಿನಾ ಇಷ್ಟೊಂದು ಪತ್ರಿಕೆಗಳನ್ನು ಒಬ್ಬನೇ ಕೊಂಡುಕೊಂಡು ಬರುವುದು ಕೆರೆನ್ಸ್ಕಿ ಸರಕಾರದ ಗುಪ್ತಚಾರರಿಗೆ ಅನುಮಾನ ನೀಡುವಂತಿತ್ತು. ಕುಟುಂಬದ ೯ ಜನ ಸದಸ್ಯರು ೨-೩ ಪತ್ರಿಕೆಗಳನ್ನು ಬೇರೆ ಬೇರೆ ಸಮಯದಲ್ಲಿ ಹೋಗಿ ಕೊಂಡುಕೊಂಡು ಬರುತ್ತಿದ್ದರು.

ಲೆನಿನ್ ಹುಲ್ಲು ಶೇಖರಿಸುವ ಕೃಷಿ ಕಾರ್ಮಿಕನಾಗಿ!

ಲೆನಿನ್ ಇನ್ನೂ ಪೆಟ್ರೋಗ್ರಾಡ್‌ನ ಹತ್ತಿರದಲ್ಲಿರುವ ರಾಝ್ಲೀವ್‌ನಲ್ಲಿ ಬೋಲ್ಶೆವಿಕ್ ಯೆಮೆಲ್ಯನೋವ್ ಮನೆಯಲ್ಲಿ ತಲೆಮರೆಸಿಕೊಂಡಿದ್ದರು. ಆದರೆ ಗುಪ್ತಚರರ ಚಟುವಟಿಕೆ ಜೋರಾಗಿದ್ದು ಬೋಲ್ಶೆವಿಕ್ ಕೇಂದ್ರ ಸಮಿತಿ, ಇನ್ನೂ ಸುರಕ್ಷಿತ ಸ್ಥಾನ ಒದಗಿಸಬೇಕೆಂದು ಯೆಮೆಲ್ಯನೋವ್‌ಗೆ ಹೇಳಿತು.

ಆಗ ರಾಝ್ಲೀವ್‌ನ ಹತ್ತಿರವಿರುವ ಸರೋವರದ ತೀರದಲ್ಲಿರುವ ಹುಲುಸಾದ ಹುಲ್ಲು ಬೆಳೆಯುವ ಪ್ರದೇಶಗಳನ್ನು ಹಂಚಿಕೊಡುತ್ತಿದ್ದರು. ಸಾಮಾನ್ಯವಾಗಿ ರಷ್ಯನ್ ರೈತರು ಇಂತಹ ಪ್ರದೇಶಗಳಲ್ಲಿ ಹುಲ್ಲು ಶೇಖರಿಸುತ್ತಿದ್ದರು. ಇದಕ್ಕೆ ಫಿನ್‌ಲ್ಯಾಂಡ್‌ನಿಂದ ಬರುವ ಕೃಷಿ ಕೂಲಿಕಾರರನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಇಂತಹುದೇ ಒಂದು ಪ್ರದೇಶವನ್ನು ಹಂಚಿಕೊಂಡು. ಯೆಮೆಲ್ಯನೋವ್ ಗುಡಿಸಲು ಹಾಕಿದ ತಾನು ದನ ಕೊಳ್ಳುವೆ ಆದಕ್ಕಾಗಿ ಹುಲ್ಲು ಬೇಕಾಗಿದೆ. ಇದಕ್ಕಾಗಿ ಹುಲ್ಲು ಶೇಖರಿಸಲು ಒಬ್ಬ ಫಿನ್‌ಲ್ಯಾಂಡ್‌ನ ಕೃಷಿ ಕಾರ್ಮಿಕನನ್ನು ನೇಮಿಸಿದ್ದೇನೆ ಎಂದು ಸುದ್ದಿ ಹರಡಿದ. ಒಂದು ತಿಂಗಳ ಕಾಲ ಲೆನಿನ್ ಫಿನ್‌ಲ್ಯಾಂಡ್‌ನ ಕೃಷಿಕಾರ್ಮಿಕನಂತೆ ಆ ಜಾಗದಲ್ಲಿ ಹಾಕಿದ ಸಣ್ಣ ಗುಡಿಸಲಿನಲ್ಲಿ 'ಹುಲ್ಲು ಶೇಖರಿಸುವನಾಗಿ" ಕಳೆದರು.

ಪರಿಸ್ಥಿತಿ ಇನ್ನು ವಿಕೋಪಕ್ಕೆ ಹೋದಾಗ ಲೆನಿನ್‌ರನ್ನು ಫಿನ್‌ಲ್ಯಾಂಡಿಗೆ ವರ್ಗಾಯಿಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿತು ಇದಕ್ಕೆ ಬೇಕಾದ ತಯಾರಿ ನಡೆಸಿ ಹೊರಡುವ ದಿನ ಒಂದು ತಮಾಷೆ ನಡೆಯಿತು. ಇನ್ನೇನು ಹೊರಡಬೇಕು ಎನ್ನುವದರಲ್ಲಿ 'ಭದ್ರತಾ ಡ್ಯೂಟಿ' ಮೇಲೆ ನಿಂತಿದ್ದ ಯೆಮೆಲ್ಯನೋವ್‌ನ ಮಗ ಸೀಟಿ ಹೊಡೆದ. ಲೆನಿನ್ ತನ್ನನ್ನು ಕರೆದೊಯ್ಯಲು ಬಂದಿರುವ ಸಂಗತಿ ಇರಬಹುದು ಎಂದುಕೊಂಡ ಹೊರಗೆ ಹೋದರು. ಆದರೆ ಅಲ್ಲಿ ಕಂಡು ಬಂದದ್ದು ಒಬ್ಬ ಅಪರಿಚಿತ ತಂದೆ - ಮಗನನ್ನು ಕೂಡಲೆ ಲೆನಿನ್ ಗುಡಿಸಲಿಗೆ ವಾಪಸಾದರು. ಬಂದಿದ್ದವರು ಯೆಮೆಲ್ಯನೋವ್ ನೆರೆಯವನು. ತನಗೂ ಹುಲ್ಲು ಶೇಖರಿಸುವ ಕೆಲಸ ಇದೆ, ನಿನ್ನ ಕೃಷಿ ಕಾರ್ಮಿಕನನ್ನು ನನಗೆ ಕೊಡ್ತೀಯಾ ಎಂದು ಕೇಳಲು ಆತ ಬಂದಿದ್ದ. ನನಗೂ ಇನ್ನು ಸ್ವಲ್ಪ ಕೆಲಸ ಇದೆ. ಆದರೆ ಈ ಮನುಷ್ಯ ತತ್‌ಕ್ಷಣ ಊರಿಗೆ ಹೋಗಬೇಕು ಎಂದು ಪಟ್ಟು ಹಿಡಿದಿದ್ದಾನೆ. ಎಂದು ಯೆಮೆಲ್ಯನೋವ್ ತಪ್ಪಿಸಿಕೊಂಡ. ನೆರೆಯವನು ಹೋದ ನಂತರ ಲೆನಿನ್ 'ಬಹಳ ಉಪಕಾರವಾಯಿತು ಮಾರಾಯ! ನನ್ನನ್ನು ಹುಲ್ಲು ಶೇಖರಿಸುವ ಕೆಲಸಕ್ಕೆ ಹಚ್ಚಿ ಬಿಡ್ತೀಯಾ ಎಂದು ಹೆದರಿಕೆಯಾಗಿತ್ತು ಎಂದು ಜೋಕು ಹೊಡೆದರು. "ಆದರಿಂದ ನನಗೇನು ಲಾಭ ಆಗಲಿಕ್ಕಿಲ್ಲ ಎಂಬ ಖಾತ್ರಿ ಇದೆ." ಯೆಮೆಲ್ಯನೋವ್ ವಾಪಸು ಕೊಟ್ಟ!

ಮೇದಿನವನ್ನು ಕಾರ್ಮಿಕರು ಮೊದಲ ಬಾರಿಗೆ 'ಸ್ವತಂತ್ರ' ರಷ್ಯದಲ್ಲಿ ಸಂಭ್ರಮದಿಂದ ಆಚರಿಸಿದರು. ಕಾರ್ಮಿಕರು ಹಿಡಿದಿದ್ದ ನೂರಾರು ಬ್ಯಾನರುಗಳಲ್ಲಿ ಸರ್ಕಾರದಲ್ಲಿ ವಿಶ್ವಾಸ ತೋರಿದವು ಕೇವಲ ಮೂರೇ ಆಗಿದ್ದವು.

ಯುದ್ಧದ ಭಾರದಿಂದ ಬಳಲಿ ಬೇಸತ್ತು ಹೋಗಿದ್ದ ಕಾರ್ಮಿಕರು, ರೈತರು, ಸೈನಿಕರಿಗೆ ಮೇ ದಿನದ 'ಕೊಡುಗೆ'ಯಾಗಿ ತಾತ್ಕಾಲಿಕ ಸರ್ಕಾರ 'ಶಾಂತಿ'ಗೆ ಕ್ರಮವನ್ನು ಕೈಗೊಳ್ಳುವುದಿಲ್ಲವೆಂಬ ಸರ್ಕಾರದ ಪತ್ರ (ಮಿತ್ರಕೂಟದ ಇತರ ದೇಶಗಳಿಗೆ) ವನ್ನು ಬಹಿರಂಗಪಡಿಸಿತು.' ಶಾಂತಿಗಾಗಿ ಹೊಸ ಸರ್ಕಾರ ಶ್ರಮಿಸಬಹುದೆಂಬ ಆಸೆ ಇಟ್ಟಿದ್ದ, ಕಾರ್ಮಿಕರು, ಸೈನಿಕರು, ಇದ ರಿಂದ ರೊಚ್ಚಿಗೆದ್ದರು. ಸರ್ಕಾರದ 'ಸಾಮ್ರಾಜ್ಯ ಶಾಹಿ' ನೀತಿಯ ವಿರುದ್ಧ ಭಾರಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸುಮಾರು ೧ ಲಕ್ಷ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು ಮೇ ೩-೪ರಂದು ಕಾರ್ಮಿಕರ, ಸೈನಿಕರ ಕೋಪವನ್ನು ಗಮನಿಸಿದ ಲೆನಿನ್ ಇದನ್ನು 'ಬರಿಯ ಪ್ರದರ್ಶನಕ್ಕಿಂತ ಒಂದು ಹಂತ ಮೇಲಿದೆ ಆದರೆ ಕ್ರಾಂತಿಗಿಂತ ಒಂದು ಹಂತ ಕೆಳಗಿದೆ" ಎಂದು ವರ್ಣಿಸಿದರು.

"ಅಂತಹ ಕ್ರಾಂತಿಕಾರಿ ಪಕ್ಷವೊಂದು ಇದೆ!"

ಲೆನಿನ್ 'ಏಪ್ರಿಲ್ ಸಿದ್ಧಾಂತ' ವನ್ನು ಕಾರ್ಮಿಕ ವರ್ಗ ಬೋಲ್ಶೆವಿಕ್ ಪಕ್ಷದ ಬಹುಮತ ಸದಸ್ಯರು ಒಪ್ಪುವಂತೆ ಪ್ರಚಾರ ಮುಂದುವರಿಸಿದರು. ಬಲದ ಎದುರು ತಾತ್ಕಾಲಿಕ ಸರ್ಕಾರ ಬಲಪ್ರಯೋಗ ಮಾಡುವ ಸ್ಥಿತಿಯಲ್ಲಿಲ್ಲ. ದ್ವಂದ್ವ ಅಧಿಕಾರ ಮುಂದುವರಿಯುತ್ತಿರುವುದುತಾತ್ಕಾಲಿಕ ಸರ್ಕಾರದ ಬಲದಿಂದಲ್ಲ. ಸೋವಿಯೆಟ್‌ಗಳಲ್ಲಿ ಬಂಡವಾಳಶಾಹಿ ಸರ್ಕಾರದ ಜತೆ ಸಮಜಾಯಿಷಿ ಮಾಡಿಕೊಳ್ಳುವ ಮೆನ್ಶೆವಿಕ್ ಬಹುಮತದಿಂದಾಗಿ. ಇದನ್ನು ಬದಲಾಯಿಸಿ ಈ ದ್ವಂದ್ವ ಅಧಿಕಾರವನ್ನು ಕೊನೆಗೊಳಿಸಬೇಕು. ಎಲ್ಲಾ ಅಧಿಕಾರ ಸೋವಿಯೆಟ್‌ಗಳಿಗೆ ಕೊಡಲು ಹೋರಾಟನಡೆಸಬೇಕು. ಆದರೆ ವರ್ಗಗಳ ಪರಸ್ಪರ ಬಲಾಬಲದ ಆಗಿನ ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಶಾಂತಿಯುತವಾಗಿ ಸಮಾಜವಾದಿ ಕ್ರಾಂತಿಯತ್ತ ಒಯ್ಯುವ ಸಾಧ್ಯತೆಗಳಿವೆ ಎಂಬುದು ಲೆನಿನ್‌ರ ಸಿದ್ಧಾಂತವಾಗಿತ್ತು.

ಲೆನಿನ್ ಈ ಸಿದ್ಧಾಂತಕ್ಕೆ ಪಕ್ಷದೊಳಗೆ, ಕಾರ್ಮಿಕರ ವರ್ಗದ ಬೆಂಬಲ ಪಡೆಯಲು ಪ್ರಚಾರ ಆರಂಭಿಸಿದರು. ಈ ಪ್ರಚಾರದಿಂದ ಭಯಭೀತವಾದ ಸರ್ಕಾರ, ಇತರ ಪಕ್ಷಗಳು ಲೆನಿನ್‌ರವರು ಜರ್ಮನಿ ಮೂಲಕ ವಾಪಸಾದ ಸಂಗತಿಯನ್ನು ದುರುಪಯೋಗ ಪಡಿಸಿ ಕೊಂಡು 'ಈತ ಜರ್ಮನ್ ಏಜಂಟ್' ಎಂಬ ಅಪಪ್ರಚಾರ ಆರಂಭಿಸಿದರು'. ಲೆನಿನ್ ಕೊಲೆಯ ಬೆದರಿಕೆಯನ್ನೂ ಹಾಕಲಾಯಿತು. ಇದರಿಂದ ಕುಪಿತಗೊಂಡ ಪೆಟ್ರೋಗ್ರಾಡ್ ಕಾರ್ಮಿಕರು ಪ್ರತಿಭಟನಾ ಮುಷ್ಕರ ಹೂಡಿದರು.



ಕ್ರಾಂತಿಯ ಮುನ್ನ [illegible] ಮನೆ

ಮೊದಲಿಗೆ ಇದಕ್ಕೆ ಕೇಂದ್ರ ಸಮಿತಿಯಲ್ಲಿ ಪೂರ್ವ ಬೆಂಬಲ ಸಿಗಲಿಲ್ಲ. ಕಾಮನೇವ್, ಸ್ಟಾಲಿನ್ ಇದನ್ನು ವಿರೋಧಿಸಿದರು. ಕಾಮನೇವ್ ಅಂತೂ ಪಕ್ಷದ ಪತ್ರಿಕೆಯಲ್ಲಿ ಬಹಿರಂಗ ಚರ್ಚೆಗಿಳಿದರು. ಲೆನಿನ್‌ರ ಸಿದ್ಧಾಂತದ ವಿರುದ್ಧ ಮೆನ್ಶೆವಿಕರು, ಎಸ್.ಆರ್. ಗಳು, ಕೆಡೆಟ್ (ಬೂರ್ಜ್ವಾ-ಭೂಮಾಲಿಕ ಪಕ್ಷ)ಗಳು ಅಪಪ್ರಚಾರದ ಯುದ್ಧವನ್ನೇ ಆರಂಭಿಸಿದರು. ಲೆನಿನ್ ಇದಕ್ಕೆ ತೀಕ್ಷ್ಣ ವೈಜ್ಞಾನಿಕ ಉತ್ತರಗಳನ್ನು ಕೊಟ್ಟರು. ಏ ೨೭ರಿಂದ ಮೇ ೫ ರವರೆಗೆ ನಡೆದ ಪೆಟ್ರೋಗ್ರಾಡ್‌ನ ಬೋಲ್ಶೆವಿಕ್ ಸಮ್ಮೇಳನದಲ್ಲಿ ಭಾರಿ ವಾಗ್ವಿವಾದ, ಚರ್ಚೆಯ ನಂತರ ಲೆನಿನ್ ಸಿದ್ಧಾಂತವನ್ನು ಅಂಗೀಕರಿಸಲಾಯಿತು. ಮೇ ೭ರಂದು ನಡೆದ ಅಖಿಲ ರಷ್ಯಾ ಬೋಲ್ಶೆವಿಕ್ ಸಮ್ಮೇಳನ, ರಷ್ಯಾದಲ್ಲೇ ನಡೆದು ಕಾನೂನು ಬಾಹಿರವಾಗದೆ ನಡೆದ ಮೊದಲ ಸಮ್ಮೇಳನ. ಇಲ್ಲೂ ಲೆನಿನ್ ಸಿದ್ಧಾಂತವನ್ನು ಪಕ್ಷ ಬಹುಮತದಿಂದ ಅಂಗೀಕರಿಸಿತು. ರಷ್ಯಾ ಸಮಾಜವಾದಿ ಕ್ರಾಂತಿಗೆ 'ಪಕ್ವವಾಗಿಲ್ಲ', ಪ್ರಜಾಸತ್ತಾತ್ಮಕ ಕ್ರಾಂತಿ ಪೂರ್ಣಗೊಳಿಸದೆ ಅವಸರ ಬೇಡ, ಯುರೋಪಿನ ಅಭಿವೃದ್ಧಿ ದೇಶಗಳಲ್ಲಿ ಕ್ರಾಂತಿ ಆದ ನಂತರ ಮಾತ್ರ ಸಾಧ್ಯ ಇತ್ಯಾದಿ ತಪ್ಪು ಸಿದ್ಧಾಂತಗಳ ವಿರುದ್ಧ ಲೆನಿನ್ ಸೈದ್ಧಾಂತಿಕವಾಗಿ ಹಲವೊಮ್ಮೆ ಏಕಾಕಿಯಾಗಿ ಹೋರಾಡಿದರು. ಸಮ್ಮೇಳನದಲ್ಲಿ ಸಿಕ್ಕಿದ ಬಹುಮತ ಅವರ ಸೈದ್ಧಾಂತಿಕ ಹೋರಾಟದ ನೇರ ಫಲ. 'ಏಪ್ರಿಲ್ ಸಿದ್ಧಾಂತ'ದ ಬಗ್ಗೆ ನಡೆದ ವಾಗ್ವಿವಾದ ಪಕ್ಷಕ್ಕೆ ಸೀಮಿತವಾಗಿರಲಿಲ್ಲ. ಕಾರ್ಮಿಕವರ್ಗ, ಇತರ ವರ್ಗಗಳು, ಇತರ ವರ್ಗಗಳ ಪಕ್ಷಗಳನ್ನು, ಇಡೀ ದೇಶವನ್ನು ತಟ್ಟಿತು. ಅಕ್ಟೋಬರ್ ಕ್ರಾಂತಿಯವರೆಗೆ ಲೆನಿನ್ ಬೇರೆ ಬೇರೆ ಹಂತಗಳಲ್ಲಿ ರೂಪಿಸಿದ ಕಾರ್ಯತಂತ್ರದ ಬಗ್ಗೆ ವಾದವಿವಾದ ಸಹ ಇದೇ ರೀತಿ "ರಾಷ್ಟ್ರೀಯ ಚರ್ಚೆ"ಗೆ ಒಳಪಡುತ್ತಿತ್ತು. ಅಷ್ಟೇ ಅಲ್ಲದೇ, ಪ್ರತಿ ಹೊಸ ಹಂತದಲ್ಲಿ ಕಾರ್ಯತಂತ್ರಗಳನ್ನು ಬದಲಾಯಿಸಿದಾಗ ಕೇಂದ್ರ ಸಮಿತಿಯಲ್ಲಿ ಅವರಿಗೆ ಬಹುಮತ ಬೆಂಬಲ ಸಿಗುತ್ತಿರಲಿಲ್ಲ. ಚರ್ಚೆ, ವಾಗ್ವಿವಾದದ ಮೂಲಕ ಲೆನಿನ್ ಕ್ರಮೇಣ ಕೇಂದ್ರಸಮಿತಿಯ, ಪಕ್ಷದ ಬೆಂಬಲ ಪಡೆಯುತ್ತಿದ್ದರು.

ಪಕ್ಷ ಒಂದುಬಾರಿ ಈ ನಿಲುವನ್ನು ಅಂಗೀಕರಿಸಿದ ಮೇಲೆ ಕಾರ್ಮಿಕರ ಮಧ್ಯೆ ಪ್ರಚಾರ ಮಾಡಲು ಲೆನಿನ್ ಉತ್ಸಾಹದಿಂದ ಮುಂದಾದರು. ಲೆನಿನ್ ಕಾರ್ಮಿಕರು, ಮತ್ತು ಸಮವಸ್ತ್ರದಲ್ಲಿರುವ ರೈತರು, ಎಂದು ಅವರು ಕರೆಯುತ್ತಿದ್ದ ಸೈನಿಕರಿಗೆ ಈ ನಿಲುವನ್ನು ತಿಳಿಯಪಡಿಸುವುದರಲ್ಲಿ ಅವಿರತ ಶ್ರಮವಹಿಸಿದರು. ಮೇ-ಜೂನ್‌ನಲ್ಲಿ ಲೆನಿನ್ ಮಾತನಾಡಿದ ಕಾರ್ಮಿಕ ರ್‍ಯಾಲಿ, ಸಭೆ, ಸಮ್ಮೇಳನಗಳಿಗೆ ಲೆಕ್ಕ ಮಿತಿ ಇಲ್ಲ. ಎಷ್ಟೋ ಕಡೆ ಮೆನ್ಶೆವಿಕ್, ಎಸ್.ಆರ್. ಹಿಡಿತದಲ್ಲಿರುವ ಕಾರ್ಮಿಕರ ಬೃಹತ್ ಸಭೆಗಳಲ್ಲಿ ಮಾತನಾಡಿದ ಲೆನಿನ್, ಅವರನ್ನು ಬೋಲ್ಶೆವಿಕ್ ನಿಲುವಿನತ್ತ ಗೆದ್ದು ಕೊಂಡ ಸಂದರ್ಭಗಳೆಷ್ಟೋ!

ಜೂನ್ ೧೬ರಿಂದ ಕಾರ್ಮಿಕರ, ಸೈನಿಕರ ಪ್ರತಿನಿಧಿಗಳ ಸೋವಿಯೆಟ್‌ಗಳ ಅಖಿಲ ರಷ್ಯಾ ಕಾಂಗ್ರೆಸ್ ಪೆಟ್ರೋಗ್ರಾಡ್‌ನಲ್ಲಿ ಸೇರಿತು. ಈ ಕಾಂಗ್ರೆಸ್‌ನ ಮುಂದೆ ಯುದ್ಧ ನಿಲ್ಲಿಸುವ ಬಗ್ಗೆ ಬೋಲ್ಶೆವಿಕ್ ಪಕ್ಷದ ಸೂಚನೆ ಮಂಡಿಸಲಾಯಿತು. ಇದರ ಬಗ್ಗೆ ಬೋಲ್ಶೆವಿಕರು ಅಲ್ಪ ಸಂಖ್ಯಾತರಾಗಿದ್ದ ಈ ಕಾಂಗ್ರೆಸ್‌ನಲ್ಲಿ ತೀವ್ರ ಚಕಮಕಿ ನಡೆಯಿತು. ಈ ವಾಗ್ವಿವಾದದ ಸಂದರ್ಭದಲ್ಲಿ ಮೆನ್ಶೆವಿಕ್ ಒಬ್ಬ "ಇಂದು ರಷ್ಯಾದಲ್ಲಿ ನೀವು ಮನೆಗೆ ಹೋಗಿ, ನಮಗೆ ಅಧಿಕಾರ ಕೊಡಿ, ನಿಮ್ಮ ಬದಲು ಅಧಿಕಾರ ನಡೆಸುತ್ತೇವೆ ಎಂದು ಹೇಳುವ ಯಾವ ಪಕ್ಷವೂ ಇಲ್ಲ" ಎಂದು ತಾತ್ಕಾಲಿಕ ಸರ್ಕಾರದಲ್ಲಿ ಬಂಡವಾಳಶಾಹಿಗಳೊಡನೆ ಮೆನ್ಶೆವಿಕ್ ನಾಚಿಕೆಕೇಡಿನ ಒಕ್ಕೂಟವನ್ನು ಸಮರ್ಥಿಸುತ್ತಾ ಹೇಳಿದ. ಆಗ ಪ್ರತಿನಿಧಿಗಳ ಮಧ್ಯದಿಂದ ಬೆಂಕಿ ಉಗುಳುವ ಆವೇಶಭರಿತ ಕಂಚಿನ ಕಂಠದಿಂದ ಶಬ್ದಗಳು ಮೂಡಿಬಂದವು "ಅಂತಹದೊಂದು ಪಕ್ಷ ಇದೆ! ಅದು ಬೋಲ್ಶೆವಿಕ್ ಪಕ್ಷ". ಅದು ಲೆನಿನ್‌ರ ದನಿಯಾಗಿತ್ತು. ಲೆನಿನ್ ಸೋವಿಯೆಟ್‌ಗಳ ಕಾಂಗ್ರೆಸ್‌ನ ಮುಂದೆ ತಾತ್ಕಾಲಿಕ ಸರ್ಕಾರ, ಸಾಮ್ರಾಜ್ಯಶಾಹಿ ಯುದ್ಧ, ಶಾಂತಿ, ಆಹಾರ, ಭೂಮಿ ಬಗ್ಗೆ ಬೋಲ್ಶೆವಿಕ್ ನಿಲುವನ್ನು ಬಲವಾಗಿ ಪ್ರತಿಪಾದಿಸಿದರು. ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ ವಹಿಸಬೇಕು ಎಂಬ ಬೋಲ್ಶೆವಿಕ್ ಸೂಚನೆ ಅಂಗೀಕೃತವಾಗದಿದ್ದರೂ, ತಾತ್ಕಾಲಿಕ ಸರ್ಕಾರದಲ್ಲಿ ವಿಶ್ವಾಸ ಸೂಚಿಸುವ ನಿರ್ಣಯ ಅಂಗೀಕೃತವಾದರೂ ಬೋಲ್ಶೆವಿಕ್ ನಿಲುವಿಗೆ ಅವರ ಸ್ವಂತ ಬಲಕ್ಕಿಂತ ಬಹಳಷ್ಟು ಹೆಚ್ಚಿನ ಸಮರ್ಥನೆ ಸಿಕ್ಕಿತು.

'ದ್ವಂದ್ವ ಅಧಿಕಾರದ' ಕೊನೆ

ತಾತ್ಕಾಲಿಕ ಸರ್ಕಾರದ ನೀತಿಗಳಿಂದ ರೊಚ್ಚಿಗೆದ್ದ ಕಾರ್ಮಿಕರ ಮೇಲೆ, ಬಹಳಷ್ಟು ಕಾರ್ಮಿಕರ ಸಂಘಟನೆಗಳು ಫೆಬ್ರವರಿ ಕ್ರಾಂತಿಯ ಸಮಯದಲ್ಲಿ ಆಕ್ರಮಿಸಿಕೊಂಡಿದ್ದ 'ದುರ್ನಾವೋ ಭವನ'ದಿಂದ ಖಾಲಿ ಮಾಡಲು ಮಾಡಿದ ಆಜ್ಞೆ ಭಾರಿ ಪ್ರತಿಭಟನಾ ಮುಷ್ಕರಗಳಿಗೆ ಕಾರಣವಾಯಿತು. ಈ ರೀತಿ ಉತ್ತೇಜಿತರಾಗಿದ್ದ ಕಾರ್ಮಿಕರು, ಸೈನಿಕರು ಅಕಾಲಿಕವಾಗಿ ದಂಗೆ ಎದ್ದು ಕ್ರಾಂತಿ ಆರಂಭವಾಗುವ ಮೊದಲೇ ದಮನಕ್ಕೊಳಗಾಗುವ ಸಾಧ್ಯತೆ ತಡೆಯಲು ಜೂನ್ ೨೩ರಂದು ಭಾರೀ ಪ್ರತಿಭಟನಾ ಪ್ರದರ್ಶನ ನಡೆಸಲು ಬೋಲ್ಶೆವಿಕ್ ಕೇಂದ್ರ ಸಮಿತಿ ನಿರ್ಧರಿಸಿತು. ಇದು 'ಸೋವಿಯೆಟ್‌ಗಳ ಕಾಂಗ್ರೆಸ್' ನಡೆಯುತ್ತಿರುವಾಗಲೇ ನಡೆಯಬೇಕೆಂದು ನಿರ್ಧರಿಸಲಾಯಿತು. ಬೋಲ್ಶೆವಿಕ್ ಬಲಪ್ರದರ್ಶನದಿಂದ ಹೆದರಿದ ಮೆನ್ಶೆವಿಕ್ 'ಕಾಂಗ್ರೆಸ್'ನ ಮೂಲಕ ೩ ದಿನಗಳ ಕಾಲ ಪ್ರದರ್ಶನ ನಿಷೇಧಿಸುವ ನಿರ್ಣಯ ಅಂಗೀಕರಿಸುವಂತೆ ಮಾಡಿದರು. ಬೋಲ್ಶೆವಿಕ್ ಮೇಲೆ 'ದೇಶದ್ರೋಹ'ದ ಆಪಾದನೆ, ಅಪಪ್ರಚಾರ ತಾರಕಕ್ಕೇರಿತು. ಬದಲಾದ ಪರಿಸ್ಥಿತಿಯನ್ನು ಗಮನಿಸಿದ ಲೆನಿನ್ ಪ್ರದರ್ಶನದ ಕರೆ ಹಿಂತೆಗೆದುಕೊಳ್ಳಬೇಕೆಂದು ವಾದಿಸಿದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ, ಭಿನ್ನಾಭಿಪ್ರಾಯ ಬಂದಾಗಲೂ, ಲೆನಿನ್ ಯುದ್ಧದ ಸಂದರ್ಭದಲ್ಲಾಗುವಂತೆ ಸಕಾಲಿಕ ಹಿಂಜರಿತ ಕೆಲವೊಮ್ಮೆ ಆಮೇಲೆ ತೀವ್ರ ಮುನ್ನಡೆಗೆ ಎಡೆಮಾಡಿ ಕೊಡಬಲ್ಲುದು ಎಂದರು.

ಬೋಲ್ಶೆವಿಕ್‌ರು ಪ್ರದರ್ಶನ ಹಿಂತೆಗೆದುಕೊಂಡರು. ಅತೃಪ್ತಿ, ಕೋಪ ಎಷ್ಟು ತೀವ್ರವಾಗಿತ್ತೆಂದರೆ ಮೆನ್ಶೆವಿಕರು, ಒಂದು ಪ್ರದರ್ಶನ ಏರ್ಪಡಿಸಿ ಅದನ್ನು ಬೋಲ್ಶೆವಿಕ್ ವಿರೋಧಿಯಾಗಿ ಉಪಯೋಗಿಸಬೇಕೆಂದು ತಂತ್ರ ಹೂಡಿದರು. ಜುಲೈ ೧ ರಂದು ನಡೆದ ಈ ಪ್ರದರ್ಶನದಲ್ಲಿ ಭಾಗವಹಿಸಿದ ಕಾರ್ಮಿಕರು, ಸೈನಿಕರಲ್ಲಿ ಶೇಕಡಾ ೯೦ಜನ ಬೋಲ್ಶೆವಿಕ್ ಘೋಷಣೆಗಳ ಪೋಸ್ಟರುಗಳು, ಬ್ಯಾನರುಗಳನ್ನು ಹಿಡಿದಿದ್ದರು. ಸರ್ಕಾರಿ ವಿರೋಧಿ ಘೋಷಣೆಗಳನ್ನು ಕೂಗಿದರು. ಹೀಗೆ ತಮ್ಮ ವಿರುದ್ಧ ಪ್ರಯೋಗಿಸಲು ಉದ್ದೇಶಿತವಾಗಿದ್ದ ಪ್ರದರ್ಶನವನ್ನು, ಬೋಲ್ಶೆವಿಕ್ ಬಲಪ್ರದರ್ಶನದ ಪ್ರತೀಕವಾಯಿತು. ಲೆನಿನ್‌ರೆಂದಂತೆ 'ಸಕಾಲಿಕ ಹಿಂಜರಿತ' ತೀವ್ರ ಮುನ್ನಡೆಗೆ ಸಹಾಯಕವಾಯಿತು. ಲೆನಿನ್ ಜುಲೈ ೧ರ ಪ್ರದರ್ಶನವು ಕ್ರಾಂತಿಯತ್ತ 'ಮೊದಲ ನಿರ್ಣಾಯಕ ಕಾರ್ಯಾಚರಣೆ" ಎಂದು ಕರೆದರು.

ಈ ಮೊದಲ ನಿರ್ಣಾಯಕ ಕಾರ್ಯಾಚರಣೆಯನ್ನು ರಾಜಕೀಯವಾಗಿ ಸೋಲಿಸಲು ತಾತ್ಕಾಲಿಕ ಸರ್ಕಾರ ಯುದ್ಧಭೂಮಿಯಲ್ಲಿ ಜರ್ಮನ್ ಪಡೆಗಳ ಮೇಲೆ ಭಾರೀ ಆಕ್ರಮಣ ನಡೆಸಿತು. ಯುದ್ಧ ಗೆಲ್ಲುವ ಮೂಲಕ ಯುದ್ಧ ಮುಗಿಸುವ 'ದೇಶಪ್ರೇಮಿ' ಅಬ್ಬರದ ಪ್ರಚಾರ ಆರಂಭವಾಯಿತು. ಹಿಂದೆ 'ದುರ್ನಾವೋ ಭವನ್' ಖಾಲಿ ಮಾಡಲು ಮಾಡಿದ್ದ ಆಜ್ಞೆಯನ್ನು ಸಶಸ್ತ್ರ ಪಡೆಗಳಿಂದ ಕಾರ್ಯಗತಗೊಳಿಸಲಾಯಿತು. ಇದರಿಂದ ಕುಪಿತರಾದ ಕಾರ್ಮಿಕರು, ಸುಮಾರು ೬೦,೦೦೦ ಸೈನಿಕರು ಮೃತರಾಗಿದ್ದ ಯುದ್ಧಭೂಮಿಯಿಂದ ಹಿಂತಿರುಗುತ್ತಿದ್ದ ಕುಪಿತ ಸೈನಿಕರು ದಂಗೆಗೆ ಸಜ್ಜಾದರು. ಬೋಲ್ಶೆವಿಕರು ಇದಕ್ಕೆ ನಾಯಕತ್ವ ವಹಿಸದಿದ್ದರೆ ತಾವೇ ಪ್ರದರ್ಶನ ನಡೆಸುತ್ತೇವೆ ಎಂದು ಪಟ್ಟು ಹಿಡಿದರು. ಈ ನಡುವೆ ಲೆನಿನ್ ಅನಾರೋಗ್ಯದಿಂದ ವಿಶ್ರಾಂತಿಗೆಂದು

ಸ್ಮೃತಿ: ನಾನೇ ಲೆನಿನ್

'ಬೂಟುಗಳಲ್ಲಿ ಮೊಳೆಗಳಲ್ಲಿ ಕೇಳುತಿದೆ
ಲೆನಿನ್ ಹೆಜ್ಜೆ ಸದ್ದು......
ನನ್ನ ಕೈದೋಳಿಂದು ದೇವರಂತೆ ಲೆನಿನ್‌ಗೆ
ನಿರ್ಣಯ ನಾವಲ್ಲ
ನನ್ನ ಹೃದಯದಲ್ಲಿ ಮಿಡಿಯುತಿದೆ ಬಂಡಾಯ
ಜನಸಮುದ್ರ ಎನಗೆ:
ನಾನೇ ಲೆನಿನ್!'

೧೭ ವರ್ಷದ ಹುಡುಗ ಸುರ್ಕೋವ್ ಭಾವೋದ್ವೇಗದಿಂದ ೧೯೪೩ ರಲ್ಲಿ ಸ್ಟಾಲಿನ್ ಗ್ರಾಡ್ ಯುದ್ಧ ಮುಗಿದ ಸಂದರ್ಭದಲ್ಲಿ, ಹೀಗೆ ಹಾಡಿದನು. ನಾಲ್ಕು ವರ್ಷಗಳ ನಂತರ ೧೯೪೭ ರ ಮೇ ತಿಂಗಳಲ್ಲಿ ಈ ಯುವ ಕವಿ ಅಕಾಲಮೃತ್ಯುವಿಗೆ ತುತ್ತಾದನು.

ಪುಟ ೪೦ ಕ್ಕೆ →

ವಿ.ಜೆ.ಕೆ. ನಾಯರ್

ಸಾಮ್ರಾಜ್ಯಶಾಹಿ ಕುರಿತ ತನ್ನ ಪ್ರಖ್ಯಾತ ಕೃತಿ ರಚನೆಯಲ್ಲಿ



ಬಂಡವಾಳಶಾಹಿಯಿಂದ ಸಮಾಜವಾದದತ್ತ ಪರಿವರ್ತನೆಯ ನಾಂದಿ ಹಾಕಿದ

'ಸಾಮ್ರಾಜ್ಯಶಾಹಿ' ಕುರಿತ ಲೆನಿನ್‌ವಾದೀ ಸಿದ್ಧಾಂತ

ಲೆನಿನ್‌ರ ಕಾಲದ ಬಂಡವಾಳಶಾಹೀ ಘಟ್ಟಕ್ಕೆ ಅನ್ವಯಿಸಿದ ಮಾರ್ಕ್ಸ್‌ವಾದ ಬೆಳವಣಿಗೆಯೇ ಲೆನಿನ್‌ವಾದದ. ಬಂಡವಾಳ ಶಾಹಿಯ ಘಟ್ಟವನ್ನು ಸಾಮ್ರಾಜ್ಯಶಾಹಿ ಎನ್ನುತ್ತಾರೆ. ಸಾಮ್ರಾಜ್ಯಶಾಹಿಯ ಈ ಸಿದ್ಧಾಂತದ ಈ ಬೆಳವಣಿಗೆ ಮತ್ತು ಅದರ ಪ್ರಯೋಗ ಲೆನಿನ್‌ವಾದದಸಾರಾಂಶ. ಲೆನಿನ್‌ವಾದದ ಇತರ ಅಂಶಗಳು ಈ ಮೂಲಭೂತ ಅಂಶದಿಂದಲೇ ಹೊರ ಹೊಮ್ಮುವ ಅಥವಾ ಇದರೊಂದಿಗೆ ಅನನ್ಯ ಸಂಬಂಧವಿರುವ ಸಂಗತಿಗಳು.

ಸಾಮ್ರಾಜ್ಯಶಾಹಿ ಸಿದ್ಧಾಂತದ ಬೆಳವಣಿಗೆಯ ಎರಡು ದಶಕಗಳು


ಸಾಮ್ರಾಜ್ಯಶಾಹಿ ಕುರಿತು ಲೆನಿನ್‌ರ ಬರವಣಿಗೆಗಳು ೧೮೯೫ ರಿಂದ ೧೯೨೦ ರವರೆಗಿನ ಸುಮಾರು ಎರಡು ದಶಕಗಳವರೆಗೆ ಹರಡಿರುವುದನ್ನು ಕಾಣಬಹುದು. ಇದಕ್ಕೆ ಸಂಬಂಧಿಸಿದ ಮಹತ್ವದ ಕೃತಿ "ಸಾಮ್ರಾಜ್ಯಶಾಹಿ, ಬಂಡವಾಳಶಾಹಿಯ ಅತ್ಯುನ್ನತ ಘಟ್ಟ" ರಚನೆಯಾದದ್ದು ೧೯೧೬ ರ ಪೂರ್ವಾರ್ಧದಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ಗಡಿಪಾರಿನಲ್ಲಿ ಇರುವಾಗ.

ಅವರು ಆ ಘಟ್ಟದಲ್ಲಿ ತೊಡಗಿದ್ದ ಪ್ರಾಯೋಗಿಕ ಚಟುವಟಿಕೆಗಳಿಗೆಲ್ಲಾ, ಸಮಕಾಲಿನ ಸ್ಥಿತಿ-ಗತಿಗೆ ಅನ್ವಯಿಸಬಹುದಾದ ಸಿದ್ಧಾಂತ ಬೆಳೆಸುವ ಅಗತ್ಯ ಅವರಿಗಿತ್ತು. ಪಕ್ಷವನ್ನು ಕಟ್ಟುವ ಕೆಲಸದಲ್ಲಿ ಅವರು ತೊಡಗಿರುವಾಗ ಸಮಯ ಸಾಧಕತೆ ಬೆಳೆಯುತ್ತಿರುವುದನ್ನು ಕಂಡರು: ಮಾರ್ಕ್ಸ್, ಎಂಗೆಲ್ಸ್‌ರ ಮೂಲ ಕೃತಿಗಳತ್ತ ಹಿಂದಿರುಗಿ ಸಮಯ ಸಾಧಕತೆಯ ಮೂಲಕ್ಕೆ ವರ್ಗ ಆಧಾರವನ್ನು ಗುರುತಿಸಿದರು. ಕಾರ್ಮಿಕ ವರ್ಗದ ಆಂದೋಲನದಲ್ಲಿ ಸಮಯ ಸಾಧಕತೆ ಒಂದು ಬೂರ್ಜ್ವಾ ಪ್ರವೃತ್ತಿ. ಸಾಮ್ರಾಜ್ಯಶಾಹಿಗಳು ವಸಾಹತುಗಳನ್ನು ಲೂಟಿ ಮಾಡಿ ಸೂಪರ್ ಲಾಭಗಳನ್ನು ಗಿಟ್ಟಿಸಿ. ಅದರಲ್ಲೊಂದು ಪಾಲನ್ನು ಕಾರ್ಮಿಕ ವರ್ಗಕ್ಕೆ ನೀಡಿ. ಕಾರ್ಮಿಕ ಆಂದೋಲನವನ್ನು ಸುಪ್ರೀತಗೊಳಿಸಿ ತಮ್ಮ ವರ್ಗದ ಬಾಲಂಗೋಚಿಗಳನ್ನಾಗಿ ಮಾಡಿಕೊಳ್ಳಲು ನೀಡಿದರು ಎಂಬ ತೀರ್ಮಾನಕ್ಕೆ ಬಂದರು. ಬೆಳೆದು ಬರುತ್ತಿದ್ದ ಯುದ್ಧ ಪರಿಸ್ಥಿತಿಯ ಹಿಂದಿರುವ ರಾಜತಾಂತ್ರಿಕ ಪ್ರಯತ್ನಗಳ ಸಾಮಾಜಿಕ, ಆರ್ಥಿಕ ಆಧಾರವನ್ನು ವಿವರಿಸಲು ಬಂಡವಾಳಶಾಹಿ ಬೆಳವಣಿಗೆಯ ವಿಶ್ಲೇಷಣೆ ಅಗತ್ಯವಾಗಿತ್ತು. ಈ ಅಗತ್ಯದಿಂದ ಸಿದ್ಧಾಂತ ಮೂಡಿ ಬಂತು.

ಎನ್. ಬು ಖಾರಿನ್‌ರ ಕೃತಿ "ಸಾಮ್ರಾಜ್ಯಶಾಹಿ ಮತ್ತು ವಿಶ್ವ ಆರ್ಥಿಕತೆ"ಗೆ ಬರೆದ ಮುನ್ನುಡಿಯಲ್ಲಿ ಬಂಡವಾಳಶಾಹಿಯ ಬದಲಾಗುತ್ತಿರುವ ರೂಪಗಳನ್ನು ಪರಿಶೀಲಿಸುವ ಆರ್ಥಿಕ ಶಾಸ್ತ್ರದ ಕ್ಷೇತ್ರದಲ್ಲಿ ಸಾಮ್ರಾಜ್ಯಶಾಹಿಯ ಪ್ರಶ್ನೆ ಅತ್ಯಾವಶ್ಯಕ ಪ್ರಶ್ನೆ ಎಂದಿದ್ದಾರೆ. (ಸಂಪುಟ ೨೨, ೧೦೩-೧೦೭). ಆರ್ಥಿಕ ಹಾಗೂ ಸಾಮಾಜಿಕ ಇವೆರಡೂ ಆಯಾಮಗಳಲ್ಲಿ ಸಾಮ್ರಾಜ್ಯಶಾಹಿಯ ಸ್ವರೂಪದ ಆಮೂಲಾಗ್ರ ವಿಶ್ಲೇಷಣೆಯಿಲ್ಲದೆ ಯುದ್ಧದ ಮೂರ್ತ ಚಾರಿತ್ರಿಕ ಪರಿಶೀಲನೆ ಸಾಧ್ಯವಿಲ್ಲ ಎಂದು ಹೇಳಿ ಮತ್ತು ಮುಂದುವರಿಯುತ್ತಾ ಲೆನಿನ್, "ಶಾಂತಿ ಯುತ" ಬಂಡವಾಳ ಶಾಹಿಯ ಘಟ್ಟ ಮುಗಿದಿದೆ. ವಿಶ್ವದ ೯೦% ಜನರಿಗೆ ದುರ್ಬಲ ಸ್ಥಿತಿ ಸೃಷ್ಟಿಸಿರುವ ಅದೀಗ ಹಿಂದೆಂದಿಗಿಂತಲೂ ಹೆಚ್ಚು ಹಿಂಸಾತ್ಮಕವಾಗಿದೆ. ಸಾಮ್ರಾಜ್ಯಶಾಹಿಯ ಪ್ರಳಯಕಾರಿ ಯುಗ ಆರಂಭವಾಗಿ ಬಿಟ್ಟಿದೆ ಎಂದು ವಿವರಿಸಿದರು.

ಸಾಮ್ರಾಜ್ಯಶಾಹಿಯ ಸ್ವರೂಪ

ಸಾಮ್ರಾಜ್ಯಶಾಹಿಯ ಬಂಡವಾಳಶಾಹಿ ಬೆಳವಣಿಗೆಯ ಅತ್ಯುನ್ನತ ಘಟ್ಟ. ತನ್ನ ಉದ್ಭವಾವಸ್ಥೆಯಲ್ಲಿ ಬಂಡವಾಳಶಾಹಿ ಒಂದು ಕ್ರಾಂತಿಕಾರಿ ಪಾತ್ರವಹಿಸಿತು. ಊಳಿಗಮಾನ್ಯ ಸಾಮ್ರಾಜ್ಯಶಾಹಿ ಚಕ್ರಾಧಿಪತ್ಯಗಳಿಂದ ಸ್ವತಂತ್ರ್ಯಾಗಿ ಬಂಡವಾಳಶಾಹಿಗಳೇ ಪಾಳೆಯಗಾರಿ ಪ್ರಭುಗಳ ವಿರುದ್ಧ ಈ ಕಾರ್ಯಭಾರಗಳನ್ನು


DIAMOND
JUBILEE YEAR
1930-1990
Compliments
from
From the
makers of
Thirty Brand
Beedies
30
REGD
BHARATH BEEDI
WORKS
PRIVATE LIMITED
MANGALORE
Pratibha/BB/

ನಿರ್ವಹಿಸಲಾರಂಭಿಸಿದರು. ಆಗ ಅವರನ್ನು ಪ್ರಗತಿಪರರೆಂದು ಬಗೆಯಲಾಯಿತು. ಆದರೆ ಕೈಗಾರಿಕೆಗಳು ದೊಡ್ಡ ಉದ್ದಿಮೆಗಳಾದಂತೆ ಒಂದಾದ ಮೇಲೊಂದರಂತೆ ಅವು ಸರಪಣಿಯಾಗಿ ಬೆಳೆಯಲಾರಂಭಿಸಿದವು. ನಿರ್ದಿಷ್ಟ ಉದ್ದಿಮೆಗೆ ಮಾತ್ರವೇ ಕಚ್ಚಾ ಸಾಮಗ್ರಿಗಳನ್ನು ಪೂರೈಸಬೇಕೆಂದೊ ಉತ್ಪಾದನೆ ನಿರ್ದಿಷ್ಟ ಸಂಘಟನೆಯ ಮೂಲಕವೇ ಮಾರಬೇಕೆಂದೋ ಒಪ್ಪಂದ ನಡೆಯಲಾರಂಭಗೊಂಡಿತು. ಇದೇ ರೀತಿ ಉದ್ದಿಮೆಯ ಒಂದು ಶಾಖೆ, ಉದಾಹರಣೆಗೆ ಬಟ್ಟೆ ಉದ್ದಿಮೆ, ಹತ್ತಿ ವಾಣಿಜ್ಯ, ಬಟ್ಟೆ ವಾಣಿಜ್ಯ, ಬಣ್ಣ ಇತ್ಯಾದಿಗಳಲ್ಲಿ ಮಾತ್ರವೇ ಅಲ್ಲ, ರಾಸಾಯನಿಕಗಳಲ್ಲಿ ಯಂತ್ರ ಸಾಮಗ್ರಿಗಳು ಇತ್ಯಾದಿಗಳೊಂದಿಗೂ ಪರಸ್ಪರ ಕೊಂಡಿಯಾಗಲಾರಂಭಿಸಿದವು. ಹೀಗೆ ಒಪ್ಪಂದಗಳು, ಪರಸ್ಪರ ಕೂಟಗಳು (ಕಾರ್ಟೆಲ್‌ಗಳು) ನಡೆಯುತ್ತವೆ. ಗುತ್ತೇದಾರಿಗಳು ಬೆಳೆಯುತ್ತವೆ. ಉದ್ದಿಮೆಗಳು ಬ್ಯಾಂಕುಗಳಿಂದ ಸಾಲ ಪಡೆಯುತ್ತವೆ. ಅವರ ಲೆಕ್ಕ ಪತ್ರಗಳನ್ನು ಬ್ಯಾಂಕುಗಳು ಪರೀಕ್ಷಿಸುತ್ತವೆ. ಬ್ಯಾಂಕುಗಳು ಉದ್ದಿಮೆಗಳಲ್ಲಿ ಪಾಲು ಪಡೆಯುತ್ತವೆ. ಉದ್ದಿಮೆದಾರರು ಬ್ಯಾಂಕುಗಳಲ್ಲಿ ಪಾಲು ಪಡೆಯುತ್ತಾರೆ. ಹೀಗೆ ಉದ್ದಿಮೆ ಬಂಡವಾಳ ಮತ್ತು ಬ್ಯಾಂಕಿಂಗ್ ಬಂಡವಾಳ ಒಂದಾಗಿ ಬೆಳೆದು ಹಣಕಾಸು ಬಂಡವಾಳವಾಗುತ್ತದೆ. ಕೈಗಾರಿಕಾ ಬೆಳವಣಿಗೆ ಹೆಚ್ಚಿದಂತೆ ಲಾಭದರ ಇಳಿಯುತ್ತಾ ಬರುತ್ತದೆ. ಆದರೆ ಹಣಕಾಸು ಬಂಡವಾಳ ಉತ್ಪಾದನಾ ಬಡ್ಡಿ ಕಿತ್ತುಕೊಳ್ಳುವುದರಿಂದ ಬಂಡವಾಳ ಉತ್ಪಾದನಾ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸದೆ ದೂರವಾಗಲಾರಂಭಿಸುತ್ತದೆ. ಬದಲಿಗೆ ಬಂಡವಾಳ ಹೂಡಿಕೆಯ ಮಾರುಕಟ್ಟೆಗಳು ಬೆಳೆಯುತ್ತವೆ. ಬಂಡವಾಳದ ರಫ್ತು ಆರಂಭವಾಗುತ್ತದೆ. ಇದು ಒಂದು ಲಾಭಾಂಶ ಜೀವಿ ಸಮಾಜವನ್ನು, ಆರೋಗ್ಯಕರ ಅಭಿವೃದ್ಧಿಯ ಬದಲು ಪರಾನ್ನಜೀವಿ ಜೀವನವನ್ನು ಬೆಳೆಸುತ್ತದೆ. ಆದ್ದರಿಂದ ಲೆನಿನ್ ಈ ಘಟ್ಟವನ್ನು ಬಂಡವಾಳಶಾಹಿಯ ಅವನತಿ ಹೊಂದುತ್ತಿರುವ, ಸಾಯುತ್ತಿರುವ ಘಟ್ಟವೆಂದು ವರ್ಣಿಸಿದರು. ಮರಣೋನ್ಮುಖ ಘಟ್ಟ ಎಂದು ಅವರು ಇದಕ್ಕೆ ಇಟ್ಟ ಹೆಸರು.

ದೊಡ್ಡ ಪ್ರಮಾಣದ ಉದ್ದಿಮೆಗಳ ಬೆಳವಣಿಗೆ, ವಿವಿಧ ವಲಯಗಳನ್ನು ಪರಸ್ಪರ ಜೋಡಿಸುವ ಒಪ್ಪಂದಗಳು, ಟ್ರಸ್ಟ್‌ಗಳು ಇತ್ಯಾದಿ ಸ್ಪರ್ಧೆಯನ್ನು ಗುತ್ತೇದಾರಿಕೆಯಾಗಿ ಪರಿವರ್ತಿಸುತ್ತವೆ. ಹೀಗೆ ಕೆಳಮಟ್ಟದ ಬಂಡವಾಳಶಾಹಿ ಪರಿಸ್ಥಿತಿಯಲ್ಲಿ ಕಾಣುವ ಅರಾಜಕ ಸ್ವಭಾವ ಮತ್ತು ಪರಸ್ಪರ ಸ್ಪರ್ಧೆಯ ಬದಲು ಗುತ್ತೇದಾರಿ ಏಕಸ್ವಾಮ್ಯದ ಪ್ರಾಬಲ್ಯ ಮೆರೆವುದನ್ನು ಕಾಣುತ್ತೇವೆ. ಆದರೆ ಇದು ಗುತ್ತೇದಾರಿ ಗುಂಪುಗಳ ನಡುವೆ ಸ್ಪರ್ಧೆಯನ್ನು ನಿವಾರಿಸುವುದಿಲ್ಲ. ಆದ್ದರಿಂದಲೇ ವಿಶ್ವವನ್ನು ವಿಭಜಿಸಿಕೊಳ್ಳುವ, ಮರುವಿಭಜಿಸುವ ಹುಚ್ಚು ತರಾತುರಿ, ಆಕಾಂಕ್ಷೆ ಕಾಣುತ್ತದೆ. ಇದರಿಂದ ಯುದ್ಧಗಳು, ವಸಾಹತು ಜನಗಳ ದಾಸ್ಯ ಮತ್ತು ಅದರಿಂದ ಅವರ ಬಂಡಾಯ ಕಾಣ ಬರುತ್ತವೆ.

ಸಾಮ್ರಾಜ್ಯಶಾಹಿ ಘಟ್ಟದಲ್ಲಿ ಬಂಡವಾಳಶಾಹಿಗಳನ್ನು ಈ ವ್ಯವಸ್ಥೆ ಬಂಡವಾಳದ ಕೇಂದ್ರೀಕರಣದತ್ತ, ಅದರ ಪರಿಣಾಮವಾಗಿ ಸಾಮಾಜೀಕರಣದತ್ತ (ಉತ್ಪಾದನಾ ಸಾಧನಗಳು ಸಾಮಾಜೀಕರಣಗೊಂಡರೂ ಲಾಭ ಅಥವಾ ಫಲ ಮಾತ್ರ ಖಾಸಗಿ ಮಾಲೀಕರಿಗೆ) ಎಳೆಯುತ್ತದೆ.

ಲೆನಿನ್ ಸಾಮ್ರಾಜ್ಯಶಾಹಿಯ ಈ ಐದು ಸ್ಪಷ್ಟ ಅಂಶಗಳನ್ನು ಗುರುತಿಸುತ್ತಾರೆ.

(೧) ಬಂಡವಾಳ ಮತ್ತು ಉತ್ಪಾದನೆಯಕೇಂದ್ರೀಕರಣ ಅದರಿಂದಾಗಿ ಸಾಮಾಜೀಕರಣ ಇದು ಬಂಡವಾಳ ಶಾಹಿಯ ತದ್ವಿರುದ್ಧ ಸ್ವರೂಪ.


(೨) ಉದ್ದಿಮೆ ಬಂಡವಾಳ ಮತ್ತು ಬ್ಯಾಂಕಿಂಗ್ ಬಂಡವಾಳ ಬೆಸೆದು ಹಣಕಾಸು ಬಂಡವಾಳದ ಸೃಷ್ಟಿ.

(೩) ಬಂಡವಾಳದ ರಫ್ತು ಮತ್ತು ಒಂದು ಲಾಭಾಂಶ ಜೀವಿ ಸಮಾಜದ ಬೆಳವಣಿಗೆ

(೪) ಅಂತರ್ರಾಷ್ಟ್ರೀಯ(ವ್ಯಾಪಾರಿ) ಕೂಟಗಳ ಆರಂಭ.

(೫) ವಿಶ್ವದ ಪ್ರಾದೇಶಿಕ ವಿಭಜನೆ ಇದರಿಂದ ಜನತೆಯ ದಮನ. ಇದಕ್ಕೆ ಪ್ರತಿಕ್ರಿಯೆಯಾಗಿ ಜನರಲ್ಲಿ ಜಾಗೃತಿ, ಹಿಂದೆಂದೂ ಇಲ್ಲದ ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆ.

ಉತ್ಪಾದನೆಯ ಕೇಂದ್ರೀಕರಣ, ಬ್ಯಾಂಕುಗಳ



ಪುಟಿಲೋವ್ ಕಾರ್ಖಾನೆಯ ಕಾರ್ಮಿಕರೊಂದಿಗೆ

"ರಷ್ಯಾದಲ್ಲಿ ಸಂಭವಿಸುತ್ತಿರುವುದರ ಹೆಸರೇ ಕಮ್ಯುನಿಸಂ" ಎಂದು ಅವರು ಬರೆದರು.

ಅಕ್ಟೋಬರ್ ಕ್ರಾಂತಿ ನಡೆದ ಮೂರು ತಿಂಗಳುಗಳ ತರುವಾಯ ೧೯೧೮ರ ಜನವರಿ ೨೧ರಂದು, ಮಹಾನ್ ಭಾರತೀಯ ಲೇಖಕರು, ದೇಶಭಕ್ತರು ಆದ ಬಾಲಗಂಗಾಧರ ತಿಲಕ್ ಅವರ ಸಂಪಾದಕತ್ವದಲ್ಲಿ ಪುಣೆಯಿಂದ ಪ್ರಕಟವಾಗುತ್ತಿದ್ದ 'ಕೇಸರಿ' ವೃತ್ತಪತ್ರಿಕೆಯು "ರಷ್ಯಾ ನಾಯಕ ಲೆನಿನ್" ರನ್ನು ಕುರಿತು ಸ್ತುತಿಪರವಾದ ಲೇಖನವನ್ನು ಪ್ರಕಟಿಸಿತು. ಅದನ್ನು ಸ್ವತಃ ತಿಲಕರೇ ಬರೆದಿದ್ದರು.

"ಜನಪ್ರಿಯ ರಷ್ಯನ್ ನಾಯಕ ಲೆನಿನ್‌ರು ಜರ್ಮನ್ ಯುದ್ಧದ ಪುತ್ರರೆಂದೂ ಜರ್ಮನ್ ಸರ್ಕಾರದಿಂದ ಅವರು ಲಂಚ ಪಡೆದಿದ್ದಾರೆಂದು ನಿಂದಾತ್ಮಕ ಪ್ರಚಾರ ನಡೆಯುತ್ತಿರುವ ಕಾರಣದಿಂದಾಗಿ ನಾವು ಲೆನಿನ್‌ರ ಜೀವನದ ಪ್ರಮುಖ ವಾಸ್ತವಾಂಶಗಳನ್ನು ಪ್ರಕಟಿಸುತ್ತಿದ್ದೇವೆ. ರಷ್ಯಾ ಜನರು ಮಿತ್ರರಾಷ್ಟ್ರಗಳಿಗೆ ನಿಷ್ಠರಾಗಿರಬೇಕೆಂದಿದ್ದಾರೆಂದೂ, ಲೆನಿನ್‌ರು ಅವರ ಶತ್ರುವ ಮಿತ್ರರಾಷ್ಟ್ರಗಳ ಬಗ್ಗೆ ದ್ವೇಷಭಾವನೆಯನ್ನು ಹೊಂದಿದ್ದಾರೆಂದೂ ದೂಷಿಸಲಾಗುತ್ತದೆ." ಈ ಜೀವನ ಚರಿತ್ರೆಯು ಲೆನಿನ್‌ರನ್ನು ಕುರಿತ ಸರಿಯಾದ ವಾಸ್ತವಾಂಶಗಳನ್ನು ಒಳಗೊಂಡಿದೆ. ಬ್ರಿಟಿಷ್ ಪ್ರತಿಪ್ರಚಾರ ನಡೆಸುತ್ತಿದ್ದರೂ ಕೂಡಾ, ತಿಲಕ್ ಮತ್ತು ಅವರ ಅನುಯಾಯಿಗಳು ಲೆನಿನ್‌ರನ್ನು ಕುರಿತು, ರಷ್ಯಾ ಕ್ರಾಂತಿಯ ಸ್ವಭಾವವನ್ನು ಕುರಿತು ಚೆನ್ನಾಗಿ ತಿಳಿದುಕೊಂಡಿದ್ದರೆಂಬುದು ಈ ಜೀವನ ಚರಿತ್ರೆಯ ವೈಖರಿಯು ಸ್ಪಷ್ಟವಾಗಿ ತೋರಿಸುತ್ತದೆ.

'ಅಮೃತಬಜಾರ್' ಪತ್ರಿಕೆಯೂ ಲೆನಿನ್‌ರನ್ನು "ಪ್ರಚಂಡ ಮೇಧಾವಿ" ಎಂದು ಕರೆಯಿತು. ಮತ್ತು ೧೯೨೦ರ ಆಗಸ್ಟ್ ೧೭ರಂದು ಸಂಪಾದಕೀಯವಾಗಿ ಈ ರೀತಿ ಬರೆಯಿತು.

'ವಾಸ್ತವವಾಗಿ ಅವ್ಯವಸ್ಥೆಯಿಂದಿದ್ದ ರಷ್ಯಾದಲ್ಲಿ ಸೋವಿಯತ್‌ನಂತಹ ಸರ್ಕಾರ ಉದ್ಭವಿಸಲು ಸಾಧ್ಯವೆಂದು ೨ ವರ್ಷಗಳ ಮುನ್ನ ಯಾರಿಗಾದರೂ ಕನಸು ಕಾಣಲಾದರೂ ಸಾಧ್ಯವಿತ್ತೆ? ಸೋವಿಯತ್ ಸರ್ಕಾರವು ಯೂರೋಪಿನ ಯಾವುದೇ ಸರ್ಕಾರದಷ್ಟೆ ಶಕ್ತಿಯುತವಾಗಿರುವುದು ಮಾತ್ರವಲ್ಲ, ಅದರ ಕೆಲವು ಸೂತ್ರಗಳು ಜಗತ್ತಿನಲ್ಲಿ ಇತರ ಯಾವುದೇ ಸರ್ಕಾರವು ಅನುಸರಿಸುವ ಸೂತ್ರಗಳಿಗಿಂತ ಹೆಚ್ಚು ಉಜ್ವಲವಾಗಿದೆ!'

೧೯೧೮ರ ಜನವರಿ ೧೦ ರಂದು, ಅಂದರೆ ಅರೋರಾ ನೌಕೆಯು ತನ್ನ ಐತಿಹಾಸಿಕ ಗುಂಡುಗಳನ್ನು ಹಾರಿಸಿದ ಸುಮಾರು ೩ ತಿಂಗಳ ತರುವಾಯ 'ಲೀಡರ್' ಎಂಬ ಅಲಹಾಬಾದಿನ ವೃತ್ತಪತ್ರಿಕೆಯು "ಲೆನಿನ್-ವ್ಯಕ್ತಿ ಮತ್ತು ಅವರ ಗುರಿಗಳು" ಎಂಬ ಲೇಖನ ಪ್ರಕಟಿಸಿತೆಂದು ಸೋವಿಯತ್ ಭಾರತ ಶಾಸ್ತ್ರಜ್ಞ ಪಿ. ಶಾಸ್ಟಿಟ್ಕೋವ್ ಕಂಡು ಹಿಡಿದರು.

೧೯೧೭ನೇ ನವೆಂಬರ್ ೨೬ ರ ಹೊತ್ತಿಗಾಗಲೇ ಹೆಸರುಮಾಡಿದ ವಿಖ್ಯಾತ ಕವಿ ಸುಬ್ರಮಣ್ಯಭಾರತಿಯವರು ತಮಿಳು ವೃತ್ತಪತ್ರಿಕೆಗಳ ಒಂದರಲ್ಲಿ, ರಷ್ಯಾದಲ್ಲಿ ಖಾಸಗಿ ಆಸ್ತಿಯನ್ನು ರದ್ದುಪಡಿಸಲಾಗಿದೆಯೆಂದು, ಅದು ಇಡೀ ರಾಷ್ಟ್ರದ ಸ್ವತ್ತಾಗಿದೆಯೆಂದು ಬರೆದಿದ್ದರು."

ರಷ್ಯಾದಲ್ಲಿ ಸಮಾಜವಾದಿ ಪಾರ್ಟಿಯು "ಶ್ರೀಮಾನ್ ಲೆನಿನ್‌ರ ನಾಯಕತ್ವದಲ್ಲಿ" ತನ್ನ ಗುರಿಯನ್ನು ಸಾಧಿಸಿತೆ ಎಂದು ಅವರು ಪ್ರಶ್ನಿಸಿದ್ದರು.

"ಸರ್ವಸಮಾನತೆಯ ಆಧಾರದ ಮೇಲೆ ಜಗತ್ತಿನ ಜನತೆಗಳ ನಡುವೆ" ಸಂಪತ್ತಿನ ಹಂಚಿಕೆಯ ಸೂತ್ರವು ಜಾರಿಯಲ್ಲಿರಬೇಕೆಂದು ಅವರು ಸೂಚಿಸಿದ್ದರು. ಅನಂತರ ಅವರ ಲೇಖನಗಳು ಭಾರತೀಯರ ಪ್ರಬಂಧಗಳು ಎಂಬ ಸಂಗ್ರಹದಲ್ಲಿ ಪ್ರಕಟವಾದವು. ವಿ.ಐ.ಲೆನಿನ್‌ರು ಸೋವಿಯತ್ ರಷ್ಯಾದ ಕಾರ್ಮಿಕ ಜನತೆಯ ನಾಯಕರಾಗಿದ್ದರೆಂದೂ, ಅವರ ಮಾರ್ಗದರ್ಶನದಲ್ಲಿ ರಷ್ಯಾದಲ್ಲಿ ಪ್ರಚಂಡ ಬದಲಾವಣೆಗಳು ನಡೆಯುತ್ತಿವೆಯೆಂದೂ ಭಾರತದಲ್ಲಿ ಮೊಟ್ಟ ಮೊದಲು ನಮೂದಿಸಿದವರಲ್ಲಿ ಭಾರತೀ ಅವರು ಒಬ್ಬರು.

ಪಾತ್ರ, ಶೇರು ಪೇಟೆಗಳಲ್ಲಿ ಸಾಮಾಜೀಕರಣದ ಪ್ರಕ್ರಿಯೆ ನಡೆಯುತ್ತಿರುವುದನ್ನು ಲೆನಿನ್ ಕಾಣುತ್ತಾರೆ. ಮಾರ್ಕ್ಸ್ ಕಲ್ಪಿಸಿದುದಕ್ಕಿಂತ ಭಿನ್ನವಾದ ಮಾರ್ಕ್ಸ್‌ವಾದವನ್ನು, ಆದರೆ ಕೇವಲ ಈ ಘಟ್ಟದ ಬೆಳವಣಿಗೆಯ ಸ್ವರೂಪದಲ್ಲಿ ಮಾತ್ರ ಈ ಭಿನ್ನತೆಯಿರುವ ಮಾರ್ಕ್ಸ್‌ವಾದವನ್ನು ಹೇಳುತ್ತಾರೆ. (ಸಂಪುಟ ೨೨, ೩೦೪)

ಉತ್ಪಾದನೆಯ ಮತ್ತು ಬಂಡವಾಳದ ಕೇಂದ್ರೀಕರಣದಿಂದ ಕೇಂದ್ರೀಕೃತ ಮತ್ತು ಕೇಂದ್ರೀಕೃತವಾಗಿಲ್ಲದ ವಿಭಾಗಗಳ ನಡುವೆ, ಕೆಲವೇ ಜನ ಹಣಕಾಸು ಬಂಡವಾಳಿಗರ ಅಧಿಪತ್ಯ ಮತ್ತು ಇತರರ ನಡುವೆ, ಗುತ್ತೇದಾರಿಗಳು ಮತ್ತು ಅವರ ದೇಶಗಳ ನಡುವೆ ಜಗತ್ತಿನ ವಿಭಜನೆ ಮತ್ತು ಮರು ವಿಭಜನೆಗಾಗಿ ತಿಕ್ಕಾಟಗಳು ಉಂಟಾಗುತ್ತವೆ. ಈಗಾಗಲೇ ವಿವರಿಸಿರುವ ತಂತಮ್ಮ ದೇಶಗಳೊಳಗೆ ಶ್ರಮ ಜೀವಿ ವರ್ಗದೊಡನೆ ಮತ್ತು ಸಾಹತುಗಳ ಜನಗಳೊಂದಿಗೆ ತಿಕ್ಕಾಟಗಳ ಜೊತೆಗೆ ಈ ತಿಕ್ಕಾಟಗಳು ಉಂಟಾಗುತ್ತವೆ. ಸಾಮ್ರಾಜ್ಯಶಾಹಿ ಸರಪಣಿಯ ಅತ್ಯಂತ ದುರ್ಬಲ ಕೊಂಡಿಯನ್ನು ಮುರಿಯುವ ಈ ಅಂಶದಿಂದಲೇ ಕ್ರಾಂತಿಯ ಲೆನಿನ್‌ವಾದೀ ರಣನೀತಿ, ಕಾರ್ಯವ್ಯೂಹ ಮೂಡಿ ಬಂದದ್ದು. ರಷ್ಯಾದ ಝಾರ್ ಶಾಹೀ ಸಾಮ್ರಾಜ್ಯ ಈ ಅತ್ಯಂತ ದುರ್ಬಲ ಕೊಂಡಿ. ಇದನ್ನು ಮುರಿದು ಈ ಸಾಮ್ರಾಜ್ಯ ಕೂಡಿ ಹಾಕಿ ಕಟ್ಟಿಟ್ಟ ಜನಗಳನ್ನು ಮುಕ್ತಗೊಳಿಸಿ ಒಂದು ಸಮಾಜವಾದಿ ಪ್ರಭುತ್ವದಲ್ಲಿ ಅವರನ್ನು ಒಂದುಗೂಡಿಸುವ ಕಾರ್ಯವ್ಯೂಹ ಇದು. ಸಾಮ್ರಾಜ್ಯಶಾಹಿ ಘಟ್ಟ ಬಂಡವಾಳಶಾಹಿಯ ಕೊನೆಯ ಘಟ್ಟ, ಎಂದು ಲೆನಿನ್ ಭವಿಷ್ಯ ನುಡಿದರು, ಆ ಪ್ರಕಾರ ಕಾರ್ಯಾಚರಣೆಗಿಳಿದರು, ಅದನ್ನು ಸಾಬೀತು ಪಡಿಸಿದರು. ಎರಡು ಮಹಾ ಯುದ್ಧಗಳ ನಡುವೆ ಮಹಾನ್ ಅಕ್ಟೋಬರ್ ಕ್ರಾಂತಿಯನ್ನು ನಡೆಸಿ, ಅದನ್ನು ಕಾಪಾಡಿ ಬಂಡವಾಳಶಾಹಿಯಿಂದ ಸಮಾಜವಾದದತ್ತ ಪರಿವರ್ತನೆಯ ಯುಗದ ಹರಿಕಾರರಾದರು.

ಸಾಮ್ರಾಜ್ಯಶಾಹಿಯನ್ನು, ಗುತ್ತೇದಾರಿ ಬಂಡವಾಳ ಶಾಹಿಯನ್ನು ಅವರು ಕೊನೆಯ ಘಟ್ಟವೆಂದರೂ, ಮರಣೋನ್ಮುಖ ಘಟ್ಟವೆಂದರೂ, ಅದರಲ್ಲಿ ಬಂಡವಾಳಶಾಹಿಯ ತ್ವರಿತ ಬೆಳವಣಿಗೆ ನಡೆಯುವುದಿಲ್ಲ ಎಂದು ಅವರು ಹೇಳಲಿಲ್ಲ. ಸಾಮ್ರಾಜ್ಯ ಶಾಹಿಯ ಯುಗದಲ್ಲಿ ಉದ್ದಿಮೆಯ ಕೆಲವು ಶಾಖೆಗಳು, ಬೂರ್ಜ್ವಾ ವರ್ಗದ ಕೆಲವು ಸ್ತರಗಳು ಮತ್ತು ಕೆಲವು ದೇಶಗಳಲ್ಲಿ ಒಂದರಲ್ಲಿ ಅಲ್ಪದಿದ್ದರೆ ಮತ್ತೊಂದರಲ್ಲಿ ಒಂದಿಲ್ಲೊಂದು ಅವಧಿಯಲ್ಲಿ ಈ ಪ್ರವೃತ್ತಿಗಳನ್ನು ಅಂದರೆ ಬೆಳವಣಿಗೆ ಮತ್ತು ಅವನತಿಯ ಪ್ರವೃತ್ತಿಗಳನ್ನು ತೋರ್ಪಡಿಸಿವೆ ಎಂದು ಹೇಳುವ ಅವರು ನಂತರ ದೃಢವಾಗಿ ಹೇಳುತ್ತಾರೆ. "ಒಟ್ಟಾರೆಯಾಗಿ ಬಂಡವಾಳಶಾಹಿ ಹಿಂದಿಗಿಂತ ಬಹು ಹೆಚ್ಚಿನ ವೇಗದಲ್ಲಿ ಬೆಳೆಯುತ್ತದೆ. ಆದರೆ ಈ ಬೆಳವಣಿಗೆ ಹೆಚ್ಚೆಚ್ಚು ಅಸಮಾನಗೊಳ್ಳುತ್ತಾ ಹೋಗುತ್ತದೆ. ಈ ಅಸಮಾನ ಬೆಳವಣಿಗೆ ವಿಶೇಷವಾಗಿ ಬಂಡವಾಳದಲ್ಲಿ ಅತ್ಯಂತ ಶ್ರೀಮಂತವಾದ ದೇಶಗಳ ಅವನತಿಯಲ್ಲಿ ವ್ಯಕ್ತಗೊಳ್ಳುತ್ತದೆ (ಬ್ರಿಟನ್)" (ಸಂಪುಟ ೨೨, ೩೦೦) ಅದೇ ಸಮಯದಲ್ಲಿ ಜರ್ಮನಿಯಲ್ಲಾಗುತ್ತಿದ್ದ ವೇಗದ ಬೆಳವಣಿಗೆಯ ಬಗ್ಗೆ ರೈಸರ್ ಎಂಬ ಜರ್ಮನ್ ಅರ್ಥಶಾಸ್ತ್ರಜ್ಞನೊಬ್ಬನ ಮಾತುಗಳನ್ನು ಉಚ್ಚರಿಸುತ್ತಾರೆ. ಜರ್ಮನಿಯಲ್ಲಿ ಸಾಮ್ರಾಜ್ಯಶಾಹಿ ಬೆಳೆಯುವ ಮೊದಲಿನ ಬಂಡವಾಳ ಶಾಹಿ ಬೆಳವಣಿಗೆ ಜಟಕಾಗಾಡಿಯ ವೇಗದಲ್ಲಿ ಸಾಗುತ್ತಿದ್ದರೆ ಸಾಮ್ರಾಜ್ಯಶಾಹಿ ಯುಗದ ಬೆಳವಣಿಗೆ ಆಧುನಿಕ ಮೋಟಾರ್ ಗಾಡಿಯ ಜರ್ಮನ್ ಸಾಮ್ರಾಜ್ಯಶಾಹಿ ಇದನ್ನು ಅಕ್ಷರಶಃ ತೋರಿಸಿಕೊಟ್ಟಿತು ಲಕ್ಷಾಂತರ ಮುಗ್ಧರನ್ನು ಬಲಿ ತೆಗೆದು ಕೊಂಡಿತಷ್ಟೇ ಹೆಚ್ಚಿನ ಬಳಗವನ್ನು ಕೊಂದಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಮ್ರಾಜ್ಯಶಾಹಿ ಬೆಳೆಯಿತೆಂದ ಕೂಡಲೆ ಬಂಡವಾಳಶಾಹಿಯ ಬೆಳವಣಿಗೆ ನಡೆಯುವುದಿಲ್ಲವೆಂದೇನೂ ಅಲ್ಲ. ಮೇಲೆ ಹೇಳಿದ ವೇಗವಾಗಿ ಸಾಗುತ್ತದೆ. ಎಂತಹ ವೇಗದಲ್ಲಿ ಸಾಗುತ್ತಿದೆ ಎಂದರೆ ಅದು ಮುಗ್ಧ ಪಾದಚಾರಿಗಳ ಜೀವನಕ್ಕೆ ಮಾತ್ರ ಕುತ್ತು ತಂದದ್ದಲ್ಲ, ಸ್ವತಃ ಆ ಕಾರಿನಲ್ಲಿರುವವರಿಗೂ ಅಪಾಯ ಬಂದೆರಗುವಷ್ಟು ವೇಗದಲ್ಲಿ ಸಾಗುತ್ತಿದೆ. ಜರ್ಮನ್ ಸಾಮ್ರಾಜ್ಯಶಾಹಿ ಇದನ್ನು ಅಕ್ಷರಶಃ ತೋರಿಸಿಕೊಟ್ಟಿತು. ಅದು ಮಿಲಿಯಾಂತರ ಮುಗ್ಧರನ್ನು ಕೊಂದಿತಷ್ಟೆ ಅಲ್ಲ, ಆ 'ಮೋಟಾರುಕಾರಿ'ನಲ್ಲಿದ್ದ ಹಿಟ್ಲರ್ ಮತ್ತು ಆತನ ಬಳಗವನ್ನೇ ಕೊಂದಿತು. ಇಲ್ಲಿ ಗಮನಿಸ ಬೇಕಾದ ಆ ಸಂಗತಿಯೆಂದರೆ ಸಾಮ್ರಾಜ್ಯಶಾಹಿ ಬೆಳೆಯಿತೆಂದರೆ ಕೂಡಲೇ ಬಂಡವಾಳಶಾಹಿಯ ಬೆಳವಣಿಗೆ ನಡೆಯುವುದಿಲ್ಲವೆಂದೇನೂ ಅಲ್ಲ ಮೇಲೆ


ಪುಟ 36ಕ್ಕೆ

'ಪ್ರಭುತ್ವ'ದ ಕುರಿತು ಲೆನಿನ್ನರ ಬೋಧನೆ

ಸಿ.ನಂಜುಂಡಪ್ಪ

ಕ್ರಾಂತಿಯೆಂದರೆ ಕಾರ್ಮಿಕ ವರ್ಗ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವುದು ಎಂದಾದರೆ ಪ್ರಭುತ್ವದ ಸ್ವರೂಪವೇನು? ಕಾರ್ಮಿಕ ವರ್ಗ ಪ್ರಭುತ್ವವನ್ನು ಏಕೆ ಸ್ಥಾಪಿಸಿಕೊಳ್ಳಬೇಕು? ಕಾರ್ಮಿಕ ಪ್ರಭುತ್ವದ ಸ್ವರೂಪ ಹೇಗಿರಬೇಕು? ಎಂಬ ಪ್ರಶ್ನೆಗಳಿಗೆ ಲೆನಿನ್ ಉತ್ತರ ಕಂಡುಕೊಳ್ಳಬೇಕಾಯಿತು ಮಾತ್ರವಲ್ಲ ಅವರಿಗೆ ಅನುಭವ ಶಿಕ್ಷಣ ನೀಡುವುದರಲ್ಲಿ ನಿರಂತರವಾಗಬೇಕಾಯಿತು. ಜೊತೆಗೆ ಬಂಡವಾಳಶಾಹಿ ಪ್ರಭುತ್ವದ ಸಂಸದೀಯ ವೇದಿಕೆಗಳನ್ನು ಕಾರ್ಮಿಕ ವರ್ಗ ಹೇಗೆ ಮತ್ತು ಏಕೆ ಉಪಯೋಗಿಸಿಕೊಳ್ಳಬೇಕು ಎಂಬ ಪ್ರಶ್ನೆಗೂ ಉತ್ತರಿಸಬೇಕಾಯಿತು. ಇದಕ್ಕೆ ಸಂಬಂಧಿಸಿ ಪ್ರಭುತ್ವದ ಸ್ವರೂಪವೇನು ಎಂಬ ಪ್ರಶ್ನೆಯ ಬಗ್ಗೆ ಲೆನಿನ್ ರವರ ಭಾಷಣವನ್ನು ಕಾಂ. ನಂಜುಂಡಪ್ಪನವರು ಉಲ್ಲೇಖಿಸಿದ್ದಾರೆ.

ತಲೆ ಮರೆಸಿಕೊಂಡಿದ್ದಾಗ ಅಧ್ಯಯನ



"ಪ್ರಭುತ್ವವು ಒಂದು ವರ್ಗವು ಇನ್ನೊಂದು ವರ್ಗವನ್ನು ಆಳುವುದನ್ನು ನಿರ್ವಹಿಸಲು ಇರುವ ಯಂತ್ರವಾಗಿದೆ".

"ಪ್ರಭುತ್ವವು ಒಂದು ವರ್ಗವು ಇನ್ನೊಂದು ವರ್ಗವನ್ನು ಮರ್ದಿಸಲು ಇರುವ ಯಂತ್ರವಾಗಿದೆ"

"ಪ್ರಭುತ್ವವು ಒಂದು ವರ್ಗಕ್ಕೆ ಇತರ ಅಧೀನ ವರ್ಗಗಳು ವಿಧೇಯವಾಗಿರುವಂತೆ ಮಾಡಲು ಇರುವ ಯಂತ್ರವಾಗಿದೆ" - ಲೆನಿನ್.

ಇತ್ತೀಚೆಗೆ ಪೂರ್ವಯುರೋಪಿನ ಅಲ್ಬೇನಿಯಾ ಹೊರತಾಗಿ ಇತರ ಸಮಾಜವಾದಿ ದೇಶಗಳ ವಿದ್ಯಮಾನಗಳಿಂದಾಗಿ ಸಾಮ್ರಾಜ್ಯಶಾಹಿಗಳು ಮತ್ತು ಬಂಡವಾಳಗಾರರು ತಮ್ಮ ಪ್ರಸಾರ ಮಾಧ್ಯಮಗಳ ಮೂಲಕ ಸಮಾಜವಾದವು ವಿಫಲವಾಗಿದೆಯೆಂದೂ, ಮಾರ್ಕ್ಸ್‌ವಾದ-ಲೆನಿನ್‌ವಾದವು ಹಳೆಯದಾಗಿ ವಿರೂಪವಾಗಿದೆಯೆಂದು ಡಂಗೂರ ಹೊಡೆಯುತ್ತಿರುವ ಸಂದರ್ಭದಲ್ಲಿ, ಸುಧಾರಣಾವಾದಿಗಳು, ಪರಿಷ್ಕರಣವಾದಿಗಳು ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ಪರಿಕಲ್ಪನೆಗಳನ್ನು, ಸೂತ್ರಗಳನ್ನು ಧಿಕ್ಕರಿಸಿ, ಕಡೆಗಣಿಸುತ್ತಿರುವ ಸಂದರ್ಭದಲ್ಲಿ, ಲೆನಿನ್‌ರ 120 ನೆಯ ವರ್ಧಂತಿಯಂದು (22-4-1990) ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ಪರಿಕಲ್ಪನೆಗಳ ಸೂತ್ರಗಳ ಅಧ್ಯಯನವು ಉಚಿತವಾಗಿದೆ.

"ಪ್ರಭುತ್ವ"ವು ಒಂದು ಗಹನವಾದ ವಿಚಾರವಾಗಿದೆ. ಲೆನಿನ್‌ರು 1919ಜುಲೈ 11 ರಂದು 'ಪ್ರಭುತ್ವ'ದ ಕುರಿತು ಸ್ವೆರ್ಡ್ಲೋವ್ ವಿಶ್ವವಿದ್ಯಾಲಯದಲ್ಲಿ ಮಾಡಿದ ಉಪನ್ಯಾಸದಲ್ಲಿ "...ಕಷ್ಟಕರವಾದ ವಿಷಯದ ಮೇಲಿನ ಈ ನನ್ನ ಮೊದಲ ಉಪನ್ಯಾಸದಲ್ಲಿ ನನ್ನ ವಿವರಣೆಯನ್ನು ನನ್ನ ಶ್ರೋತೃಗಳಲ್ಲನೇಕರಿಗೆ ಸಾಕಷ್ಟು ಸ್ಪಷ್ಟವಾಗಿರುವಂತೆ ಮತ್ತು ಅರ್ಥವಾಗುವಂತೆ ಮಾಡುವುದರಲ್ಲಿ ನಾನು ಯಶಸ್ವಿಯಾಗದೇ ಹೋಗುವ ಸಂಭವವೇ ಹೆಚ್ಚಾಗಬಹುದು. ಇದು ಹೀಗಾದಲ್ಲಿ ನೀವು ಅದರಿಂದ ಚಿಂತೆಗೊಳಗಾಗಬೇಕಿಲ್ಲವೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಪ್ರಭುತ್ವದ ಪ್ರಶ್ನೆಯು ಅತ್ಯಂತ ತೊಡಕಾದ, ಅತ್ಯಂತ ಕಷ್ಟಕರವಾದ ಪ್ರಶ್ನೆ. ಬಹುಶಃ ಬೇರಾವುದೇ ವಿಷಯಕ್ಕಿಂತ ಹೆಚ್ಚಾಗಿ ಈ ವಿಷಯವನ್ನು ಬಂಡವಾಳಶಾಹಿ ಪಂಡಿತರೂ, ಲೇಖಕರೂ, ತತ್ವ ಜ್ಞಾನಿಗಳೂ ತುಂಬಾ ಗೊಂದಲಗೊಳಿಸಿದ್ದಾರೆ." ಎಂದು ಪ್ರಾರಂಭದಲ್ಲಿಯೇ ಹೇಳಿದ್ದಾರೆ.

ಲೆನಿನ್ನರು ಮುಂದುವರಿದು ಮತ್ತೆ ಅದೇ ಉಪನ್ಯಾಸದಲ್ಲಿ ಹೀಗೆ ಹೇಳಿದ್ದಾರೆ: "ಬಂಡವಾಳಶಾಹಿ ವಿಜ್ಞಾನ, ತತ್ವಶಾಸ್ತ್ರ, ನ್ಯಾಯಶಾಸ್ತ್ರ, ಅರ್ಥಶಾಸ್ತ್ರ ಹಾಗೂ ಲೇಖನ ಉದ್ಯಮದ ಪ್ರತಿನಿಧಿಗಳು ಉದ್ದೇಶ ಪೂರ್ವಕವಾಗಿ ಹಾಗೂ ಅನುದ್ದಿಷ್ಟವಾಗಿ ಪ್ರಭುತ್ವದ ಪ್ರಶ್ನೆಯನ್ನು ಗೊಂದಲಗೊಳಿಸಿದ್ದಾರೆ. ಇಷ್ಟೊಂದು ಗೊಂದಲಗೊಳಿಸಿರುವ ಬೇರೊಂದು ಪ್ರಶ್ನೆಯನ್ನು ನೀವು ಕಾಣಲಾರಿರಿ ಎಂದು ನಾನಾಗಲೇ ಹೇಳಿದೇನೆ. ಇಂದಿಗೂ ಅದನ್ನು ಬಹುವೇಳೆ ಧಾರ್ಮಿಕ ಪ್ರಶ್ನೆಗಳೊಂದಿಗೆ ಗೊಂದಲಗೊಳಿಸಲಾಗುತ್ತಿದೆ. ಧಾರ್ಮಿಕ ಬೋಧೆಗಳಲ್ಲಿ ದೃಢ ನಂಬಿಕೆ ಇರುವವರಷ್ಟೇ ಅಲ್ಲ (ಇಂತಹವರಲ್ಲಿ ಅದನ್ನು ನಿರೀಕ್ಷಿಸುವುದು ತೀರಾ ಸಹಜವೇ) ತಾವು ಧಾರ್ಮಿಕ ಪೂರ್ವಾಗ್ರಹಗಳಿಂದ ಮುಕ್ತರಾದವರೆಂದು ಪರಿಗಣಿಸಿಕೊಳ್ಳುವವರು ಸಹ ಬಹುವೇಳೆ "ಪ್ರಭುತ್ವ"ದ ವಿಶಿಷ್ಟ ಪ್ರಶ್ನೆಯನ್ನು ಧರ್ಮದ ಪ್ರಶ್ನೆಗಳೊಂದಿಗೆ ಗೊಂದಲಗೊಳಿಸುತ್ತಾರೆ. ಆ ಬಗೆಗೆ ಒಂದು ಸಿದ್ಧಾಂತವನ್ನು, ಬಹುವೇಳೆ ತೊಡಕಾದ ಸಿದ್ಧಾಂತವನ್ನು ನಿರ್ಮಿಸಲು ಯತ್ನಿಸುತ್ತಾರೆ. ಅದಕ್ಕಾಗಿಯೇ ಒಂದು ಸೈದ್ಧಾಂತಿಕ, ತಾತ್ವಿಕ ಮನೋಧರ್ಮ ಹಾಗು ಸಮರ್ಥನೆಗಳನ್ನು ಸೃಜಿಸುತ್ತಾರೆ. ಪ್ರಭುತ್ವವು ದೈವ ನಿರ್ಮಿತವಾದ, ಅಲೌಕಿಕವಾದ ಯಾವುದೋ ಒಂದು ರಚನೆ, ಅದು ಒಂದು ರೀತಿಯ ಶಕ್ತಿ, ಈ ಶಕ್ತಿಯಿಂದಾಗಿಯೇ ಮಾನವ ಕುಲವು ಬಾಳಿ ಬದುಕಿರುವುದು, ಅದೊಂದು ದೈವ ಮೂಲದ ಶಕ್ತಿ, ಅದು ಜನರಿಗೆ ಮಾನವನಿಂದಲ್ಲದ ಆದರೆ ಅವನಿಗೆ

ಹೊರಗಿನಿಂದ ಕೊಡಲ್ಪಟ್ಟಿರುವ ಏನನ್ನೂ ನೀಡುತ್ತದೆ ಅಥವಾ ನೀಡಬಲ್ಲದು ಅಥವಾ ತನ್ನೊಂದಿಗೆ ತರುತ್ತದೆ. ಎಂದು ಅವರ ಈ ಸಿದ್ಧಾಂತವು ಪ್ರತಿಪಾದಿಸುತ್ತದೆ. ಈ ಸಿದ್ಧಾಂತವು ಶೋಷಿತ ವರ್ಗಗಳ - ಜಮೀನುದಾರರ ಹಾಗೂ ಬಂಡವಾಳಗಾರರ ಹಿತಗಳೊಂದಿಗೆ ಎಷ್ಟು ನಿಕಟವಾಗಿ ಸಂಬಂಧಿತವಾಗಿದೆ ಎಂದರೆ, ಅವರ ಹಿತಗಳಿಗೆ ಎಷ್ಟು ಸೇವೆ ಸಲ್ಲಿಸುತ್ತದೆಂದರೆ, ಬಂಡವಾಳಶಾಹಿಯನ್ನು ಪ್ರತಿನಿಧಿಸುವ ಜನರ ಎಲ್ಲಾ ಆಚಾರ ವ್ಯವಹಾರ, ಅಭಿಪ್ರಾಯ, ಹಾಗೂ ವಿಜ್ಞಾನಗಳಲ್ಲಿ ಅದು ಎಷ್ಟು ಗಾಢವಾಗಿ ಪೂರಿತವಾಗಿದೆಯೆಂದರೆ, ನೀವು ಅದರ ಕುರುಹುಗಳನ್ನು ಹೆಜ್ಜೆಹೆಜ್ಜೆಯಲ್ಲೂ ಕಾಣಬಹುದು. ಎಂದು ಹೇಳಲೇಬೇಕು.

'ಹಾಗಾದರೆ ಪ್ರಭುತ್ವದ ಸತ್ಯಾಂಶವೇನು? ಪ್ರಭುತ್ವವು ಎಂದೆಂದಿಗೂ ಇದ್ದೀತೇ? ಇದು ಯಾವಾಗ ಹುಟ್ಟಿತು? ಇದು ಮುಂದೆ ಎಂದೆಂದಿಗೂ ಇರುತ್ತದೆಯೇ? ಎಂದು ವಿಚಾರ ಮಾಡಬೇಕು. ಪ್ರಭುತ್ವವು ಇರದಿದ್ದ ಕಾಲವೂ ಒಂದು ಇದ್ದಿತು. ಸಮಾಜವು ವರ್ಗಗಳಾಗಿ ವಿಭಜನೆಗೊಂಡೆಡೆಗಳಲ್ಲೆಲ್ಲಾ, ವಿಭಜನೆಗೊಂಡಾಗಲೆಲ್ಲಾ, ಶೋಷಕರು ಶೋಷಿತರು ಕಾಣಿಸಿಕೊಂಡಾಗಲೆಲ್ಲಾ, ಪ್ರಭುತ್ವವು ಕಾಣಿಸಿಕೊಳ್ಳುತ್ತದೆ.

ಮಾನವನಿಂದ ಮಾನವನ ಶೋಷಣೆಯ ಮೊದಲ ರೂಪ ಹುಟ್ಟಿಕೊಳ್ಳುವುದಕ್ಕೆ ಮುನ್ನ ಸಮಾಜವು ವರ್ಗಗಳಾಗಿ - ಗುಲಾಮರ ಒಡೆಯರು ಹಾಗು ಗುಲಾಮರು ಎಂಬ ವರ್ಗಗಳಾಗಿ - ವಿಭಜನೆಆದ ಮೊದಲ ರೂಪಕ್ಕೆ ಮುನ್ನ ಬುಡಕಟ್ಟು ಕುಟುಂಬ ವಿದ್ದಿತು. ಈ ಆದಿಕಾಲದ ಸಾಕಷ್ಟು ನಿರ್ಧಿಷ್ಟವಾದ ಕುರುಹುಗಳು ಇಂದೂ ಸಹ ಅನೇಕ ಆದಿಕಾಲದ ಜನರ ಜೀವನದಲ್ಲಿ ಉಳಿದುಕೊಂಡಿದೆ. ಪ್ರಾಚೀನ ನಾಗರೀಕತೆಯನ್ನು ಅಭ್ಯಾಸಮಾಡುವಾಗ ಹೆಚ್ಚು ಕಮ್ಮಿ ಆದಿ ಕಾಲದ ಸಮತಾವಾದವನ್ನು ಹೋಲುವಂತಹ ಕಾಲವೊಂದು ಇದ್ದಿತು. ಆ ಕಾಲದಲ್ಲಿ, ಪ್ರಭುತ್ವವು ಇರಲಿಲ್ಲ. ಕ್ರಮಬದ್ಧವಾದ ದಬ್ಬಾಳಿಕೆಯ ಹಾಗೂ ಜನರನ್ನು ಬಲಪ್ರಯೋಗದಿಂದ ಅಧೀನತೆಯಲ್ಲಿರಿಸುವ ವಿಶೇಷ ಸಾಧನ ಯಾವುದೂ ಇರಿಲಿಲ್ಲ. ಅಂತಹ ವಿಶೇಷ ಸಾಧನವೇ ಪ್ರಭುತ್ವ.

ಪ್ರಾಚೀನ ನಾಗರೀಕತೆಯ ಕಾಲದಲ್ಲಿ ಸಾಮಾನ್ಯ ಸಂಬಂಧಗಳು ಸಮುದಾಯ ಜೀವನ, ಶಿಸ್ತು, ಕೆಲಸದ ಸುವ್ಯವಸ್ಥೆ.. ಇವುಗಳನ್ನು ಅಭ್ಯಾಸದ ಹಾಗೂ ಪರಂಪರೆಯ ಬಲದ ಮೇಲೆ ನೆಡೆದುಕೊಂಡು ಹೋಗುತ್ತಿದ್ದವು.- ಬಣದ ಹಿರಿಯರು ಅಥವಾ ಮಹಿಳೆಯರು ಅನುಭೋಗಿಸುತ್ತಿದ ಅಧಿಕಾರ ಅಥವಾ ಗೌರವದ ಮೇಲೆ ನಡೆದುಕೂಂಡು ಹೋಗುತ್ತಿದ್ದವು ಮಹಿಳೆಯರು ಆ ಕಾಲದಲ್ಲಿ ಬಹುವೇಳೆ ಪುರುಷರೊಂದಿಗೆ ಸರಿಸಮಾನ ಸ್ಥಾನಮಾನವನ್ನು ಹೊಂದಿರುತ್ತಿದ್ದರು ಅಷ್ಟೇ ಅಲ್ಲ, ಅನೇಕ ವೇಳೆ ಪುರುಷರಿಗಿಂತ ಹೆಚ್ಚಿನ ಸ್ಥಾನಮಾನಗಳನ್ನು ಹೊಂದಿರುತ್ತಿದ್ದರು.

ಕೇವಲ ಅಧಿಕಾರ ನಡೆಸುವುದರಲ್ಲಿಯೇ ಸಂಪೂರ್ಣವಾಗಿ ನಿರತರಾದ ಒಂದು ವಿಶೇಷ ವೃಂದದ ಜನರು ಕಾಣಿಸಿಕೊಂಡಾಗ, ಅಧಿಕಾರ ನಡೆಸಲು ಇತರರ ಸಂಕಲ್ಪವನ್ನು ಬಲ ಪ್ರಯೋಗದಿಂದ ಅಧೀನಗೊಳಿಸಿಕೊಳ್ಳಲು ಅವರಿಗೆ ಬಲೋದ್ಯಂದದ ಒಂದು ವಿಶೇಷ ಸಾಧನವು - ಸೈನ್ಯಗಳು, ವಿಶೇಷದಳಗಳು, ಕಾರಾಗೃಹಗಳು, ನ್ಯಾಯಾಲಯಗಳು, ಇತ್ಯಾದಿಗಳು- ಅವಶ್ಯವಾದಾಗ ಪ್ರಭುತ್ವವು ಕಾಣಿಸಿಕೊಳ್ಳುತ್ತದೆ. ಸಮಾಜವು ವರ್ಗಗಳಾಗಿ ವಿಭಜನೆಗೊಂಡಾಗಲೆಲ್ಲಾ , ಅಂದರೆ ಕೆಲವು ಜನರ ಗುಂಪು ಇತರರ ಶ್ರಮದ ಫಲಗಳನ್ನು ಸ್ವಾಧೀನಪಡಿಸಿಕೊಳ್ಳುವ ಕೆಲವು ಜನರು ಇತರರನ್ನು ಶೋಷಿಸುವ ಶಾಶ್ವತ ಸ್ಥಿತಿಯಲ್ಲಿರುವಂತೆ, ಸಮಾಜವು ವಿಭಜನೆಗೊಂಡಾಗ, ಜನರ ಮೇಲೆ ಬಲಪ್ರಯೋಗ ಮಾಡುವ ವಿಶೇಷ ಸಾಧನವಾಗಿ ಪ್ರಭುತ್ವವು ಹುಟ್ಟಿಕೊಂಡಿತು.

ಸಮಾಜವು ವರ್ಗಗಳಾಗಿ ವಿಭಜನೆಗೊಂಡುದು ಇತಿಹಾಸದ ಒಂದು ಮೂಲಭೂತ ವಾಸ್ತವಾಂಶ ಎಂಬುದನ್ನು ನಾವು ಯಾವಾಗಲೂ ಮನಸ್ಸಿನಲ್ಲಿ ಸ್ಪಷ್ಟವಾಗಿ ಇರಿಸಿಕೊಂಡಿರಬೇಕು. ಈಗ ಸಹಸ್ರಾರು ವರ್ಷಗಳಿಂದ , ಯಾವ ವಿನಾಯಿತಿಯು ಇಲ್ಲದೆ ಎಲ್ಲಾ ದೇಶಗಳಲ್ಲೂ ಎಲ್ಲಾ ಮಾನವ ಸಮಾಜಗಳೂ ಬೆಳೆದುಕೊಂಡು ಬಂದಿರುವ ರೀತಿಯೂ ಒಂದು ಸಾಮಾನ್ಯ ನಿಯಮಕ್ಕೆ, ಒಂದು ಕ್ರಮಬದ್ಧತೆ ಹಾಗು ಸುಸಂಗತತೆಗೆ ಅನುಗುಣವಾಗಿರುವುದನ್ನೇ ತೋರಿಸಿಕೊಡುತ್ತದೆ. ಇದರಂತೆ, ಮೊದಲು ವರ್ಗಗಳೇ ಇಲ್ಲದ ಸಮಾಜವು ಇದ್ದಿತು ಎಂಬುದನ್ನು ಮೇಲೆ ಹೇಳಿದೆ ಈ ಸಮಾಜ ಪದ್ಧತಿಯ ನಂತರ ಗುಲಾಮಗಿರಿಯ ಮೇಲೆ ಆಧರಿಸಿದ ಸಮಾಜವು ಬಂದಿತು. ಎರಡು ಸಾವಿರ ವರ್ಷಗಳ ಹಿಂದೆ ಈ ಗುಲಾಮಗಿರಿ ಸಮಾಜವು ತಾನೆ ತಾನಾಗಿ ಮೆರೆಯಿತು. ಸಮಾಜವು ಗುಲಾಮ ಒಡೆಯರು ಹಾಗೂ ಗುಲಾಮರು ಎಂದು ವಿಭಜನೆಗೊಂಡುದು ಮೊದಲನೆಯ ಮುಖ್ಯ ವರ್ಗ ವಿಭಜನೆಯಾಗಿತ್ತು, ಗುಲಾಮ ಒಡೆಯರ ವರ್ಗವು ಎಲ್ಲಾ ಉತ್ಪಾದನಾ ಸಾಧನಗಳ ಮೇಲೆ ಎಲ್ಲಾ ಭೂಮಿಯ ಮೇಲೆ ಎಲ್ಲಾ ಉಪಕರಣಗಳ ಮೇಲೆ ಅವು ಆ ಕಾಲದಲ್ಲಿ ಎಷ್ಟೇ ಅಪರಿಷ್ಕೃತವಾಗಿ ಅನಭಿವೃದ್ಧಿಗೊಂಡವಾಗಿದ್ದರೂ ಅವೆಲ್ಲವುಗಳ ಮೇಲೆ ಒಡೆತನ ಹೊಂದಿದ್ದಿತಷ್ಟೇ ಅಲ್ಲ, ಜನರ ಮೇಲೂ ಒಡೆತನ ಹೊಂದಿದ್ದಿತು. ಈ ವರ್ಗವನ್ನು ಗುಲಾಮ ಒಡೆಯರ ವರ್ಗವೆಂದು ಕರೆಯಲಾಗುತ್ತಿತ್ತು. ದುಡಿಮೆಯಲ್ಲಿ ತೊಡಗಿದ್ದ, ಇತರಿಗಾಗಿ ತಮ್ಮ ದುಡಿಮೆಯನ್ನು ಒದಗಿಸುತ್ತಿದ್ದ ಜನರನ್ನು ಗುಲಾಮರು ಎಂದು ಕರೆಯುತ್ತಿದ್ದರು. ಕೃಷಿ ದುಡಿಮೆಯ ಅತ್ಯಂತ ಒರಟು ರೂಪಗಳ ಮೇಲೆ ಯತ್ನಗಳನ್ನು ಕೇಂದ್ರೀಕರಿಸಿ ಒಂದಿಷ್ಟು ಮಿಗಿತಾಯ ಉತ್ಪನ್ನವನ್ನು ತಯಾರಿಸಲು ಸಾಧ್ಯವಾದಾಗ, ಈ ಮಿಗಿತಾಯ ಉತ್ಪನ್ನವು ಗುಲಾಮನ ಅತ್ಯಂತ ಹೀನ ಬದುಕಿಗೆ ಅತ್ಯವಶ್ಯವೇನೂ ಆಗಿರದೆ ಅದು ಗುಲಾಮನ ಒಡೆಯನ ಕೈಗೆ ಹೋದಾಗ, ಈ ರೀತಿಯಲ್ಲಿ ಈ ಗುಲಾಮ ಒಡೆಯರ ವರ್ಗದ ಅಸ್ತಿತ್ವವು ಭದ್ರಗೊಂಡಾಗ, - ಅದು ದೃಢವಾಗಿ ಬೇರೂರಲು ನೆರವಾಗಲೋಸುಗ ಪ್ರಭುತ್ವದ ಉಗಮವಾಯಿತು. ಗುಲಾಮಗಿರಿ ಸಮಾಜಪದ್ಧತಿಯ ಪ್ರಭುತ್ವವು ಗುಲಾಮರ ಒಡೆಯರಿಗೆ ಅಧಿಕಾರ ವಹಿಸಿಕೊಟ್ಟ ಸಾಧನವಾಯಿತು, ಗುಲಾಮರ ಮೇಲೆ ಆಡಳಿತ ಮಾಡಲು ಸಾಧ್ಯಮಾಡಿಕೊಟ್ಟಿತು.

ಇತಿಹಾಸದಲ್ಲಿ ಗುಲಾಮಪದ್ಧತಿಯ ನಂತರ ಪಾಳೆಯಗಾರಿ ಪದ್ಧತಿ (ಇದಕ್ಕೆ ಊಳಿಗಮಾನ್ಯ ಪದ್ಧತಿ, ಸಾಮಂತಶಾಹಿ ಪದ್ಧತಿ ಎಂಬ ಹೆಸರುಗಳು ಇವೆ) ಬಂದಿತು. ಹಲವು ದೇಶಗಳಲ್ಲಿ ಗುಲಾಮಗಿರಿಯೇ ತನ್ನ ಬೆಳವಣಿಗೆಯ ಅವಧಿಯಲ್ಲಿ ಪಾಳೆಯಗಾರಿ ಪದ್ಧತಿಯಾಗಿ ಕ್ರಮೇಣ ವಿಕಾಸಗೊಂಡಿತು. ಸಮಾಜವು ಈಗ ಪಾಳೆಯಗಾರಿ ಪ್ರಭು ಹಾಗು ಭೂದಾಸ ರೈತ ಎಂದು ಮೂಲಭೂತವಾಗಿ ವಿಭಜನೆಗೊಂಡಿತು. ಜನರ ನಡುವಿನ ಸಂಬಂಧಗಳ ರೂಪವು ಬದಲಾಯಿತು. ಹಿಂದೆ ಗುಲಾಮ ಒಡೆಯರು ಗುಲಾಮರನ್ನು ತಮ್ಮ ಆಸ್ತಿಯನ್ನಾಗಿ ಪರಿಗಣಿಸಿದ್ದರು. ಕಾಯಿದೆಯೂ ಈ ಅಭಿಪ್ರಾಯಕ್ಕೆ ಸಮರ್ಥನೆಯನ್ನು ನೀಡಿದ್ದಿತು ಮತ್ತು ಗುಲಾಮನನ್ನು ಅವನ ಒಡೆಯನಿಗೆ ಸಂಪೂರ್ಣವಾಗಿ ಸೇರಿದ ಚರಸ್ವತ್ತೆಂದು ಭಾವಿಸಿದ್ದಿತು. ಆದರೆ ಪಾಳೆಯಗಾರಿ ಸಮಾಜದಲ್ಲಿ ಭೂದಾಸ ರೈತನ ಮೇಲಿದ್ದ ವರ್ಗ ದಬ್ಬಾಳಿಕೆ ಹಾಗೂ ಪರಾಧೀನತೆಗಳು ಇದ್ದವು, ಆದರೆ ಅವನನ್ನು ಪಾಳೆಯಗಾರಿ ಪ್ರಭುವಿನ ಚರಸ್ವತ್ತೆಂದು ಭಾವಿಸಲಾಗುತ್ತಿರಲಿಲ್ಲ. ಪಾಳೆಯಗಾರಿ ಪ್ರಭುವು ಭೂದಾಸ ರೈತನ ದುಡಿಮೆಯನ್ನು ಪಡೆಯಲಷ್ಟೆ, ಅವನಿಂದ ಕೆಲವು ಸೇವಾ ಕಾರ್ಯಗಳನ್ನು ಕಡ್ಡಾಯವಾಗಿ ಪಡೆಯಲಷ್ಟೆ ಹಕ್ಕು ಹೊಂದಿದ್ದ.

ಶೋಷಣೆಯ ರೂಪದಲ್ಲಿ ಬದಲಾವಣೆಯಾದುದು ಗುಲಾಮಗಿರಿ ಪ್ರಭುತ್ವವನ್ನು ಪಾಳೆಯಗಾರಿ ಪ್ರಭುತ್ವವನ್ನಾಗಿ ಪರಿವರ್ತಿಸಿತು. ಗುಲಾಮ ಸಮಾಜದಲ್ಲಿ ಗುಲಾಮನಿಗೆ ಯಾವ ಹಕ್ಕುಗಳು ಇರಲಿಲ್ಲ, ಅವನನ್ನು ಮಾನವ ಜೀವಿ ಎಂದೇ ಪರಿಗಣಿಸುತ್ತಿರಲಿಲ್ಲ. ಪಾಳೆಯಗಾರಿ ಸಮಾಜದಲ್ಲಿ ರೈತನು ಭೂಮಿಗೆ ಬಂಧಿತನಾಗಿದ್ದನು. ಬಹುಸಂಖ್ಯಾತರಾಗಿದ್ದ ರೈತರು ಭೂಮಿಗೆ ಬಂಧಿತರೆಂದು ಪರಿಗಣಿಸಲ್ಪಟ್ಟುದುದು ಪಾಳೆಯಗಾರಿ ಸಮಾಜದ ಪ್ರಧಾನ ಲಕ್ಷಣವಾಗಿದ್ದಿತು. ಗೊತ್ತು ಪಡಿಸಿಕೊಟ್ಟಿದ್ದ ರೈತನು ತನಗಾಗಿ ಒಂದು ನಿರ್ದಿಷ್ಟ ಸಂಖ್ಯೆಯ ದಿನಗಳಲ್ಲಿ ಕೆಲಸ ಮಾಡಬಹುದಿದ್ದಿತು ಉಳಿದ ದಿನಗಳಲ್ಲಿ ಪಾಳೆಯಗಾರನಿಗಾಗಿ ದುಡಿಯುತ್ತಿದ್ದನು.

ತಮ್ಮ ಆಡಳಿತವನ್ನು ಉಳಿಸಿಕೊಂಡುಹೋಗಲು ಮತ್ತು ತಮ್ಮ ಅಧಿಕಾರವನ್ನು ರಕ್ಷಿಸಿಕೊಂಡು ಹೋಗಲು ಪಾಳೆಯಗಾರಿ ಪ್ರಭುಗಳು ತಮ್ಮ ಅಧೀನದಲ್ಲಿ ಅಧಿಕ ಸಂಖ್ಯೆಯ ಜನರನ್ನು ಒಂದುಗೂಡಿಸಿ ಇರಿಸಬಲ್ಲಂತಹ, ಅವರನ್ನು ಕೆಲವೊಂದು ನಿಯಮ ಹಾಗು ಕಟ್ಟುಪಾಡುಗಳಿಗೆ

ಒಳಪಡಿಸಿ ಇರಿಸಬಲ್ಲಂತಹ ಒಂದು ಸಾಧನವನ್ನು ಹೊಂದಿರಬೇಕಾಗಿದ್ದಿತು. ಇದೇ ಪಾಳೆಯಗಾರಿ ಪ್ರಭುತ್ವವಾಗಿದ್ದಿತು.

ವಾಣಿಜ್ಯವು ಸರಕು ವಿನಿಮಯವು ವಿಕಾಸಗೊಂಡುದು ಒಂದು ಹೊಸ ವರ್ಗ- ಬಂಡವಾಳಶಾಹಿ ವರ್ಗ- ಉದಯವಾಗುವುದಕ್ಕೆ ದಾರಿ ಮಾಡಿಕೊಟ್ಟಿತು. ಮಧ್ಯಯುಗದ ಕೊನೆಯ ಭಾಗದಲ್ಲಿ ಅಮೆರಿಕಾವನ್ನು ಕಂಡುಹಿಡಿದ ನಂತರ. ಜಾಗತಿಕ ವ್ಯಾಪಾರವು ಅಪಾರವಾಗಿ ವೃದ್ಧಿಗೊಂಡಾಗ, ಪ್ರಶಸ್ತ ಲೋಹಗಳ ಪ್ರಮಾಣ ಹೆಚ್ಚಿದಾಗ , ಬೆಳ್ಳಿ ಹಾಗು ಚಿನ್ನವು ವಿನಿಮಯದ ಮಾಧ್ಯಮವಾದಾಗ, ಹಣಚಲಾವಣೆಯು ವ್ಯಕ್ತಿಗಳಿಗೆ ಅಪಾರ ಸಂಪತ್ತನ್ನು ಶೇಖರಿಸಿಕೊಳ್ಳಲು ಸಾಧ್ಯಮಾಡಿಕೊಟ್ಟಾಗ, ಬಂಡವಾಳದ ಉದ್ಭವವಾಯಿತು. ಬೆಳ್ಳಿ ಹಾಗೂ ಚಿನ್ನವನ್ನು ಸಂಪತ್ತೆಂದು ಜಗತ್ತಿನಾದ್ಯಂತ ಮನ್ನಿಸಲಾಯಿತು. ಪಾಳೆಯಗಾರಿ ವರ್ಗದ ಆರ್ಥಿಕ ಶಕ್ತಿಯು ಕುಗ್ಗಿತು. ಹೊಸವರ್ಗದ ಬಂಡವಾಳದ ಪ್ರತಿನಿಧಿಗಳ - ಆರ್ಥಿಕ ಶಕ್ತಿಯು ಹಿಗ್ಗಿತು. ಸಮಾಜವು ಹೇಗೆ ಪುನರ್‌ನಿರ್ಮಿತವಾಯಿತೆಂದರೆ ಅದರಲ್ಲಿ ಎಲ್ಲಾ ಪ್ರಜೆಗಳು ಸಮಾನರಾಗಿದ್ದಂತೆ ಕಂಡುಬಂದರು. ಯಾರು ಎಷ್ಟೇ ಬಂಡವಾಳ ಹೊಂದಿರಲಿ ಎಲ್ಲರೂ ಕಾನೂನಿನ ಮುಂದೆ ಸಮಾನರು ಎಂಬ ಭಾವನೆ ಮೂಡಿತು. ವ್ಯಕ್ತಿಯೊಬ್ಬ ಭೂಮಿಯನ್ನು ಖಾಸಗಿ ಆಸ್ತಿಯಾಗಿ ಹೊಂದಿರಬಹುದು, ಅಥವ ಅವನು ತನ್ನ ಶ್ರಮ ಶಕ್ತಿಯನ್ನಲ್ಲದೇ ಬೇರಾವುದನ್ನು ಹೊಂದಿರದ ಬಡವನಾಗಿರಬಹುದು- ಎಲ್ಲರೂ ಕಾನೂನಿನ ಮುಂದೆ ಸಮಾನರು. ಕಾನೂನು ಎಲ್ಲರನ್ನೂ ಸಮಾನವಾಗಿ ಕಾಪಾಡುತ್ತದೆ ಎಂದು ಕಂಡುಬಂದಿತು. ಆದರೆ ವಾಸ್ತವವಾಗಿ ಬಂಡವಾಳ ಶಾಹಿ ಪ್ರಭುತ್ವವು ಆಸ್ತಿ ಹೊಂದಿರುವವರ ಆಸ್ತಿಯನ್ನು, ಯಾವ ಆಸ್ತಿಯನ್ನೂ ಹೊಂದಿರದ ಜನಸಮೂಹಗಳ ಧಾಳಿಯಿಂದ ಕಾಪಾಡುತ್ತದೆ. ಆಸ್ತಿಯಿಲ್ಲದವರು ತಮ್ಮ ಶ್ರಮಶಕ್ತಿಯನ್ನಲ್ಲದೆ ಬೇರೇನನ್ನೂ ಹೊಂದಿರದೆ ಸತತವಾಗಿ ದರಿದ್ರರಾಗಿ, ನಿರ್ಗತಿಕರಾಗಿ, ಶ್ರಮಜೀವಿಗಳಾಗಿ ಪರಿವರ್ತಿತ ರಾಗುತ್ತಾರೆ. ಇಂತಹುದಾಗಿದೆ ಬಂಡವಾಳ ಶಾಹಿ ಸಮಾಜ.

ಬಂಡವಾಳಶಾಹಿ ಸಮಾಜವು ಸ್ವಾತಂತ್ರ್ಯದ ಘೋಷಣೆಯನ್ನು ಹಾಕುತ್ತಾ ಹಳೆಯ ಪಾಳೆಯ ಗಾರಿ ಪದ್ಧತಿಯ ವಿರುದ್ಧ ಮುನ್ನಡೆಯಿತು. ಹದಿನೆಂಟನೆಯ ಶತಮಾನದ ಕೊನೆ ಹಾಗೂ ಹತ್ತೊಂಭತ್ತನೆಯ ಶತಮಾನದ ಆದಿ ಭಾಗದಲ್ಲಿ ಪಾಳೆಯಗಾರಿ ಪದ್ಧತಿಯು ಮುರಿದು ಬಿದ್ದಾಗ- ಪಾಳೆಯಗಾರಿ ಪ್ರಭುತ್ವದ ಸ್ಥಾನದಲ್ಲಿ ಬಂಡವಾಳ ಶಾಹಿ ಪ್ರಭುತ್ವವವು ಬಂದಿತು. ಈ ಪ್ರಭುತ್ವವು ಇಡೀ ಜನರಿಗೆ ಸ್ವಾತಂತ್ರ್ಯವೇ ತನ್ನ ಘೋಷಣೆ ಯೆಂದೂ, ತಾನು ಇಡೀ ಜನರ ಸಂಕಲ್ಪವನ್ನು ವ್ಯಕ್ತಪಡಿಸುವುದಾಗಿಯೂ, ತಾನು ವರ್ಗ ಪ್ರಭುತ್ವ ವಲ್ಲವೆಂದು ಘೋಷಿಸಿತು. ಈ ಸಮಾಜ ಪದ್ಧತಿ ಯನ್ನು ಇಡೀ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಮಾಜವಾದಿಗಳಿಗೂ ಬಂಡವಾಳಶಾಹಿ ಪ್ರಭುತ್ವಕ್ಕೂ ಘರ್ಷಣೆಯಾಗಿ ೧೯೧೭ ರಲ್ಲಿ ರಷ್ಯಾದಲ್ಲಿ ಕಾರ್ಮಿಕ ವರ್ಗದ ಕ್ರಾಂತಿಯಾಗಿ, ಕಾರ್ಮಿಕ ವರ್ಗದ ಪ್ರಭುತ್ವವು, ಕಾರ್ಮಿಕ ವರ್ಗದ ಸರ್ವಾಧಿಕಾರವೂ ಬಂದಿತು.


ರೈತ ಸಂದೇಶವಾಹಕರೊಂದಿಗೆ.

ಸಮಾಜವು ವರ್ಗಗಳಾಗಿ ವಿಭಜನೆಗೊಂಡು ದನ್ನು, ವರ್ಗಆಳ್ವಿಕೆಯ ರೂಪಗಳಲ್ಲಿ ಬದಲಾವಣೆ ಯಾದುದನ್ನು ಒಂದು ಮಾರ್ಗದರ್ಶಕ ಸೂತ್ರವನ್ನಾಗಿ ದೃಢವಾಗಿ ಹಿಡಿದುಕೊಂಡರಷ್ಟೇ ಪ್ರಭುತ್ವದ ಉಗಮ, ಬೆಳವಣಿಗೆ, ಅದರ ದಮನಕಾರಿ ಪಾತ್ರವನ್ನು ತಿಳಿದುಕೊಳ್ಳಲು ಸಾಧ್ಯವೆಂದು ಲೆನಿನ್ ಹೇಳಿರು ವುದರಿಂದ, ಪ್ರಭುತ್ವವಿಲ್ಲದಿದ್ದ ಪ್ರಾಚೀನ ಸಮಾಜ ದಿಂದ ಬಂಡವಾಳಶಾಹಿ ಸಮಾಜದ ಬೆಳವಣಿಗೆಯ ವರೆಗಿನ ವಿವಿಧ ಹಂತಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಬೇಕಾಯಿತು.

ಮೇಲೆ ಪ್ರಸ್ತಾಪಿಸಿದ ಉಪನ್ಯಾಸದಲ್ಲಿ ಲೆನಿನ್‌ರು ಹೇಳುತ್ತಾರೆ: " -ಈ ಬಂಡವಾಳದ ವಿರುದ್ಧವೇ ಇಂದು ವಿಶ್ವವ್ಯಾಪೀ ಹೋರಾಟ ನಡೆಯುವಂತಹ ಬದಲಾವಣೆಗಳಾಗಿದ್ದಾಗ್ಯೂ, ಇವೆಲ್ಲವುಗಳ ಮಧ್ಯವೂ ನೀವು ಈ ಒಂದೊಂದು ದೇಶದಲ್ಲಿ ಪ್ರಭುತ್ವ ಉದ್ಭವಿಸಿದುದನ್ನು ಯಾವತ್ತೂ ಕಂಡುಕೊಳ್ಳುವಿರಿ. ಅದು ಯಾವತ್ತೂ ಸಮಾಜದ ಹೊರಗಿನಿಂದ ಒಂದು ರೀತಿಯ ಸಾಧನವಾಗಿದ್ದುಕೊಂಡು ಬಂದಿದೆ. ಅದರಲ್ಲಿ ಯಾವತ್ತೂ ಒಂದು ಗುಂಪಿನ ಜನರಿರುತ್ತಾರೆ. ಅವರು ಸಂಪೂರ್ಣವಾಗಿ ಅಥವಾ ಬಹುಮಟ್ಟಿಗೆ ಸಂಪೂರ್ಣವಾಗಿ, ಅಥವಾ ಪ್ರಧಾನವಾಗಿ ಆಳವುದರಲ್ಲಿಯೇ ನಿರತರಾಗಿರುತ್ತಾರೆ. ಜನರನ್ನು ಆಳಲುಟ್ಟವರು ಹಾಗು ಆಳುವುದರಲ್ಲಿ ತಜ್ಞರಾದವರು ಎಂದು ವಿಭಜಿಸಲಾಗಿರುತ್ತದೆ. ಈ ಆಳುವುದರಲ್ಲಿ ತಜ್ಞರಾದವರು ಸಮಾಜಕ್ಕೂ ಮೇಲೆ ನಿಂತಿರುತ್ತಾರೆ. ಇವರನ್ನು 'ಆಳ್ವಿಕೆಗಾರರು', 'ರಾಜ್ಯಾಡಳಿತ ಪ್ರತಿನಿಧಿಗಳು' ಎಂದು ಕರೆಯಲಾಗುತ್ತದೆ. ಈ ಆಡಳಿತಯಂತ್ರವೂ, ಇತರರ ಮೇಲೆ ಆಡಳಿತ ನಡೆಸುವ ಈ ಜನರ ಗುಂಪು, ಯಾವತ್ತೂ ಬಲೋದ್ಭಂಧದ ಸಾಧನವೊಂದನ್ನು, ಭೌತಿಕ ಶಕ್ತಿಯ ಸಾಧನವೊಂದನ್ನು, ತನ್ನ ವಶದಲ್ಲಿ ಹೊಂದಿರುತ್ತದೆ. ಜನರ ಮೇಲೆ ನಡೆಸುವ ಈ ಬಲೋದ್ಭಂಧವು ಆದಿ ಕಾಲದ ದೊಣ್ಣೆಯ ರೂಪದಲ್ಲಿ ವ್ಯಕ್ತಗೊಂಡಿರಬಹುದು, ಇಲ್ಲವೇ ಮಧ್ಯಯುಗದಲ್ಲಿ ಕಂಡುಬಂದಂತಹ ಸಿಡಿಮದ್ದು ಅಸ್ತ್ರಗಳ ರೂಪದಲ್ಲಿ ವ್ಯಕ್ತಗೊಂಡಿರಬಹುದು, ಅಥವಾ ಕೊನೆಯದಾಗಿ ಈ ಇಪ್ಪತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡಿರುವ ಆಧುನಿಕ ಆಯುಧಗಳ ರೂಪದಲ್ಲಿರಬಹುದು. ಈ ಆಯುಧಗಳೀಗ ತಾಂತ್ರಿಕ ಅದ್ಭುತವಸ್ತುಗಳಾಗಿ ಕಾಣಿಸಿಕೊಂಡಿವೆ. ಇವು ಇಡಿಯಾಗಿ ಆಧುನಿಕ ಯಂತ್ರಕಲೆಯ ಇತ್ತೀಚಿನ ಸಾಧನೆಗಳ ಮೇಲೆ ಅವಲಂಬಿಸಿ ನಿರ್ಮಿತವಾಗಿವೆ. ಬಲೋದ್ಭಂಧದ ವಿಧಾನಗಳು ಬದಲಿದುವು, ಆದರೆ ಪ್ರಭುತ್ವ ಇದ್ದಾಗಲೆಲ್ಲಾ ಪ್ರತಿಯೊಂದು ಸಮಾಜದಲ್ಲೂ ಆಡಳಿತ ನಡೆಸಿದ, ಪ್ರತಿಯೊಂದರಲ್ಲೂ ಅಧಿಕಾರ ಚಲಾಯಿಸಿದ ಒಂದು ಗುಂಪುಮಾತ್ರ ಇದ್ದೇ ಇದ್ದಿತು. ಇವರು ವಿಶೇಷ ಪ್ರಾಬಲ್ಯ ಗಳಿಸಿಕೊಂಡಿದ್ದರೂ ತಮ್ಮ ಅಧಿಕಾರವನ್ನು ಉಳಿಸಿ ಕೊಂಡಿರಲೋಸುಗ ಇವರು ಭೌತಿಕ ಬಲೋದ್ಭಂಧದ ಒಂದು ಸಾಧನವನ್ನು ತಮ್ಮ ವಶದಲ್ಲಿ ಹೊಂದಿದ್ದರು. ಅದೊಂದು ಹಿಂಸೆಯ ಸಾಧನ



ರೈತ ಡೆಪ್ಯುಟಿಗಳ ಮೊದಲ ಅಖಿಲ-ರಷ್ಯಾ ಅಧಿವೇಶನದಲ್ಲಿ, ಜೂನ್ 1917

ಕ್ರಾಂತಿ ಸಾಧನೆಯಲ್ಲಿ ನಿರ್ಣಾಯಕವಾದ ಲೆನಿನ್‌ವಾದೀ ಸೂತ್ರ

ರೈತ - ಕಾರ್ಮಿಕ ವರ್ಗಗಳ ಸಖ್ಯತೆ

ರಷ್ಯಾದಲ್ಲಿ, ಚೈನಾದಲ್ಲಾಗಲಿ ವಿಯೆಟ್ನಾಂನಲ್ಲಾಗಲಿ ಕ್ಯೂಬಾದಲ್ಲಾಗಲಿ ಕ್ರಾಂತಿಗಳ ಯಶಸ್ಸಿಗೆ ಕಾರಣವಾದ ಒಂದು ಪ್ರಮುಖ ಲೆನಿನ್‌ವಾದೀ ಸೂತ್ರದ ಇತಿಹಾಸ, ಸಾಧನೆ, ಮಹತ್ವದ ಬಗ್ಗೆ ಬರೆಯುತ್ತಾರೆ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಪಿ.ರಾಮಚಂದ್ರರಾವ್

೧೯೬೪ರಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ೭ನೇ ಅಧಿವೇಶನದಲ್ಲಿ ಪಕ್ಷದ "ಕಾರ್ಯಕ್ರಮ"ವನ್ನು ಅಂಗೀಕರಿಸಿ ಭಾರತದಲ್ಲಿ ಕ್ರಾಂತಿಯ ಹಾದಿಯ ರೂಪುರೇಷೆಗಳನ್ನು ನಿರ್ದಿಷ್ಟಪಡಿಸಿತು. ಆ ಕಾರ್ಯಕ್ರಮದಲ್ಲಿ ಭಾರತದ ಕ್ರಾಂತಿಯ ಯಶಸ್ಸು ಕಾರ್ಮಿಕವರ್ಗವು ಭಾರತದಲ್ಲಿ ದೃಢವಾದ "ರೈತ-ಕಾರ್ಮಿಕ ವರ್ಗಗಳ ಸಖ್ಯತೆ"ಯನ್ನು ಯಶಸ್ವಿಯಾಗಿ ರೂಪೀಕರಿಸುವುದರ ಮೇಲೆ ಅವಲಂಬಿಸಿದೆ ಎಂದು ಸ್ಪಷ್ಟಪಡಿಸಿತು. ಇದು ಭಾರತದ ಕ್ರಾಂತಿಯ ಆಧಾರಸ್ತಂಭವೂ ಹೌದು.

ಮಾರ್ಕ್ಸ್‌ವಾದಿ - ಲೆನಿನ್‌ವಾದಿ ತತ್ವ ಶಾಸ್ತ್ರವನ್ನು ಆಯಾಯ ದೇಶದ ವಿಶಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸಿ ಕಾರ್ಮಿಕ ವರ್ಗವು ಬಂಡವಾಳಶಾಹಿ ಮತ್ತು ಪಾಳೆಯಗಾರಿ ವರ್ಗಗಳ ಕೈಗಳಿಂದ ರಾಜಕೀಯ ಅಧಿಕಾರವನ್ನು ಕಿತ್ತುಕೊಳ್ಳುವ ಹೋರಾಟದ ದಾರಿಯಲ್ಲಿ ಈ ರೈತ-ಕಾರ್ಮಿಕ ವರ್ಗಗಳ ಸಖ್ಯತೆ"ಯ ಸೂತ್ರವು ಬಹಳ ಪ್ರಾಯೋಗಿಕ ಮಹತ್ವವುಳ್ಳದ್ದಾಗಿರುತ್ತದೆ.

ಮಾರ್ಕ್ಸ್ ಮತ್ತು ರೈತ ಕಾರ್ಮಿಕರ ಸಖ್ಯತೆ

೧೮೪೮-೪೯ರ ಸುಮಾರಿನಲ್ಲಿ ಜರ್ಮನಿಯಲ್ಲಿ ಬಂಡವಾಳಶಾಹಿ ವರ್ಗದ ನೇತೃತ್ವದಲ್ಲಿ ಅಲ್ಲಿನ ಪಾಳೆಯಗಾರಿ ಮಿಲಿಟರಿ ಶಕ್ತಿಗಳ ವಿರುದ್ಧ ನಡೆದ ದಂಗೆಗಳಲ್ಲಿ ಸೋಲು ಅನುಭವಿಸಿದಾಗ ಬಂಡವಾಳಶಾಹಿವರ್ಗವು ಆಡಳಿತಶಕ್ತಿಗಳಿಗೆ ಶರಣಾಯಿತು; ತನ್ನ ಕ್ರಾಂತಿಕಾರಿ ಆಶಯಗಳನ್ನು ಕೈ ಬಿಟ್ಟಿತು. ಪಾಳೆಯಗಾರಿ ವರ್ಗ ಶಕ್ತಿಗಳೊಡನೆ ಸಹಕಾರ ಮಾಡುವ ನೀತಿ ಅನುಸರಿಸಲಾರಂಭಿಸಿತು. ಆದರೆ, ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ಕಾರ್ಮಿಕ ವರ್ಗದ ನೇತಾರರಾಗಿ "ಈ ದಾರಿಗಳ ಸೋಲಿಗೆ ಮೂಲಭೂತ ಕಾರಣಗಳೇನು" ಎಂಬುದನ್ನು ಶೋಧಿಸಲು ಆರಂಭಿಸಿದರು. ಈ ಸೋಲಿಗೆ ಪ್ರಮುಖ ಕಾರಣ, ಅಂದು ಸಮಾಜದ ಬಹುಭಾಗವಾಗಿದ್ದ ರೈತರು ಈ ದಂಗೆಗಳಲ್ಲಿ ಬಂಡವಾಳಶಾಹಿ ಕಾರ್ಮಿಕ ವರ್ಗದ ನೇತೃತ್ವದ ಬಂಡಾಯಗಾರರಿಗೆ ಅನುಕೂಲ ಮನೋಭಾವ ತಾಳದಿದ್ದುದೇ ಆಗಿದೆ ಎಂದು ಅವರು ಕಂಡುಕೊಂಡರು. ಕಾರ್ಮಿಕವರ್ಗ ಪುನಃ ದಂಗೆ ನಡೆಸಿ ಯಶಸ್ವಿಯಾಗಬೇಕಾದಲ್ಲಿ ಅವರು ತಮ್ಮ ವರ್ಗದ ಶಕ್ತಿಗಳ ಜತೆಯಲ್ಲಿ ರೈತ ವರ್ಗಗಳ ಶಕ್ತಿಯನ್ನು ಸಂಯೋಜಿಸಬೇಕಾಗಿದೆ ಎಂಬ ನಿರ್ಧಾರಕ್ಕೆ ಬಂದರು.

೧೮೭೧ ರಲ್ಲಿ ಫ್ರಾನ್ಸಿನಲ್ಲಿ ಪೇರಿಸ್ ಕ್ರಾಂತಿ ನಡೆಯಿತಷ್ಟೆ. ಆ ಕ್ರಾಂತಿಯಲ್ಲಿ ಸ್ಥಾಪಿತವಾದ ಕಾರ್ಮಿಕ ವರ್ಗದ ನೇತೃತ್ವದ ಪ್ರಭುತ್ವವು ಯಾಕೆ ಕೇವಲ ಅರವತ್ತು ದಿನಗಳಲ್ಲಿ "ಕುಸಿಯಿತು", ಪುನಃ "ಬಂಡವಾಳಶಾಹಿಗಳು ಹೇಗೆ ಅಧಿಕಾರವನ್ನು ವಹಿಸಿಕೊಳ್ಳಲು ಸಾಧ್ಯವಾಯಿತು" ಎಂಬುದನ್ನು ಮಾರ್ಕ್ಸ್‌ರು ಕಾರ್ಮಿಕವರ್ಗದ ಪ್ರಥಮ ಅಂತರರಾಷ್ಟ್ರೀಯ"ದಲ್ಲಿ ವಿಶ್ಲೇಷಿಸುತ್ತಾ ಹೀಗೆ ಹೇಳುತ್ತಾರೆ: "ಫ್ರಾನ್ಸಿನ ವಿಶಾಲ ರೈತ ವಿಭಾಗಗಳಿಗೆ ಕಾರ್ಮಿಕ ವರ್ಗದ ನೇತೃತ್ವದ 'ಪೇರಿಸ್ ಕಮ್ಯೂನ್' ರೈತರ ವೈರಿ ಪ್ರಭುತ್ವ ಅಲ್ಲ. ಬದಲು ಅತ್ಯಂತ ಸ್ನೇಹಪೂರ್ವಕವಾದ ಪ್ರಭುತ್ವ

ಎಂಬುದನ್ನು ಮನದಟ್ಟು ಮಾಡಿಕೊಡಲು ಆಗಿನ ನೇತೃತ್ವಕ್ಕೆ ಸಾಧ್ಯವಾಗಲಿಲ್ಲ, ಇದೇ ಅವರ ಸೋಲಿಗೆ ಕಾರಣ. ಬಂಡವಾಳಶಾಹಿಗಳು ಸುಳ್ಳು ಪ್ರಚಾರ ನಡೆಸಿ "ರೈತ ವಿಭಾಗಗಳನ್ನು ತಮ್ಮೆಡೆಗೆ ಸೆಳೆದುಕೊಂಡು ಕಾರ್ಮಿಕರ ಪ್ರಪ್ರಥಮ ಕ್ರಾಂತಿಕಾರಿ ಪ್ರಭುತ್ವವನ್ನು ನಾಶಮಾಡಿದರು."

ಈ ಸೂತ್ರವು ಮಾರ್ಕ್ಸ್‌ವಾದ-ಲೆನಿನ್‌ವಾದದ ಒಂದು ಪ್ರಮುಖ ಕ್ರಾಂತಿಕಾರಕ ಸೂತ್ರವಾಗಿ ಬೆಳೆದು ಬಂತು.

ಕ್ರಾಂತಿಯ ಹೋರಾಟದಲ್ಲಿ ಲೆನಿನ್ ಪ್ರತಿಪಾದನೆ. ಸುಧಾರಣಾವಾದಿಗಳೊಡನೆ ಸಂಘರ್ಷ.

೧೯೦೫-೦೬-೦೭ ರಲ್ಲಿ ಜಾಹಾರ್ ಶಾಹಿ ರಷ್ಯಾದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತೃತವಾಗಿ ಶತಮಾನ ಶತಮಾನಗಳ ತುಳಿತ - ದಬ್ಬಾಳಿಕೆ - ತೀವ್ರ ಶೋಷಣೆಗಳಿಗೆ ಒಳಗಾದ ರೈತಾಪಿ ಜನ ವಿಭಾಗಗಳು ಪಾಳೆಯಗಾರಿ ಮನೆತನಗಳ ವಿರುದ್ಧ ಸಶಸ್ತ್ರ ದಂಗೆಗಳಲ್ಲಿ ತೊಡಗಿದಾಗ, ರಷ್ಯಾದ ಸಾಮಾಜಿಕ ಪ್ರಜಾಪ್ರಭುತ್ವ ಪಕ್ಷದ ಒಳಗೆ ತೀವ್ರವಾದ "ಸೈದ್ಧಾಂತಿಕ" ತಿಕ್ಕಾಟವುಂಟಾಯಿತು. ಈ ಸೈದ್ಧಾಂತಿಕ ತಿಕ್ಕಾಟದ ನೇತೃತ್ವವನ್ನು ಒಂದೆಡೆ ಕಾಂ| ಲೆನಿನ್‌ರವರು, ಇನ್ನೊಂದೆಡೆ ಕಾಂ| ಪ್ಲೆಖೋನೋವ್‌ರವರು ವಹಿಸಿದ್ದರು. ಈ ತಿಕ್ಕಾಟವು "ಕಾರ್ಮಿಕ ವರ್ಗದ ಪಕ್ಷವು ರೈತರ ದಂಗೆಗಳಲ್ಲಿ ಯಾವ ಪಾತ್ರವನ್ನು ವಹಿಸಬೇಕು?" ಎಂಬ ನಿಲುವಿಗೆ ಸಂಬಂಧ ಪಟ್ಟದ್ದಾಗಿತ್ತು. ಕಾಮ್ರೇಡ್ ಪ್ಲೆಖೋನೋವ್ ಮಾರ್ಕ್ಸ್‌ವಾದವನ್ನು "ಶುದ್ಧ"ವಾಗಿ ವಿಶ್ಲೇಷಿಸಿ, ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ಚಾರಿತ್ರಿಕ ಬೆಳವಣಿಗೆಯ ಸರಣಿಯನ್ನು "ಶುದ್ಧ"ವಾಗಿ ವಿಶ್ಲೇಷಿಸಿ, "ಈಗ ಜಾಹಾರ್‌ಶಾಹಿ ರಷ್ಯಾದಲ್ಲಿ ನಡೆಯುತ್ತಿರುವ ರೈತರ ದಂಗೆಗಳಲ್ಲಿ ಕಾರ್ಮಿಕ ವರ್ಗವು ನೇತೃತ್ವ ಪಾತ್ರ ವಹಿಸಬಾರದೆಂದೂ, ಆ ಚಾರಿತ್ರಿಕ ಪಾತ್ರವನ್ನು ರಷ್ಯಾದ ಬಂಡವಾಳಶಾಹಿ ವರ್ಗ ಮತ್ತಿತರ ಪಕ್ಷವು (ಯೂ ಪಕ್ಷಗಳು) ವಹಿಸಬೇಕೆಂದೂ, ಕಾರ್ಮಿಕವರ್ಗ ಮತ್ತು ಅದರ ಪಕ್ಷ (ಯೂ ಪಕ್ಷಗಳು) ತಟಸ್ಥವಾಗಿರಬೇಕೆಂದೂ" ವಾದಿಸಿದರು. ಲೆನಿನ್‌ರು, ಜಾಹಾರ್‌ಶಾಹಿ ರಷ್ಯಾದಲ್ಲಿ ಕಾರ್ಮಿಕವರ್ಗದ ಪಕ್ಷವು ಬಂಡವಾಳಶಾಹಿ ಪಕ್ಷಕ್ಕಿಂತ ಬಲಿಷ್ಠವಾಗಿದೆ ಎಂದೂ, ಅದು ರೈತರು ದಂಗೆಗಳನ್ನು ನಡೆಸುತ್ತಿರುವಾಗ ರೈತ ವಿಭಾಗಗಳ ಸಹಾಯಕ್ಕೆ ಧಾವಿಸಬೇಕೆಂದೂ, ಎಲ್ಲಾ ವಿಧಾನಗಳಲ್ಲಿ, ಅವರ ಮಧ್ಯೆ ಇದ್ದು ಅವರಿಗೆ ನೇತೃತ್ವ ಕೊಡಲು ಪ್ರಯತ್ನಿಸಬೇಕೆಂದೂ, ಪ್ರಮುಖವಾಗಿ ಅವರ ಮೇಲೆ ಬೀಳುತ್ತಿರುವ ಜಾಹಾರ್‌ಶಾಹಿ ಸೈನಿಕ ಪಡೆಗಳನ್ನು ಪೇಟೆ ಪಟ್ಟಣಗಳ ಬೀದಿಗಳಲ್ಲಿ ತಡೆಗಳನ್ನು ಒಡ್ಡುವಿಕೆ ಇತ್ಯಾದಿ ಸಮರಧೀರ ಕಾರ್ಯಕ್ರಮಗಳ ಮೂಲಕ ತಡೆ ಹಾಕಬೇಕೆಂದೂ" ವಾದಿಸಿದರು.

ರಷ್ಯಾದ ಕ್ರಾಂತಿಕಾರಿ ಚರಿತ್ರೆಯು ಲೆನಿನ್‌ರ ಅಂದಾಜು ಸರಿಯಾಗಿತ್ತು ಎಂಬುದನ್ನು ಸಾಧಿಸಿ ಕೊಟ್ಟಿದೆ. ಜತೆಜತೆಯಲ್ಲಿ ರೈತ-ಕಾರ್ಮಿಕ ವರ್ಗಗಳ ಸಖ್ಯತೆ ಕ್ರಾಂತಿಗೆ ಅತ್ಯಾವಶ್ಯಕವೆಂದೂ ತೋರಿಸಿಕೊಟ್ಟಿದೆ.

೧೯೦೭ - ೦೮ ರಲ್ಲಿ ರಷ್ಯಾದ "ಡ್ಯೂಮಾ" (ಪಾರ್ಲಿಮೆಂಟು) ದಲ್ಲಿ ರಾಷ್ಟ್ರದ ವಿವಿಧ ಪಕ್ಷಗಳು ರಷ್ಯನ್ ರೈತರ ಅತಿ ಮುಖ್ಯ ಪ್ರಶ್ನೆಯಾದ "ಭೂ ಸುಧಾರಣೆ"ಗಳ ಕುರಿತು ತೆಗೆದುಕೊಂಡ ನಿಲುಮೆಗಳ ಕುರಿತು ಲೆನಿನರು ಈ ರೀತಿ ವ್ಯಾಖ್ಯಾನ ಮಾಡಿದರು. "ಭೂ ಮಾಲೀಕರ ಪಕ್ಷ ಯಾವುದೇ ತರದ ಭೂಸುಧಾರಣೆಗಳನ್ನು ಜಾರಿಗೆ ತರುವುದು ಸರಿಯಲ್ಲ ಎಂಬ ಅತ್ಯಂತ ಬಲಪಂಥೀಯ ಧೋರಣೆಯನ್ನು ವಹಿಸುತ್ತಿದ್ದಾರೆ. ಬಂಡವಾಳಶಾಹಿಗಳ ಪಕ್ಷ ಕೆಡೆಟ್ ಪಕ್ಷ-ಜಾಹಾರ್ ಶಾಹಿಗೆ ಅನುಕೂಲಕರವಾದ ಧೋರಣೆಯನ್ನು ವಹಿಸಿ ನಿಜವಾಗಿ ಭೂಸುಧಾರಣೆಗಾಗಿ ಹೋರಾಡುತ್ತಿರುವ ರೈತರಿಗೆ ದ್ರೋಹ ಬಗೆಯುತ್ತಿದ್ದಾರೆ. ಕ್ರಾಂತಿಕಾರಿ ಸಮಾಜವಾದಿ ಪಕ್ಷ ಮತ್ತು ಬೋಲ್ಶೆವಿಕ್ ಪಕ್ಷಗಳು ರೈತರಿಗೆ ಭೂಸುಧಾರಣೆಗಳ ಅವಶ್ಯಕತೆ ಇದೆ ಎಂಬ ನಿಲುಮೆಯನ್ನು ತಾಳುತ್ತಿದ್ದಾರೆ. ಆದರೆ, ಬೋಲ್ಶೆವಿಕ್ ಪಕ್ಷ ಮಾತ್ರ ಕ್ರಾಂತಿಕಾರಿ ಭೂಸುಧಾರಣೆಗಳು ನಿಜವಾಗಿ ಜಾರಿಗೆ ತರಬೇಕಾದರೆ ರೈತರ ಕಡೆಯಲ್ಲಿ ನಿಂತು ಡ್ಯೂಮಾದ ಒಳಗೂ ಹೊರಗೂ ತೀವ್ರ ಹೋರಾಟ ಮಾಡಬೇಕು ಎಂಬ ನಿಲುಮೆಯನ್ನು ತಾಳುತ್ತಿದೆ." ಈ ಮೇಲಿನ ವ್ಯಾಖ್ಯಾನದಿಂದ 'ಲೆನಿನರು ಕಾರ್ಮಿಕ ವರ್ಗ ಮತ್ತು ರೈತವರ್ಗದ ಸಖ್ಯತೆಯನ್ನು ಪ್ರತಿಪಾದಿಸಿದ್ದರು ಮಾತ್ರವಲ್ಲ, ಅವರು ಅಂತಹ ಸಖ್ಯತೆಯನ್ನು ಹೇಗೆ ಹೋರಾಟದ ಮೂಲಕ ಮಾತ್ರ ಸಾಧಿಸಬಹುದೆಂಬುದನ್ನು" ತಿಳಿಯಬಹುದು.



ಬೂರ್ಜ್ವಾ ಸರ್ಕಾರದ ಭೂಸುಧಾರಣೆ ನೀತಿ ಕುರಿತು ವ್ಯಂಗ್ಯ

ಭೂಮಾಲಕ: ಒಂದು ಕಾಲ ಮೇಲೆ ಏಕೆ ನಿಂತಿದ್ದೀಯಾ?
ರೈತ: ಇನ್ನೊಂದು ಕಾಲಿಡಲು ಜಾಗವಿಲ್ಲ. ಎಲ್ಲೆಡೆ ಖಾವಂದರ ಭೂಮಿ. ಕಾಲಿಟ್ಟರೆ ಶಿಕ್ಷೆ ಅನುಭವಿಸಬೇಕು

ಕ್ರಾಂತಿಕಾರಿ ಸರ್ಕಾರದ ಮೊದಲ ಕೆಲಸ

ವಿಸ್ತೃತವಾದ ಮತ್ತು ದೃಢವಾದ ಕೆಲಸದ ಮೂಲಕ ರೈತರ ಸಂಘಟನೆಯನ್ನು ಲೆನಿನರು ಬಲಪಡಿಸಿದರು ಮತ್ತು ೧೯೧೭ ಅಕ್ಟೋಬರ್ ಕ್ರಾಂತಿಯಲ್ಲಿ ಅಧಿಕಾರ ಪಡೆದ ಮರು ದಿನವೇ ಲೆನಿನರು ಹೊರಡಿಸಿದ ಮೊದಲ ಘೋಷಣೆ ಶಾಂತಿ ಘೋಷಣೆ. ಎರಡನೇ ಡಿಕ್ರಿಯಾಗಿ ಭೂಸುಧಾರಣೆಯ ಡಿಕ್ರಿಯನ್ನು ಜಾರಿಗೊಳಿಸಿದರು. ಈ ಹುಕುಂ ಎಷ್ಟೊಂದು ಜನಪ್ರಿಯವಾಯಿತು ಎಂದರೆ ಅದು ವಿಶಾಲ ರೈತ ವಿಭಾಗಗಳನ್ನು ಕಾರ್ಮಿಕವರ್ಗದ ಕ್ರಾಂತಿಕಾರಿ ಪ್ರಭುತ್ವಕ್ಕೆ ಬೆಂಬಲ ಕೊಡುವಂತೆ ಅವರನ್ನು ಆ ಕಡೆಗೆ ಸೆಳೆಯಿತು.

ಲೆನಿನರು ಸತತವಾಗಿ ರೈತ ವಿಭಾಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ದೃಢಪಡಿಸಲು ಮತ್ತು ಮುಂದಕ್ಕೆ ಸಮಾಜವಾದಿ ಬೆಳವಣಿಗೆಯನ್ನು ರಷ್ಯಾದಲ್ಲಿ ಸಾಧಿಸಲು ಮಾರ್ಗ ಹಾಕಿದರು.

ಸಾಮ್ರಾಜ್ಯಶಾಹಿಗಳು ಮತ್ತು ದೇಶದ ಒಳಗಿನ ಛಿದ್ರಕಾರಿ ಶಕ್ತಿಗಳ ವಿರುದ್ಧ ನಡೆದ ೪-೫ ವರ್ಷ ಕಾಲದ ಆಂತರಿಕ ಯುದ್ಧದ ವೇಳೆ "ಎಲ್ಲವೂ ರಣರಂಗಕ್ಕೆ" ಎಂಬ ಘೋಷಣೆಗನು ಸಾರವಾಗಿ ರೈತರಿಂದ ಕಡ್ಡಾಯವಾಗಿ ಧಾನ್ಯಗಳನ್ನು ಲೆನಿನರ ನೇತೃತ್ವದ ಕ್ರಾಂತಿಕಾರಿ ಸರಕಾರವು ಪಡೆದುಕೊಂಡರೆ, ಆಂತರಿಕ ಯುದ್ಧ ಮುಗಿದು ಶಾಂತಿ ನೆಲೆಸಿದಾಕ್ಷಣ ಲೆನಿನರು "ನೂತನ ಆರ್ಥಿಕ ಧೋರಣೆಯನ್ನು ಜಾರಿಗೆ ತಂದು ಧಾನ್ಯಗಳ ಮಾರಾಟದ ವಿಷಯದಲ್ಲಿ ರೈತ ವಿಭಾಗಗಳು ಸ್ವತಂತ್ರರಾಗಿರಬೇಕು ಎಂದು ಸಾರಿದರು. ಈ ಧೋರಣೆಯ ಫಲವಾಗಿ ರಷ್ಯದ ಸ್ಥಗಿತಗೊಂಡ ಆರ್ಥಿಕವು ತೀವ್ರಗತಿಯಲ್ಲಿ ಚಲನೆಗೊಂಡು ಅಭಿವೃದ್ಧಿಗೊಂಡಿತು.

ಸಹಕಾರಿರಂಗ ಮತ್ತು ಸಮಾಜವಾದ

ಅನಂತರ ಲೆನಿನರು ಒಂದೆಡೆ ಸಮಾಜವಾದವೆಂದರೆ "ರಷ್ಯಾವನ್ನು ಸಂಪೂರ್ಣವಾಗಿ ವಿದ್ಯುದೀಕರಣಗೊಳಿಸುವುದು" ಎಂದು ವ್ಯಾಖ್ಯಾನಿಸಿದರೆ, ಇನ್ನೊಂದೆಡೆ "ದೀರ್ಘಕಾಲ ರಷ್ಯಾದಲ್ಲಿ ಕೈಗಾರಿಕೆಗಳನ್ನು ಕಾರ್ಮಿಕರ ಸಹಾಯದಿಂದ ಸರಕಾರವು ನಡೆಸಿಕೊಂಡು ಹೋಗುವುದರ ಜತೆಯಾಗಿ "ಕೃಷಿಯನ್ನು ರೈತರು ಸಹಕಾರಿ ಸಂಘಗಳನ್ನು ನಡೆಸಿಕೊಂಡು ಹೋಗುವ ಅವಶ್ಯವೆಂದು ವ್ಯಾಖ್ಯಾನಿಸಿದರು." ರೈತರ ವಿವಿಧ ವಿಭಾಗಗಳ ಸಹಕಾರಿ ಸಂಘಗಳ ಪ್ರಕ್ರಿಯೆಯು ಶಾಂತ ರೀತಿಯಲ್ಲಿ, ಯಾವುದೇ ರೀತಿಯ ಬಲಾತ್ಕಾರವಿಲ್ಲದೆ, ದೀರ್ಘಕಾಲ ನಡೆಯಬೇಕಾಗಿದೆ ಸಮಾಜವಾದಿ ಪಥದಲ್ಲಿ ಸ್ಥಿರವಾಗಲು" ಎಂದು ಅವರು ವಿವರಿಸಿದರು.

ರೈತರು, ಕಾರ್ಮಿಕರ ನುಡವೆ ಎಂದೂ ಮುರಿಯದ ಒಗ್ಗಟ್ಟು -[illegible] ಪೋಸ್ಟರ್



ರೈತರು ತಮ್ಮ ಎಲ್ಲಾ ಉತ್ಪಾದನಾ ಶಕ್ತಿಗಳನ್ನು ಅಭಿವ್ಯಕ್ತ ಪಡಿಸಲು ಸಾಧ್ಯವಾದರೆ ಮಾತ್ರ ಸ್ವಸ್ಥವ ಸಮಾಜವಾದಿ ಆರ್ಥಿಕವು ಭದ್ರವಾಗಲು [illegible] ಲೆನಿನರ ಇಂಗಿತವನ್ನೇ 'ಸಹಕಾರಿ ಸಂಘಗಳ ಸದಸ್ಯರಾದ ರೈತರಿಗೆ ಸಹಕಾರಿ ಸಂಘಗಳಲ್ಲಿ ಕಾಂಟ್ರಾಕ್ಟ್ ರೀತಿಯಲ್ಲಿ ಕೆಲಸ ಮಾಡುವ ಮತ್ತು ಒಂದು ಅಥವಾ ಎರಡು ಎಕರೆ ಭೂಮಿ ಸ್ವತಃ ಪಡೆದುಕೊಂಡು ಅದರಲ್ಲಿ ಸಹಕಾರಿ ಸಂಘಗಳ ಉತ್ಪತ್ತಿಗೆ ಪೂರಕವಾಗುವ ರೀತಿಯಲ್ಲಿ, ತರಕಾರಿ, ಹಣ್ಣು ಹಂಪಲು, ಕೋಳಿ ಸಾಗಾಣಿಕೆ, ಗೋಸಾಗಾಣಿಕೆ, ಇತ್ಯಾದಿ ಮಾಡಲು ಅವಕಾಶ ಧೋರಣೆಯನ್ನು ಗೋರ್ಬಚೇವ್ ಇತ್ತೀಚಿಗೆ ಜಾರಿಗೆತರುತ್ತಿದ್ದಾರೆ.

ರೈತರ ಬಗ್ಗೆ ಟ್ರಾಟ್ಸ್ಕಿವಾದ ಮತ್ತು ಲೆನಿನ್

ಲೆನಿನ್ ಹಾಗೂ ಲೆನಿನ್‌ವಾದವನ್ನು ಮುಂದು ವರೆಸಿಕೊಂಡು ಹೋದ ಸ್ಟಾಲಿನ್, 'ಟ್ರಾಟ್‌ಸ್ಕಿ' ವಾದವನ್ನು ತೀವ್ರವಾಗಿ ಖೋಧಿಸುತ್ತಾ ಬಂದುದು ಚರಿತ್ರೆಯು. ಆದರಲ್ಲೂ ಕ್ರಾಂತಿಕಾರಿ ಚರಿತ್ರೆಯ ಒಂದು ಪ್ರಮುಖ ಅಧ್ಯಾಯವಾಗಿದೆ. ಈ ಟ್ರಾಟ್‌ಸ್ಕಿ ವಾದದ ತಿರುಳೇನು? "ಪ್ರಪಂಚವು ಈಗಾಗಲೇ ಬಂಡವಾಳಶಾಹಿ ಮತ್ತು ಕಾರ್ಮಿಕವರ್ಗಗಳ ನಡುವಿನ ನೇರ ಮತ್ತು ನಿರ್ಣಾಯಕ ರಾಜಕೀಯ ಹೋರಾಟಕ್ಕೆ ಸಿದ್ಧವಾಗಿದೆ. ಈ ಹೋರಾಟದಲ್ಲಿ ರೈತ ವಿಭಾಗಗಳು ಯಾವ ಕಡೆ ನಿಲ್ಲುತ್ತವೆ ಎನ್ನುವುದು ಆಗಣ್ಯವಾದ ಅಂಶ ಎಂಬುದೇ ಅವರ ಸೈದ್ಧಾಂತಿಕ ಪ್ರಚಾರ. ರಷ್ಯಾದಲ್ಲಾಗಲಿ, ಚೈನಾದ ಲ್ಲಾಗಲಿ, ವೀಯಟ್ನಾಮಗಳಲ್ಲಾಗಲಿ, ಕ್ಯೂಬಾ ದಲ್ಲಾಗಲಿ..... ಎಲ್ಲಿಯಾದರೂ ಆ ದೇಶಗಳ ಮಾರ್ಕ್ಸ್‌ವಾದಿ - ಲೆನಿನ್‌ವಾದಿ ದೃಷ್ಟಿಕೋನದ ನೇತೃತ್ವಗಳು ಈ ಟ್ರಾಟಸ್ಕಿ ಸಿದ್ಧಾಂತದ ಆಧಾರದಲ್ಲಿ ತಮ್ಮ "ಕಾರ್ಯತಂತ್ರ"ವನ್ನು ಬಳಸಿದ್ದರೆ, ಆ ಕ್ರಾಂತಿಗಳು ಏನಾಗುತ್ತಿದ್ದವು? ಸಂಪೂರ್ಣ ವಿಫಲವಾಗುತ್ತಿದ್ದವು.

ಹಾಗೇ ಜಗತ್ತಿನಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕ್ರಾಂತಿಗಳು ಯಶಸ್ವಿಯಾಗಬಾರದೆಂದೇ, ಮಾರ್ಕ್ಸ್‌ವಾದವನ್ನು ವಿರೂಪಗೊಳಿಸುವ (ಬಂಡವಾಳ ಶಾಹಿ - ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಪ್ರೋತ್ಸಾಹ ಪಡೆದು) ಸಿದ್ಧಾಂತವೇ ಟ್ರಾಟಸ್ಕಿ ವಾದವಾಗಿದೆ.

ಭಾರತದಲ್ಲಿ ಎಸ್‌ಯುಸಿಐ ತರಹದ ಪಕ್ಷಗಳು ಅನುಸರಿಸುವ ತತ್ವವೂ ಇದೇ ಆಗಿದೆ.

ಇದು ಮಾರ್ಕ್ಸ್‌ವಾದ - ಲೆನಿನ್‌ವಾದ ಅಲ್ಲ, ಇದು ನಿಜವಾದ ಮಾರ್ಕ್ಸ್‌ವಾದ ಲೆನಿನ್‌ವಾದದ ಹೆಸರಿನಲ್ಲಿ "ಕಾರ್ಮಿಕವರ್ಗದ ನೇತೃತ್ವದ ಕ್ರಾಂತಿಯನ್ನು ಹುಸಿಮಾಡುವ ಪ್ರಯತ್ನವಾಗಿದೆಯಷ್ಟೆ.

ಸಿ.ಪಿ.ಐ (ಎಂ) ಮತ್ತು ರೈತ ಸಖ್ಯತೆ

ಆದ್ದರಿಂದಲೇ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯತಂತ್ರದಲ್ಲಿ ರೈತ ಕಾರ್ಮಿಕ ವರ್ಗಗಳ ಸಖ್ಯತೆ ಅಷ್ಟೊಂದು ಮಹತ್ವದ ಸ್ಥಾನವನ್ನು ಕೊಟ್ಟುದಾಗಿರುತ್ತದೆ.

ಈ ಸೂತ್ರವನ್ನು ಭಾರತದಲ್ಲಿ ಯಾವ ಯಾವ ರಾಜ್ಯಗಳಲ್ಲಿ ವಿಶಾಲ ಪ್ರದೇಶಗಳಲ್ಲಿ 'ಯಶಸ್ವಿಯಾಗಿ' ಕಾರ್ಯತಃ ಅನ್ವಯ ಮಾಡಿ ಯಶಸ್ವಿ ಮಾಡಲು ಸಾಧ್ಯವಾಗಿದೆಯೋ ಅಲ್ಲೆಲ್ಲಾ ನಮ್ಮ ಪಕ್ಷವು ರಾಷ್ಟ್ರೀಯ ಪಕ್ಷವಾಗಿ ರಾಜಕೀಯ ಅಧಿಕಾರದ ಹೋರಾಟದಲ್ಲಿ ಪರ್ಯಾಯ ಪಕ್ಷವಾಗಿ ಬೆಳೆದು ಬಂದಿದೆ. ಉಳಿದೆಡೆಗಳಲ್ಲಿ ಇನ್ನೂ ನಮ್ಮ ಪಕ್ಷವು ಈ ಸ್ಥಾನವನ್ನು ಪಡೆಯಲು ಸಾಧ್ಯವಾಗ 'ಲಿಲ್ಲವೆಂದರೆ, ಮೂಲತಃ ಈ ಸೂತ್ರವನ್ನು ಕಾರ್ಯತಃ ಹಚ್ಚಲು ಸಾಧ್ಯವಾಗಿಲ್ಲವೆಂದರ್ಥ.

→

ಈ ಸೂತ್ರವನ್ನು ಕಾರ್ಯತಃ ಹಚ್ಚುವುದು ಸುಲಭವಲ್ಲ. ಈ ಸೂತ್ರವನ್ನು ಕಾರ್ಯತಃ ಯಶಸ್ವಿಮಾಡಲು ರೈತರ ಮತ್ತು ಕಾರ್ಮಿಕರ ಮಧ್ಯೆ ವಿಸ್ತೃತವಾದ ಸರ್ವ ವ್ಯಾಪಿ ಪ್ರಾಯೋಗಿಕ ಕೆಲಸ ನಡೆಯಬೇಕಾಗಿದೆ.

ಒಂದೆಡೆ, ಕಾರ್ಮಿಕ ವರ್ಗದ ವಿವಿಧ ವಿಭಾಗಗಳಿಗೆ ಗ್ರಾಮಾಂತರ ವಿವಿಧ ರೈತ ವಿಭಾಗಗಳು ತಮ್ಮ "ಸ್ವಾಭಾವಿಕ ಮಿತ್ರವರ್ಗಗಳು" ಎಂಬ ತಿಳುವಳಿಕೆ ಮೂಡಿಬರಬೇಕು. ತಮ್ಮ ರಾಜಕೀಯ ವೈರಿಗಳ ವಿರುದ್ಧದ ಹೋರಾಟದಲ್ಲಿ, "ಈ ರೈತ ವಿಭಾಗಗಳು ತಮ್ಮ ಮಿತ್ರವರ್ಗಗಳಾಗಿ ಬಾರದ ವಿನಹ ಯಶಸ್ಸನ್ನು ಪಡೆಯಲು ಸಾಧ್ಯವಿಲ್ಲ"ವೆಂಬ ತಿಳುವಳಿಕೆ ಸಾರ್ವತ್ರಿಕವಾಗಿ ಬೆಳೆದುಬರಬೇಕು.

ಅಲ್ಲದೆ, ಕಾರ್ಮಿಕವರ್ಗಕ್ಕೆ ರೈತ ವಿಭಾಗಗಳು ಮಿತ್ರ ವರ್ಗಗಳಾಗಿ ಬೆಳೆದು ಬರಬೇಕಾದರೆ, ಸ್ವತಃ ತಮ್ಮ ಅನುಭವದ ಆಧಾರದಲ್ಲಿ ರೈತ- ಕಾರ್ಮಿಕ ವರ್ಗಗಳ ಸಖ್ಯತೆ ಸೇಯ್ದು ಬರಬೇಕಾದರೆ, ಕಾರ್ಮಿಕ ವರ್ಗವು "ಈ ರೈತ ವಿಭಾಗಗಳ ಮೇಲೆ ನಡೆಯುವ ಎಲ್ಲಾ ಅನ್ಯಾಯ ದಬ್ಬಾಳಿಕೆ ಶೋಷಣೆಗಳ ವಿರುದ್ಧದ ಹೋರಾಟದಲ್ಲಿ ಅವರ ಜೊತೆಗೂಡಿ ಭಾಗಿಯಾಗಬೇಕು. ಅವರ ವಿಭಾಗಗಳಿಗೆ ಯಶಸ್ವಿ ನೇತೃತ್ವವನ್ನು ಕೊಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು".

ರೈತರು ಸಮಾಜದಲ್ಲಿ ಒಂದು ರೀತಿಯಲ್ಲಿ ಒಂದಲ್ಲ, ಒಂದು ತರದಲ್ಲಿ ಆಸ್ತಿವುಳ್ಳವರಾದುದರಿಂದ ಅವರು ಸ್ವಾಭಾವಿಕವಾಗಿ ಪುಟ್ಟ ಬಂಡವಾಳ ಶಾಹಿ ಮನೋಭಾವವುಳ್ಳವರಾಗಿರುತ್ತಾರೆ. ಅಲ್ಲದೆ ಅವರು ಶತಮಾನ-ಶತಮಾನಗಳಲ್ಲಿ ಊರ್ಜಿತದಲ್ಲಿದ್ದ ಪಾಳೆಯಗಾರಿ - ಸಮಾಜ 'ವಿಧಾತೃ'ದ ವ್ಯವಸ್ಥೆಯ ಜಾತೀಯ ಮತೀಯ ನಂಬಿಕೆಗಳ 'ವಿಧೇಯ' ಪ್ರಭಾವಗಳಿಗೆ ತುತ್ತಾಗಿರುತ್ತಾರೆ.

ಮಾತ್ರವಲ್ಲ ಚರಿತ್ರೆಯ ಪುಟ-ಪುಟಗಳಲ್ಲಿ ವಿಧಿತವಾದಂತೆ 'ರೈತರು ನೂರಾರು ಯಾಕೆ ಸಾವಿರಾರು ಹೋರಾಟಗಳನ್ನು ವಿರಾವೇಶದಿಂದ ಮಾಡಿದ್ದರೂ ಎಲ್ಲಾ ಸಮಯದಲ್ಲೂ ಅವರನ್ನು ಬೇರೆ ರೀತಿಯ ಶೋಷಣೆ ಮಾಡುವ ವರ್ಗಗಳು ಎಲ್ಲಾ ರೀತಿಗಳಲ್ಲೂ ಅವರನ್ನು ಮೋಸಮಾಡಿದ್ದಾರೆ. ಅವರ ಗೆಲುವುಗಳನ್ನು ತಮ್ಮ ಖಾಸಗಿ ಗೆಲುವುಗಳನ್ನಾಗಿ ರೂಪಾಂತರಿಸಿಕೊಂಡಿದ್ದಾರೆ. ಅವರನ್ನು ಮತ್ತೂ ಮತ್ತೂ ಶೋಷಣೆ, ದಬ್ಬಾಳಿಕೆ, ಅನ್ಯಾಯ ಮತ್ತು ಹೀನವಾದ ಜೀವನಕ್ಕೆ ತುತ್ತು ಮಾಡುತ್ತಾ ಬಂದಿದ್ದಾರೆ". ಆದುದರಿಂದ ಅಂತಹ ರೈತ ವಿಭಾಗಗಳ ವಿಶ್ವಾಸವನ್ನು ಪಡೆಯುವುದು ಕಾರ್ಮಿಕವರ್ಗಕ್ಕೆ ಸುಲಭಸಾಧ್ಯವಲ್ಲ. ಎಲ್ಲಾ ಹಂತಗಳಲ್ಲೂ, ಎಲ್ಲಾ ರೀತಿಗಳಲ್ಲೂ ಬಂಡವಾಳಶಾಹಿಗಳೂ, ಸಾಮ್ರಾಜ್ಯಶಾಹಿಗಳೂ, ಪಾಳೆಯಗಾರರೂ ತಮ್ಮ ಎಲ್ಲಾ ಬಲ-ಬುದ್ಧಿಶಕ್ತಿ-ತಂತ್ರಗಳನ್ನು ಬಳಸಿ ರೈತ ವಿಭಾಗಗಳು ಕಾರ್ಮಿಕ ವರ್ಗದ ರಾಜಕೀಯ ನೇತೃತ್ವದಡಿ ಸೇರದಂತೆ ತಮ್ಮ ಜಾಲಗಳನ್ನು ಹರಡುತ್ತಾರೆ.

ಈ ಎಲ್ಲಾ ಎಡರು ತೊಡರುಗಳನ್ನು ತಮ್ಮ ದೀರ್ಘಕಾಲದ ಬುದ್ಧಿ ಪೂರ್ವಕ ಚಟುವಟಿಕೆ ಫಲವಾಗಿ ಯಶಸ್ವಿಯಾಗಿ ಮುರಿದು, ರೈತ ವಿಭಾಗಗಳ ನಿಜವಾದ ಹಿತಗಳನ್ನು ರಕ್ಷಿಸುವ ವರ್ಗವಾಗಿ ರಾಜಕೀಯ ಶಕ್ತಿಯಾಗಿ ಬೆಳೆಯಬೇಕಾಗಿದೆ ಕಾರ್ಮಿಕ ವರ್ಗ.

ಈ ಮಾರ್ಗದಲ್ಲಿ ದೀರ್ಘಕಾಲ ಯಶಸ್ವಿಯಾಗಿ ಕಾರ್ಮಿಕ ವರ್ಗವನ್ನು ನಡೆಸುವುದು ಕ್ರಾಂತಿಯ ಹಾದಿಯಲ್ಲಿ ಯಶಸ್ವಿಯಾಗಿ ಪೂರೈಸಬೇಕಾದ ಪ್ರಮುಖ ಕರ್ತವ್ಯವಾಗಿದೆ.

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಈ ಕುರಿತು ವ್ಯಾಪಕ ಕಾರ್ಯಾಚರಣೆ ಮಾಡಲು ಕಟಿಬದ್ಧವಾಗಿದೆ.

"ನಿಕೋಲಸ್ ಲೆನಿನ್"

"ನಿಕೋಲಸ್ ಲೆನಿನ್" ಕನ್ನಡದ ಮೊದಲ ಸ್ಪಂದನ?

[illegible]

ಸೋವಿಯತ್‌ಗಳು, ವಿದ್ಯುದೀಕರಣ
ಹೊಸ ಜಗತ್ತಿನ ಆಧಾರ

ಒಂದು ಪೋಸ್ಟರ್




"ಯಾವ ಊರಿನ ಕಾರ್ಮಿಕನಯ್ಯ ನೀನು! ನಾವು ಇವತ್ತು ರಾತ್ರಿ ಕ್ರಾಂತಿ ಮಾಡುತ್ತಿದ್ದೇವೆ ನಿನಗೆ ಗೊತ್ತಿಲ್ವಾ?"

೧೯೧೭ ನವಂಬರ್ ೬ ರ ಸಾಯಂಕಾಲ ೬ ಗಂಟೆ ಲೆನಿನ್ ತಾವು ತಲೆಮರೆಸಿಕೊಂಡಿದ್ದ ಕಾಮ್ರೇಡ್ ಫೊಫನೋವಳನ್ನ ಆಗಲೇ ಕೇಂದ್ರ ಸಮಿತಿ ಕಚೇರಿಗೆ ಮೂರು ಬಾರಿ ಕಳಿಸಿದ್ದರು. ತಾನು ಕೇಂದ್ರ ಸಮಿತಿ ಕಚೇರಿಗೆ

..ತಾನು ಕೇಂದ್ರ ಸಮಿತಿ ಕಛೇರಿಗೆ ಬರಬಹುದೇ ಅಂತ. ಎರಡು ಬಾರಿ ಕೇಂದ್ರ ಸಮಿತಿ ನಿರಾಕರಿಸಿತ್ತು. ಅದೇರಾತ್ರಿ ದಂಗೆ ಆರಂಭವಾಗಬೇಕೆಂದು ಮೊದಲೇ ನಿರ್ಧರಿಸಿತು. ಅದು ನಿಜವಾಗಿಯೂ ಕಾರ್ಯಗತವಾಗುತ್ತೋ ಇಲ್ಲವೋ ಲೆನಿನ್‌ಗೆ ಆತಂಕ. ಮೂರನೇ ಬಾರಿ ಫೋಫನೋವ ವಾಪಸು ಬರುವುದನ್ನು ಕಾಯದೆ ಹೊರಟೇ ಬಿಟ್ಟರು. ಮಾರು ವೇಷ ಹಾಕಿ ಕೊಂಡಿದ್ದರು. ಹಳೆಯ ಕೋಟು. ಬೇರೆ ರೀತಿಯ ಟೋಪಿ ಮತ್ತು ಹಲ್ಲು ನೋವಿದ್ದವರ ಹಾಗೆ ಕೆನ್ನೆ ಊದಿಸಿಕೊಂಡಿದ್ದರು! ಜತೆಗೆ ಕಾಮ್ರೇಡ್ ರಾಹ್‌ಜಾ ಇದ್ದರು. ಸ್ವಲ್ಪ ದೂರ ಹೋಗುತ್ತಿದ್ದಂತೆ ಒಂದು ಟ್ರಾಮ್ ಬಂತು. ಫಿನ್ಲೆಂಡ್ ರೈಲ್ವೇ ಸ್ಟೇಶನ್ ಕಡೆಗೆ ಹೋಗುತ್ತಿತ್ತು. ಇಬ್ಬರೂ ಟ್ರಾಮ್ ಹತ್ತಿಕೊಂಡರು. ಕಂಡಕ್ಟರನನ್ನು ಯಾವ ಕಡೆಗೆ ಹೋಗುತ್ತಿದ್ದೀರಿ ಅಂತ ಕೇಳಿದರು. ಆ ಕಂಡಕ್ಟರ್ ಲೆನಿನ್‌ರ ಅಡಿಯಿಂದ ಮುಡಿಯವರೆಗೆ ನೋಡಿ "ನಿನಗೆ ತಲೆ ನೆಟ್ಟಗಿದೆಯೋ ಇಲ್ಲವೋ? ಇವತ್ತು ಪೆಟ್ರೋಗ್ರಾಡ್‌ನಲ್ಲಿ ಏನಾಗುತ್ತಿದೆ ಅಂತ ಗೊತ್ತಿಲ್ವಾ?" ಎಂದು ಕೇಳಿದ'ಇಲ್ಲ'"ಎಂದರು ಲೆನಿನ್.

"ಯಾವ ಊರಿನ ಕಾರ್ಮಿಕನಯ್ಯಾ ನೀನು! ನಾವು ಇವತ್ತು ರಾತ್ರಿ ಕ್ರಾಂತಿ ಮಾಡಲು ಹೊರಟಿದ್ದೇವೆ! ಬೂರ್ಜ್ವಾಗಳನ್ನು ಒದ್ದು ಹಾಕುತ್ತೇವೆ" ಎಂದ ಕಂಡಕ್ಟರ್.

ಕಾಮ್ರೇಡ್ ರಾಹ್‌ಜಾಗೆ ಎದೆ ಡವಡವ ಎನ್ನುತಿತ್ತು. ಯಾರಾದರೂ ಏಜೆಂಟರು ಟ್ರಾಮ್‌ನಲ್ಲಿದ್ದರೆ, ಲೆನಿನ್‌ರ ಗುರುತು ಹಿಡಿದುಬಿಟ್ಟರೆ ಏನು ಗತಿ ಅಂತ. ಲೆನಿನ್ ಕಂಡಕ್ಟರ್ ಜತೆ ಕ್ರಾಂತಿಗಳನ್ನು ಹೇಗೆ ಮಾಡಬಹುದು ಅಂತ ಗಂಭೀರ ಚರ್ಚೆಯಲ್ಲಿ ತೊಡಗಿದ್ದರು! ಕಂಡಕ್ಟರ್ ಪೆಟ್ರೋಗ್ರಾಡ್ ಕಾರ್ಮಿಕರು ಹೇಗೆ ಕ್ರಾಂತಿಮಾಡಲು ಹೊರಟಿದ್ದಾರೆ ಎಂದು ಲೆನಿನ್‌ರಿಗೆ ವಿವರಿಸುತ್ತಿದ್ದ!.





ವಿಶ್ವದ ಬಂಡವಾಳಶಾಹಿಗಳ ವಿರುದ್ಧ ದೊಡ್ಡ ನೈತಿಕ ವಿಜಯ ಸಾಧಿಸಿದ ಶಾಂತಿಯುತ ಸಹ ಅಸ್ತಿತ್ವದ ಧೋರಣೆ



"ಯುದ್ಧದ ಪರಂಪರೆಯ ವಿರುದ್ಧ ಯುದ್ಧ ಸಾರುತ್ತೇವೆ" -ಒಂದು ಪೋಸ್ಟರ್

"ತಕ್ಷಣ ಯುದ್ಧ ವಿರಾಮ ಘೋಷಿಸಿ. ಶಾಂತಿ ಮಾತುಕತೆ ಆರಂಭಿಸಿ". ಕ್ರಾಂತಿಯ ಮರುದಿನವೇ ಕ್ರಾಂತಿಕಾರಿ ಸೋವಿಯತ್ ಸರಕಾರ ಹೊರಡಿಸಿದ ಮೊದಲ ಆಜ್ಞೆ, ಶಾಂತಿ ಡಿಕ್ರಿಯಲ್ಲಿ, ಆಗ ಯುದ್ಧ ನಿರತವಾಗಿದ್ದ ದೇಶಗಳಿಗೆ ನೀಡಿದ ಕರೆ ಸೋವಿಯತ್ ಸರಕಾರದ ವಿದೇಶಾಂಗ ನೀತಿಯ ಸಹಬಾಳ್ವೆಯ ಮೂಲಭೂತ ಅಂಶಗಳು ಈ ಡಿಕ್ರಿಯಲ್ಲಿದ್ದವು.

ಹೊಸ ಸಮಾಜವಾದಿ ಪ್ರಭುತ್ವಗಳು ಮೂಡಿ ಬಂದಿರುವಾಗ, ಹಳೆಯ ಬಂಡವಾಳಶಾಹಿ ದೇಶಗಳ ಪಕ್ಕದಲ್ಲೇ ಅವು ಬೆಳೆಯುತ್ತಿರುವುದರಿಂದ ವಿಭಿನ್ನ ಸಾಮಾಜಿಕ ರಾಜಕೀಯ ವ್ಯವಸ್ಥೆಗಳ ದೇಶಗಳು ಜತೆ ಜತೆಗೆ ಅಸ್ತಿತ್ವದಲ್ಲಿರಲು ಸಾಧ್ಯ. ಇವುಗಳ ನಡುವೆ ಶಾಂತಿಯುತ ಸಂಬಂಧಗಳು ಸಾಧ್ಯ. ಮಾತ್ರವಲ್ಲ, ಸಂಬಂಧಗಳನ್ನು ಸ್ಥಾಪಿಸಬೇಕು ಎಂಬುದು ಶಾಂತಿಯುತ ಸಹ ಅಸ್ತಿತ್ವದ ನೀತಿಯ ತಾತ್ಪರ್ಯ. ಯಾವ ಸಾಮಾಜಿಕ, ರಾಜಕೀಯ ವ್ಯವಸ್ಥೆ ಹೆಚ್ಚು ಪ್ರಗತಿಪರ, ಜನತೆಗೆ ಅತ್ಯುನ್ನತ ಜೀವನ ಮಟ್ಟ ನೀಡಬಲ್ಲ ವ್ಯವಸ್ಥೆ ಯಾವುದು ಎಂಬುದು ಆರ್ಥಿಕ, ಸಾಂಸ್ಕೃತಿಕ ಸ್ಪರ್ಧೆಯ ಮೂಲಕ ಸಿದ್ಧವಾಗಲಿ, ಶಸ್ತ್ರ ಹಲ್ಲೆಗಳ ಮೂಲಕವಲ್ಲ ಎಂಬ ಸಂಗತಿಯನ್ನು" ಮಾನ್ಯ ಮಾಡುವ ನೀತಿಯೇ ಇದು. ಲೆನಿನ್ ಈ ನೀತಿಯ ಪ್ರವರ್ತಕ.

ನವೋದಿತ ಸೋವಿಯತ್ ಸರಕಾರದ ಶಾಂತಿ ಕರೆಗೆ ಬಂಡವಾಳಶಾಹಿ ದೇಶಗಳು ಸ್ಪಂದಿಸಲಿಲ್ಲ. ಅಷ್ಟೇ ಅಲ್ಲ. ಅದನ್ನು ಸುತ್ತುವರಿದು ಕಾರ್ಮಿಕರ, ರೈತರ ರಕ್ತದಿಂದ ಮುಳುಗಿಸಿ ಬಿಡಲು ಪ್ರಯತ್ನಿಸಿದವು. ಸೋತವು. ಮತ್ತೆ ಮತ್ತೆ ಪ್ರಯತ್ನಿಸಿದವು. ಮತ್ತೆ ಮತ್ತೆ ಸೋತವು. ಹಸಿವಿನಿಂದ ಬಳಲಿದ್ದ, ಚಿಂದಿಬಟ್ಟೆಯ, ಸರಿಯಾದ ಅಸ್ತ್ರ ಶಸ್ತ್ರವಿಲ್ಲದ ಕೆಂಪು ಸೇನೆ ಅತ್ಯುತ್ತಮ ತರಬೇತಿ ಪಡೆದ, ಶಸ್ತ್ರಸಜ್ಜಿತ ಸಾಮ್ರಾಜ್ಯಶಾಹಿಗಳ ಸೇನೆಗಳನ್ನು ಸೋವಿಯತ್ ಸರ್ಕಾರ ಸುಮಾರು ೨೦ ಶಾಂತಿ ಪ್ರಸ್ತಾಪಗಳನ್ನು ಮುಂದಿಟ್ಟಿತು.

೧೯೨೦ ರ ಅಂತ್ಯದ ವೇಳೆಗೆ ಈ ವಿದೇಶಿ ಹಸ್ತಕ್ಷೇಪ ಸಂಪೂರ್ಣ ವಿಫಲವಾಯಿತು. "ನಾವೊಂದು ಹೊಸ ಘಟ್ಟ ಪ್ರವೇಶಿಸಿದ್ದೇವೆ. ಬಂಡವಾಳಶಾಹಿ ದೇಶಗಳ ನಡುವೆ ನಮ್ಮ ಮೂಲಭೂತ ಅಂತರ್ರಾಷ್ಟ್ರೀಯ ಅಸ್ತಿತ್ವದ ಹಕ್ಕನ್ನು ಗೆದ್ದುಕೊಂಡಿದ್ದೇವೆ... ಸಮಾಜವಾದಿ ಮತ್ತು ಬಂಡವಾಳಶಾಹಿ ಪ್ರಭುತ್ವ ಅಕ್ಕ - ಪಕ್ಕದಲ್ಲಿರುವ ಘಟ್ಟವೊಂದು ವಿಶ್ವ ಇತಿಹಾಸದಲ್ಲಿ ಆರಂಭವಾಗಿದೆ" ಎಂದು ಲೆನಿನ್ ಘೋಷಿಸಿದರು. ಅಸ್ತಿತ್ವದ ಹಕ್ಕನ್ನು ಮೊದಲ ಸಮಾಜವಾದೀ ಪ್ರಭುತ್ವ ಗೆದ್ದುಕೊಂಡಿತ್ತು.

"ಸಮಾಜವಾದಕ್ಕೆ ಸ್ವಂತ ಉದಾಹರಣೆಯ ಮೂಲಕ ಮೇಲ್ಪಂಕ್ತಿ ಹಾಕುವ ಶಕ್ತಿಯಿದೆ. ಆಚರಣೆಯ ಮೂಲಕ ಕಮ್ಯುನಿಸಂನ ಸಾಮರ್ಥ್ಯವನ್ನು ನಾವು ತೋರಿಸಬೇಕು" ಎಂದರು ಲೆನಿನ್.

ಅವರ ಪ್ರಕಾರ ಶಾಂತಿಯುತ ಸಹಬಾಳ್ವೆಯೆಂದರೆ ದೇಶಗಳ ನಡುವೆ ಯುದ್ಧವಿಲ್ಲದಿರುವುದು ಮಾತ್ರವಲ್ಲ. ದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳು ಬೆಳೆಯಬೇಕು. ಫ್ರಾನ್ಸ್, ಬ್ರಿಟನ್, ಅಮೆರಿಕಾಗಳ ಆಳುವ ವಲಯಗಳು ಸೋವಿಯತ್ ರಷ್ಯಾವನ್ನು ಬಗ್ಗು ಬಡಿಯುವ ಕನಸು ಬಿಟ್ಟಿಲ್ಲ ಎಂದು ತಿಳಿದಿದ್ದರೂ ವಿದೇಶಿ ಬಂಡವಾಳಶಾಹಿಗಳಿಗೆ ಕೈಗಾರಿಕಾ ರಿಯಾಯ್ತಿಗಳನ್ನು ನೀಡಲೂ ಅವರು ಹಿಂದೆಗೆಯಲಿಲ್ಲ.

"ಇದೂ ಒಂದು ಯುದ್ಧ, ಆದರೆ ಎಲ್ಲಾ ರೀತಿಯಲ್ಲೂ ನಮಗೆ ಅನುಕೂಲಕರವಾದ ಯುದ್ಧ. ಈ ಯುದ್ಧ ಶಾಂತಿಗೆ ಒಂದು ರೀತಿಯ ಪರೋಕ್ಷ ಗ್ಯಾರಂಟಿ. ನಿಜ ಇದಕ್ಕೆ ಆರ್ಥಿಕ ರಂಗದಲ್ಲಿ ಬಹಳ ಬೆಲೆ ತೆರಬೇಕು. ಆದರೆ ಬಂಡವಾಳಶಾಹಿ ಇರುವವರೆಗೆ ಅದರಿಂದ ನ್ಯಾಯ ಬೆಲೆ ನಿರೀಕ್ಷಿಸಲು ಸಾಧ್ಯವೇ? ಆದರೆ ಅನುಕೂಲಗಳು ನಿಸ್ಸಂಶಯ. ಬೋಲ್ಶೆವಿಸಂ ಮತ್ತು ಬಂಡವಾಳಶಾಹಿ ನಡುವೆ ಘರ್ಷಣೆಯ ದೃಷ್ಟಿಯಿಂದ ಹೇಳುವುದಾದರೆ (ಕೈಗಾರಿಕಾ) ರಿಯಾಯ್ತಿಗಳು ಬೇರೊಂದು ರಂಗದಲ್ಲಿ ಯುದ್ಧದ ಮುಂದುವರಿಕೆಯೇ. ಶತ್ರುವಿನ ಪ್ರತಿಯೊಂದೂ ಹೆಜ್ಜೆಯನ್ನು ಗಮನಿಸುತ್ತಿರಬೇಕು. ಆಡಳಿತ, ಉಸ್ತುವಾರಿ, ಪ್ರಭಾವ ಮತ್ತು ಕಾರ್ಯಾಚರಣೆಯ ಎಲ್ಲಾ ವಿಧಾನಗಳನ್ನು ಬಳಸಬೇಕು. ಎಷ್ಟೋ ದೊಡ್ಡ ದೊಡ್ಡ ಯುದ್ಧಗಳಲ್ಲಿ ಹೋರಾಡಿದ್ದೇವೆ. ಈ ಯುದ್ಧದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಜನರನ್ನು ನಾವು ಆಕರ್ಷಿಸುತ್ತೇವೆ. ಎಲ್ಲಾ ದುಡಿಯುವ ಜನಗಳನ್ನು ಆಕರ್ಷಿಸುತ್ತೇವೆ. ಬಂಡವಾಳಶಾಹಿ ಹೀಗೆ ಹಾಗೆ ಎಂದು ಏನಾದರೂ ಮಾಡಿದರೆ ಅವರನ್ನು ಕಿತ್ತೆಸೆದ ನೀವು ರೈತರು, ಕಾರ್ಮಿಕರು ಕಮ್ಮಿಯೇನಿಲ್ಲ ಎಂದು ತೋರಿಸಬೇಕು. ನೀವು ಅದನ್ನು ಕಲಿಯಬೇಕು ಎಂದು ಅವರಿಗೆ ಹೇಳುತ್ತೇವೆ" ಎಂದು ಲೆನಿನ್ ಆರಂಭದಲ್ಲಿ ಶಾಂತಿಯುತ ಸಹಬಾಳ್ವೆಯ ನೀತಿಯ ಬಗ್ಗೆ ಅನುಮಾನವಿದ್ದ ಸಂಗಾತಿಗಳಿಗೆ ವಿವರಿಸಿದರು.

ಫೆಬ್ರುವರಿ ೧೯೨೦ರಲ್ಲಿ ಅಮೆರಿಕನ್ ಪತ್ರಿಕೆಯ ವರದಿಗಾರನೊಬ್ಬ ಲೆನಿನ್‌ರನ್ನು ಕೇಳಿದ -"ಹೊರಗಿನಿಂದ ಪ್ರತಿಕ್ರಾಂತಿಯ ಭಯ ರಷ್ಯಾಕ್ಕೆ ಇನ್ನೂ ಇದೆಯೇ?" "ಹೌದು. ದುರದೃಷ್ಟದಿಂದ ಇನ್ನೂ ಇದೆ. ಏಕೆಂದರೆ ಬಂಡವಾಳಶಾಹಿಗಳು ಮೂರ್ಖರು. ಆಸೆಬುರುಕರು ಹಸ್ತಕ್ಷೇಪ ನಡೆಸುವ ಹಲವು ಮೂರ್ಖ, ಆಸೆಬುರುಕ ಪ್ರಯತ್ನ ನಡೆಸಿದ್ದಾರೆ. ಎಲ್ಲ ದೇಶಗಳ ಕಾರ್ಮಿಕರು, ರೈತರು ತಮ್ಮ ಬಂಡವಾಳಶಾಹಿಗಳಿಗೆ 'ಮರುಶಿಕ್ಷಣ' ನೀಡುವವರೆಗೆ ಹಸ್ತಕ್ಷೇಪ ಮರುಕಳಿಸುವ ಭಯ ಇದ್ದೇ ಇರುತ್ತದೆ" ಎಂದು ಲೆನಿನ್ ಉತ್ತರಿಸಿದರು.

ಶಾಂತಿಯುತ ಸಹಬಾಳ್ವೆಯ ಈ ಪರಿಕಲ್ಪನೆಯನ್ನು ವರ್ಗ ಹೋರಾಟಕ್ಕಾಗಿ, ದಮನಕ್ಕೊಳಗಾದ ಜನ



ಸೋದರಳಿಯ ವಿಕ್ಟರ್‌ನೊಂದಿಗೆ ೧೯೨೨

ಪ್ರಾಬಲ್ಯದ ಪರಿಕಲ್ಪನೆಯನ್ನು, ಒಂದು ಹೊಸ ಮಾದರಿಯ ಪಕ್ಷದ ಪಾತ್ರದ ಕಲ್ಪನೆಯನ್ನು, ಪ್ರತಿಯೊಂದು ಸಮಾಜದ ನಿರ್ದಿಷ್ಟ ಮಾರ್ಗ ಪರಿಸ್ಥಿತಿಗಳಿಗೆ ಅನುಗುಣವಾಗಿ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಸೃಜನಾತ್ಮಕವಾಗಿ ಅನ್ವಯಿಸಿ ಸಮಾಜವಾದ ಕಟ್ಟಬೇಕೆಂಬ ವಿಚಾರವನ್ನು, ಸಮಾಜವಾದೀ ಪ್ರಜಾಪ್ರಭುತ್ವ ಬೆಳೆಸುವ ಹೋರಾಟವನ್ನು ಎತ್ತಿಹಿಡಿಯುತ್ತೇವೆ.

ಲೆನಿನ್ನರ ಬರವಣಿಗೆಗಳು ಎಂದೆಂದೂ ಪ್ರಸ್ತುತವಾಗಿರುವ ಚಿರಸ್ಥಾಯಿಯಾದ ಅಮೂಲ್ಯವಾದ ಬರವಣಿಗೆಗಳು. ಲೆನಿನ್‌ವಾದದ ಕ್ರಾಂತಿಕಾರಿ ಸತ್ವವನ್ನು ಗ್ರಹಿಸಲು What is to be Done? (ಮಾಡಬೇಕಾದುದೇನು) Two Tactics of Social Democracy in the Democratic Revolution (ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಸಾಮಾಜಿಕ ಪ್ರಜಾಪ್ರಭುತ್ವದ ಎರಡು ತಂತ್ರಗಳು), Imperialism- Highest stage of Capitalism (ಸಾಮ್ರಾಜ್ಯ ಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ), "Left-Wing Communism"- An Infin tile Disorder (ಎಡ ಪಂಥೀಯ ಕಮ್ಯುನಿಸಂ- ಒಂದು ಬಾಲಿಶ ಅವ್ಯವಸ್ಥೆ), Proletarian Revoltion and the Renegade Kautslay (ಶ್ರಮಜೀವಿ ವರ್ಗದ ಕ್ರಾಂತಿ ಮತ್ತು ಪಕ್ಷಭ್ರಷ್ಟ ಕೌಟ್ಸ್ಕಿ) ಮತ್ತಿತರ ಹಲವಾರು ಬರವಣಿಗೆಗಳನ್ನು ಅಧ್ಯಯನ ಮಾಡಬೇಕು, ಅವನ್ನು ಅಳವಡಿಸಿ ಮಾಡಿಕೊಳ್ಳಬೇಕು. ಇದು ಸಿ.ಪಿ.ಐ.(ಎಂ)ನ ಎಲ್ಲಾ ಸದಸ್ಯರು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕಾದ, ನಿರ್ವಹಿಸಬೇಕಾದ ಕರ್ತವ್ಯ.

ಹೊಸ ಮತ್ತು ಬದಲಾಗುತ್ತಿದ್ದ ಪರಿಸ್ಥಿತಿಗಳಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಸೃಜನಾತ್ಮಕವಾಗಿ ಅನ್ವಯಿಸಿದ್ದು ಲೆನಿನ್‌ರ ಕೊಡುಗೆಯ ಸಾರಸರ್ವಸ್ವ. ಆ ಮೂಲಕ ಅವರು ಮಾರ್ಕ್ಸ್‌ವಾದಿ ಸಿದ್ಧಾಂತವನ್ನೂ ಮತ್ತು ಆಚರಣೆಯನ್ನು ಶ್ರೀಮಂತಗೊಳಿಸಿದರು. ಲೆನಿನ್ನರಿಗೆ ಮಾರ್ಕ್ಸ್‌ವಾದ ಒಂದು ಜೀವಹೀನ ಕುರುಡು ತತ್ವವಾಗಿರಲಿಲ್ಲ. ಲೆನಿನ್‌ವಾದವನ್ನು ತ್ಯಜಿಸಿ ಇಂದಿನ ವಿಶ್ವದಲ್ಲಿ ಸಮಾಜವಾದ ಎದುರಿಸುತ್ತಿರುವ ಸವಾಲನ್ನು ಸ್ವೀಕರಿಸುವುದು ಸಾಧ್ಯವಿಲ್ಲ. ಬದಲು ಮಹಾನ್ ಲೆನಿನ್‌ರ ದೃಷ್ಟಿಕೋನ ಹಾಗೂ ವಿಧಾನಗಳ ಮೂಲಕ ಮಾತ್ರವೇ ಅದನ್ನು ಎದುರಿಸಲು ಸಾಧ್ಯ. ವಿಶ್ವ ದಲ್ಲಿ ಸಮಾಜವಾದ ಮತ್ತು ಮಾರ್ಕ್ಸ್‌ವಾದದ ರಕ್ಷಣೆಗಾಗಿ ಒಂದು ಭೀಷಣ ಹೋರಾಟ ಬೆಳೆದುಬರುತ್ತಿದೆ. ಸಮಾಜವಾದವನ್ನು ಎಂದೆಂದಿಗೂ ಎದ್ದುಬರದಂತೆ ಹುಗಿದು ಬಿಡಬಹುದು ಎಂಬ ದೃಢ ನಂಬಿಕೆ ಸಾಮ್ರಾಜ್ಯ ಶಾಹಿಗಳು ಮತ್ತು ಅವರ ಸಿದ್ಧಾಂತಿಗಳದ್ದು. ಆದರೆ ಅವರದ್ದು ತಪ್ಪು ವಿಚಾರ. ಲೆನಿನ್ ವಾದದಿಂದ ಸಜ್ಜಿತರಾದ, ಲೆನಿನ್‌ವಾದೀ ಪರಂಪರೆಯನ್ನು ಸೃಜನಾತ್ಮಕವಾಗಿ ರಕ್ಷಿಸುತ್ತಾ ಸಮಾಜವಾದ ಮತ್ತು ಪ್ರಗತಿಯ ಶಕ್ತಿಗಳು ಎಲ್ಲಾ ಕಷ್ಟ ಕಾರ್ಪಣ್ಯಗಳನ್ನು, ಅಡ್ಡಿ ಆತಂಕ ಗಳನ್ನು ಎದುರಿಸಿ ಅವನ್ನು ಮೀರಿ ನಿಂತು ಮುಂದುವರಿಯುತ್ತವೆ. ಇದು ಇತಿಹಾಸದ ನಿಯಮ. ಲೆನಿನ್ ನಮಗೆ ಕಲಿಸಿದ ಸತ್ಯವಿದು. ಮಾನವ ಸಮಾಜದ ಬೆಳವಣಿಗೆಯಲ್ಲಿ ಇದು ತಂತಾನೇ ಸ್ಪಷ್ಟವಾಗುತ್ತದೆ.

ಲೆನಿನ್ ಜನ್ಮದ ೧೨೦ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಲೆನಿನ್‌ವಾದದ ರಕ್ಷಣೆಗೆ ತಮ್ಮನ್ನು ಮತ್ತೊಮ್ಮೆ ಅರ್ಪಿಸಿಕೊಳ್ಳಬೇಕು, ಭಾರತದಲ್ಲಿ ಕ್ರಾಂತಿಕಾರಿ ಆಂದೋಲನವನ್ನು ಇನ್ನಷ್ಟು ಶಕ್ತಿಯುತಗೊಳಿ ಸುವ ಜವಾಬ್ದಾರಿಯ ನಿರ್ವಹಣೆಯನ್ನು ಮುಂದುವರಿಸುವ ಪ್ರತಿಜ್ಞೆಗೈಯಬೇಕೆಂದು ಪಕ್ಷದ ಎಲ್ಲಾ ಸದಸ್ಯರಿಗೆ ಕರೆ ನೀಡುತ್ತದೆ.

ಪುಟ ೨೮ ರಿಂದ

ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸುತ್ತಿರುವ ಹೋರಾಟಕ್ಕಾಗಲಿ ವಿಸ್ತರಿಸಲಾಗದು ಎಂದರು ಲೆನಿನ್. ಎಲ್ಲಾ ದೇಶಗಳ ದುಡಿಯುವ ಜನರು ತಂತಮ್ಮ ಬಂಡವಾಳಶಾಹಿಗಳಿಗೆ 'ಮರುಶಿಕ್ಷಣ' ನೀಡುವ ಹಕ್ಕಿಗೆ ಈ ನೀತಿ ಯಾವ ಚ್ಯುತಿಯನ್ನು ತರುವುದಿಲ್ಲ.

"ನಮ್ಮ ಶಾಂತಿಯ ಕರೆ ಸರಕಾರಗಳಿಗೂ, ಜನಗಳಿಗೂ. ಸರಕಾರಗಳನ್ನು ಉಪೇಕ್ಷಿಸುವುದು ಸಾಧ್ಯವಿಲ್ಲ. ಆದರಿಂದ ಶಾಂತಿಗೆ ವಿಳಂಬವಾಗುತ್ತದೆ. ಅದೇ ವೇಳೆಗೆ ಆಯಾಯ ದೇಶಗಳ ಜನ ಸಮೂಹಗಳಿಗೆ ಮನವಿ ಮಾಡದೆ ಇರುವ ತಪ್ಪು ಕೂಡಾ ನಮಗಿಲ್ಲ. ಜನತೆಯು ಸರ್ಕಾರವೊಂದು ಹಾಗೆ ಮಾಡುವ ಧೈರ್ಯ ಮಾಡಬಾರದು. ಎಲ್ಲೆಡೆಯೂ ಸರಕಾರಗಳು ಮತ್ತು ಜನಗಳ ನಡುವೆ ಭಿನ್ನತೆಗಳಿರುತ್ತವೆ. ಆದ್ದರಿಂದ ಯುದ್ಧ ಮತ್ತು ಶಾಂತಿಯ ಪ್ರಶ್ನೆಯಲ್ಲಿ ಜನತೆ ಮಧ್ಯೆ ಪ್ರವೇಶಿಸಲು ನಾವು ನೆರವಾಗಬೇಕು ಎಂದು ಶಾಂತಿ ದಿಕ್ರಿ ಹೊರಡಿಸಿ ಎರಡು ದಿವಸ ನಂತರ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ಶಾಂತಿಯುತ ಸಹ ಅಸ್ತಿತ್ವದ ನೀತಿ ಲೆನಿನ್ನರಿಗೆ ಒಂದು ತಾತ್ಕಾಲಿಕ ಧೋರಣೆಯಾಗಿರಲಿಲ್ಲ. ಇದು ಸಮಸ್ತ ವೈಜ್ಞಾನಿಕ ಸಮಾಜವಾದದ ದೃಷ್ಟಿಕೋನ ದಿಂದ ಮೂಡಿ ಬಂದ ಧೋರಣೆಯಾಗಿತ್ತು. ಸಮಾಜವಾದೀ ಸಮಾಜದ ಹಿತಾಸಕ್ತಿಗಳಿಗೆ ಅನುಗುಣವಾದ ಧೋರಣೆಯಾಗಿತ್ತು.

"ನಮ್ಮ ಹಾಗೂ ನಮ್ಮ ಸಮಸ್ತ ವ್ಯವಸ್ಥೆಯ ಭಯದಿಂದ ಶಸ್ತ್ರ ಎತ್ತಿಕೊಂಡವರು, ತಮ್ಮ ಇಚ್ಛೆಗೆ ವಿರುದ್ಧವಾಗಿ ನಮ್ಮೊಡನೆ ವಾಣಿಜ್ಯ ಸಂಬಂಧಗಳನ್ನು ಬೆಳೆಸಬೇಕಾಯಿತು. ಹೀಗೆ ಮಾಡುವುದರಿಂದ ತಾವು ಸಮಾಜವಾದಿ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದ್ದೇವೆ ಎಂದು ತಿಳಿದಿದ್ದರೂ ಕೂಡಾ. ಇದೀ ಜಗತ್ತಿನ ಬಂಡವಾಳಶಾಹಿಗಳ ವಿರುದ್ಧ ಇದಕ್ಕಿಂತ ದೊಡ್ಡ ನೈತಿಕ ವಿಜಯ ಬೇರಿಲ್ಲ" - 'ಇದು ಲೆನಿನ್ನರು ಶಾಂತಿಯುತ ಸಹಅಸ್ತಿತ್ವದ ನೀತಿ ಕಮ್ಯುನಿಸಂನ ಪೂರ್ಣ ಕುಸಿತದ ಪ್ರತೀಕವೆನ್ನುವವರಿಗೆ ನೀಡಿದ ಉತ್ತರ.

"ಹೊಸ ಆರ್ಥಿಕ ಧೋರಣೆ" ಅಥವಾ ಎನ್.ಇ.ಪಿ. ಸಮಾಜವಾದೀ ರಚನೆಯ ಹಾದಿಗೊಂದು ಅಪೂರ್ವ ಕಾಣಿಕೆ

> "ಲೆನಿನ್ ಸಾವಪ್ಪುವರೆಗಿನ ಆರು ವರ್ಷಗಳ ತನಕ ಮಾತ್ರ ಹೊಸ ಸಮಾಜವಾದಿ ಪ್ರಭುತ್ವ ಸೋವಿಯತ್ ಒಕ್ಕೂಟದ ಮುಖ್ಯಸ್ಥ ರಾಗಿದ್ದರು. ಈ ಆರು ವರ್ಷಗಳು ಈ ಮಹಾ ಮೇಧಾವಿ ಮಾರ್ಕ್ಸ್‌ವಾದಿ ಮುತ್ಸದ್ದಿಯ ಸೃಜನಾತ್ಮಕ ಪ್ರಯತ್ನಗಳ ಅವಧಿ."
>
> – ಪಿ.ಬಿ. ನಿರ್ಣಯ



"ಎನ್.ಇ.ಪಿ. ರಷ್ಯಾ ಸೋಶಿಯಲಿಷ್ಟ್ ರಷ್ಯಾ ಆಗುತ್ತದೆ" - ಒಂದು ಪೋಸ್ಟರ್

೧೪ ದೇಶಗಳಿಂದ ಮುಕ್ಕಾಲು ಭಾಗ ದೇಶವೇ ಆಕ್ರಮಿಸಲ್ಪಟ್ಟು ಅಂತರ್ಯುದ್ಧ ೩ ವರ್ಷಗಳ ಕಾಲ ನಿರಂತರವಾಗಿ ನಡೆದ ಪರಿಸ್ಥಿತಿಯಲ್ಲಿ ಕಾರ್ಮಿಕ ಪ್ರಭುತ್ವದ ಸರಕಾರ ಅನೇಕ ನಿಬಂಧನೆಗಳನ್ನು ಹೇರಿತ್ತು. ಅದಕ್ಕೆ ಜನರೂ ಪೂರ್ಣ ಮನಸ್ಸಿನಿಂದ ಸಹಕರಿಸಿದ್ದರು. ಅವುಗಳಲ್ಲಿ ಒಂದು ಎಲ್ಲಾ ರೈತರಿಂದ ಎಲ್ಲಾ ಹೆಚ್ಚುವರಿ ಧಾನ್ಯವನ್ನು - ಅವರ ಕುಟುಂಬದ ಅಗತ್ಯಗಳಿಗೆ ಹೆಚ್ಚಾಗಿ ಮಿಕ್ಕಿದ ಧಾನ್ಯ, ಫಸಲು ಎಲ್ಲವನ್ನು ಒಂದು ನಿಶ್ಚಿತ ಬೆಲೆಯಲ್ಲಿ ಸರಕಾರವೇ ಕೊಂಡು ಅಗತ್ಯವಿರುವ ಪ್ರದೇಶಗಳಿಗೆ ಸಾಗಿಸುವುದು. ಇದು ಅಂತರ್ಯುದ್ಧವಿರುವ ೩ ವರ್ಷಗಳ ಕಾಲವೂ ನಡೆಯಿತು. ಇದನ್ನೇ ವಾರ್ ಕಮ್ಯುನಿಸಂ (ಯುದ್ಧ ಕಾಲದ ಸಮಾಜವಾದ) ಎಂದು ನಂತರ ಕರೆದರು.

ಈ ಅಂತರ್ ಯುದ್ಧದಲ್ಲಿ ವಿಜಯಗಳಿಸಿ ಯಶಸ್ವಿಯಾಗುತ್ತಿದ್ದಂತೆಯೇ ಯುದ್ಧದಿಂದ ಶಾಂತಿ ಕಾಲದೆಡೆಗೆ ಮುನ್ನಡೆಯುವ, ಸಮಾಜವಾದಿ ಸಮಾಜವನ್ನು ಕಟ್ಟುವ ಕಾರ್ಯ ಪಕ್ಷಕ್ಕೆ ಎದುರಾಯಿತು.

ಈ ಕರ್ತವ್ಯವನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ ರಷ್ಯನ್ ಸಮಾಜ ಹೇಗಿತ್ತು?

ಕಾರ್ಮಿಕರ ಸಂಖ್ಯೆ ಅತ್ಯಂತ ಕಡಿಮೆ ಆದರೆ ಅಸಂಖ್ಯಾತ ರೈತರು. ರೈತರೇ ಬಹಳವಾಗಿದ್ದು ಅವರ ಎಲ್ಲ ಫಸಲನ್ನು ಸರ್ಕಾರವೇ ವಶಪಡಿಸಿಕೊಳ್ಳುವುದನ್ನು ಅಂತರ್ಯುದ್ಧದ ನಂತರ ಈ ಬಗ್ಗೆ ರೈತರಲ್ಲಿ ಅಸಮಾಧಾನ ಮೂಡುತ್ತಿರುವುದನ್ನು ಕಾರ್ಮಿಕ ಪ್ರಭುತ್ವದ ಶತ್ರುಗಳು ಉಪಯೋಗಿಸಿಕೊಳ್ಳಲು ಪ್ರಯತ್ನಿಸಿದರು. ವಿವಿಧ ಅರಾಜಕವಾದಿ ಗುಂಪುಗಳು, ಅಂತರ್ಯುದ್ಧದಲ್ಲಿ ಸೋತು ಸುಣ್ಣವಾದ ಬಂಡವಾಳ ಶಾಹಿ ಭೂಮಾಲಿಕಶಕ್ತಿಗಳು, ಅವರ ಬೆನ್ನ ಹಿಂದಿದ್ದ ಸಾಮ್ರಾಜ್ಯಶಾಹಿಗಳು ಎಲ್ಲರೂ ಒಂದುಗೂಡಿ ದಂಗೆಯೆಬ್ಬಿಸಲು ಪ್ರಯತ್ನಿಸಿದರು. ಕ್ರಾನ್‌ಸ್ಟಾಟ್ ಎಂಬಲ್ಲಿ ನಡೆದ ದಂಗೆಯ ಮುಖ್ಯ ಘೋಷಣೆಯೇ "ಮುಕ್ತ ಮಾರುಕಟ್ಟೆಯ ಅವಕಾಶ ನೀಡಿ" ಎಂದು. ಲೆನಿನ್‌ರವರು ಈ

ದಂಗೆಯ ಎಲ್ಲಾ ಅಂಶಗಳನ್ನು ವಿಶ್ಲೇಷಿಸಿ ಅಂತರ್ಯುದ್ಧಕ್ಕಿಂತ, ಬಂಡವಾಳ ಶಾಹಿ ಭೂಮಾಲಿಕರು ಯೋಜಿಸಿದ ಪ್ರತಿ ಕ್ರಾಂತಿಗಿಂತ ತೀವ್ರವಾದ ಕ್ರಾಂತಿ ಇದು. ಕಾರ್ಮಿಕ ವರ್ಗ ಅಲ್ಪ ಸಂಖ್ಯಾತವಾಗಿ ಪುಟ್ಟ ಬಂಡವಾಳಶಾಹಿ ಬಹು ಸಂಖ್ಯಾತವಾಗಿರುವ ರಷ್ಯಾದಲ್ಲಿ ಈ ಪ್ರತಿ ಕ್ರಾಂತಿ ತೀವ್ರವಾಗಿ ಹಬ್ಬುತ್ತದೆ ಆದುದರಿಂದ ಕೂಡಲೇ ಅದಕ್ಕೆ ಪರಿಹಾರ ಹುಡುಕಬೇಕು ಎಂದು ಘೋಷಿಸಿದರು ಹಾಗೂ ಇಂತಹ ಪರಿಸ್ಥಿತಿಯಲ್ಲಿ ಸಮಾಜವಾದಿ ಸಮಾಜ ರಚನೆಗೆ ಲೆನಿನ್ ಮುಂದಾದರು. ಎಲ್ಲಾ ಆಸ್ತಿಯನ್ನು ಸಮಾಜೀಕರಿಸಿ, ಖಾಸಗಿ ಆಸ್ತಿಗೆ, ಖಾಸಗಿ ಆಸ್ತಿಯ ಬೆಳವಣಿಗೆಗೆ ಅವಕಾಶ ನೀಡದೆ ಮಾರುಕಟ್ಟೆಯೆಂಬ ಬಂಡವಾಳಶಾಹಿ ಪದ್ಧತಿ ತೆಗೆದುಹಾಕಿ ಪ್ರಭುತ್ವದ ಹಿಡಿತದಲ್ಲಿಯೇ ಎಲ್ಲಾ ವಾಣಿಜ್ಯ ವ್ಯವಹಾರಗಳನ್ನು ನಡೆಸಬೇಕು ಎಂಬುದು ಸಮಾಜವಾದಿ ಸಮಾಜದ ಗುರಿ. ಆದರೆ ಈ ಸಮಾಜೀಕರಣ ಹೇಗೆ? ಎಂಬುದು ಮುಖ್ಯ ಪ್ರಶ್ನೆ. ತಕ್ಷಣವೇ ಎಲ್ಲರ ಆಸ್ತಿಯನ್ನು ಸಮಾಜೀಕರಣಗೊಳಿಸಿ ಪ್ರಭುತ್ವವೇ ಎಲ್ಲಾ ವ್ಯವಹಾರವನ್ನು ವಹಿಸಿಕೊಳ್ಳುವುದೋ? ಅಥವಾ ಬೇರಾವ ಮಾರ್ಗ? ಈ ಪ್ರಶ್ನೆಯನ್ನು ಲೆನಿನ್‌ರವರು ಬಗೆಹರಿಸಿದ ರೀತಿ ಮಾರ್ಕ್ಸ್‌ಮದಕ್ಕೆ. ಸಮಾಜವಾದೀ ಸಮಾಜ ರಚನೆಯ ಹಾದಿಗೆ ಒಂದು ಅಪೂರ್ವ ಕಾಣಿಕೆ.

ಇದು ಕಾರ್ಮಿಕವರ್ಗ ಹಾಗೂ ರೈತವರ್ಗದ ಸ್ನುತೆಯನ್ನು ಉಳಿಸಿಕೊಳ್ಳುವುದು ಹೇಗೆ, ಬೆಳೆಸುವುದು ಹೇಗೆ ಎಂಬುದರ ಪ್ರಶ್ನೆಯೂ ಹೌದು. ಕ್ರಾಂತಿಯ ನಂತರದ ಭೂ ಹಂಚಿಕೆಯಿಂದ ಕೃಷಿ ಕೂಲಿಕಾರರು ಹಾಗೂಸಣ್ಣ ರೈತರು ಮಧ್ಯಮ ರೈತರಾದರು. ಈ ರೈತರು ತಮ್ಮ ಸ್ವಂತ ಭೂಮಿಯನ್ನು ಸಮಾಜದ ನಿಯಂತ್ರಣಕ್ಕೊಪ್ಪಿಸಿ ಬೃಹತ್ ಪ್ರಮಾಣದ ಕೃಷಿಯ ಲಾಭ ಪಡೆಯಬೇಕಾದರೆ, ಅವರಿಗೆ ದೊಡ್ಡ ಫಾರಂಗಳ ಅನುಕೂಲಗಳ ಬಗ್ಗೆ ಮನವರಿಕೆಯಾಗಬೇಕು ಮಾತ್ರವಲ್ಲ ಆ ದೊಡ್ಡ ಪ್ರಮಾಣದ ಕೃಷಿಗೆ ಅಗತ್ಯವಾದ ಯಂತ್ರಗಳು ಬೇಕು. ಹೀಗೆ ಉತ್ಪಾದನಾ ಸಾಧನಗಳಾದ ಬೃಹತ್ ಯಂತ್ರಗಳನ್ನು ತಯಾರಿಸಿ ಅದರ ಅನುಕೂಲಗಳು ರೈತರಿಗೆ ಮನವರಿಕೆಯಾಗಿ, ಅವರು ತಮ್ಮಲ್ಲೇ ಭೂಮಿಯನ್ನು ಇಟ್ಟುಕೊಳ್ಳುವುದಕ್ಕಿಂತ ಎಲ್ಲರ ಭೂಮಿಯನ್ನು ಸೇರಿಸಿ ಒಟ್ಟಿಗೆ ಕೃಷಿ ಮಾಡಿದರೇ ಹೆಚ್ಚು ಪ್ರಯೋಜನ ಎಂಬ ಸ್ವಯಂ ಪ್ರೇರಿತ ತೀರ್ಮಾನಕ್ಕೆ ಬರುವರೆಗೂ ರೈತ ಕೃಷಿ ಮುಂದುವರಿಯಬೇಕಾಗುತ್ತದೆ ಎಂಬುದು ಲೆನಿನ್‌ರವರು ಕಂಡುಕೊಂಡ ಸತ್ಯ.


ಹಾಗೆಂದ ಮೇಲೆ ಅಲ್ಲಿಯವರೆಗೂ ರೈತ ಕೃಷಿ ಪದ್ಧತಿ ಎಂದರೆ ಪುಟ್ಟ ಬಂಡವಾಳಶಾಹಿ ಕೃಷಿ ಪದ್ಧತಿ ಮುಂದುವರಿಯಬೇಕು. ಹಂತಹಂತವಾಗಿ ರೈತರನ್ನು ಸಾಮೂಹಿಕ ಕೃಷಿಗೆ ಒಲಿಸಬೇಕು ಎಂದಾಯಿತು. ಅಲ್ಲಿಯವರೆಗೂ ಅವರು ಕೃಷಿ ಮಾಡಬೇಕಾದರೆ ರೈತರಿಗೆ ಉತ್ತೇಜನ ಹೇಗೆ? ಅವರ ಹೆಚ್ಚುವರಿ ಫಸಲನ್ನೆಲ್ಲಾ ಸರಕಾರವೇ ವಶಪಡಿಸಿಕೊಂಡರೆ ಅವರೇಕೆ ಉತ್ಸಾಹದಿಂದ ಹೆಚ್ಚುಹೆಚ್ಚು ಬೆಳೆಯಬೇಕು? ಆದುದರಿಂದಲೇ ಹೊಸ ಆರ್ಥಿಕ ನೀತಿಯ ಪ್ರಮುಖ ಅಂಗವಾಗಿ ರೈತರು ತಮ್ಮ ಫಸಲಿನ ಒಂದು ಭಾಗವನ್ನು ಮಾತ್ರ ತೆರಿಗೆಯಾಗಿ ಸರಕಾರಕ್ಕೆ ಕೊಡಬೇಕು ಇನ್ನುಳಿದ ಭಾಗದ ಫಸಲಿನ ವಿನಿಯೋಗವನ್ನು ರೈತರಿಗೇ ಬಿಟ್ಟು ಕೊಡಬೇಕು ಎಂದು ಲೆನಿನ್ ಪ್ರತಿಪಾದಿಸಿದರು.

ರೈತರತೀರ್ಮಾನಕ್ಕೆ ಬಿಟ್ಟ ಫಸಲಿನಲ್ಲಿ ಅವರು ಸ್ವಂತಕ್ಕೆ ಉಪಯೋಗಿಸಿ ಉಳಿದುದನ್ನು ಏನು ಮಾಡಬೇಕು? ಅಸಂಖ್ಯಾತ ರೈತರಿಗೆ ಈ ಫಸಲಿನ ವಿನಿಯೋಗಬೇಕಾದರೆ ಅದನ್ನು ಮಾರುಕಟ್ಟೆಯಲ್ಲಿ ಮಾರುವ ಸ್ವಾತಂತ್ರ್ಯವನ್ನು ಅವರಿಗೆ ಕೊಡಬೇಕು. ಮಾರುಕಟ್ಟೆಯಲ್ಲಿ ಮಾರಿ ಬಂದ ಹಣವನ್ನು ರೈತರು ತಮ್ಮ ಬಳಿ ಇಟ್ಟುಕೊಂಡು ಏನು ಮಾಡಬೇಕು? ಅವರಿಗೆ ತುರ್ತಾಗಿ ಬೇಕಾದ ವಸ್ತುಗಳು ದೊರೆಯದಿದ್ದರೆ ಅವರ ಫಸಲನ್ನು ಅವರೇ ಮಾರುವ ಹಕ್ಕನ್ನು ಕೊಟ್ಟು ಏನು ಪ್ರಯೋಜನ?

ಆದಕ್ಕಾಗಿ ರೈತರಿಗೆ ಬೇಕಾದ ವಸ್ತುಗಳನ್ನು ತಯಾರಿಸುವ ಲಘು ಕೈಗಾರಿಕೆಗಳಿಗೆ ಪ್ರೋತ್ಸಾಹ ಬೇಕು. ಆದಕ್ಕಾಗಿ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹಬೇಕು. ಹೀಗೆ ದೊಡ್ಡ ಹಾಗೂ ಮಧ್ಯಮ ಕೈಗಾರಿಕೆಗಳು ಕಾರ್ಮಿಕ ಪ್ರಭುತ್ವದ ಹಿಡಿತದಲ್ಲಿರುವಾಗಲೇ ಸಣ್ಣ ಉದ್ದಿಮೆಗಳನ್ನು ಬೇರೆ ಬೇರೆ ವ್ಯಕ್ತಿಗಳಿಗೆ 'ಲೀಸ್' ಮೇಲೆ -ದೀರ್ಘಾವಧಿ ಬಾಡಿಗೆ ಕರಾರಿನ ಮೇಲೆ ನೀಡುವ ನೀತಿಯನ್ನು ರೂಪಿಸಿದರು. ಕೈಗಾರಿಕೆಗಳು ೪-೫ ವರ್ಷ ಅನಾಥವಾಗಿ ಜಂಗು ಹಿಡಿದ ಪರಿಸ್ಥಿತಿಯಲ್ಲಿ ಶೀಘ್ರವಾಗಿ ಉತ್ಪಾದನೆಯನ್ನು ಏರಿಸಬೇಕಾದರೆ ಉತ್ಪಾದನಾ ಶಕ್ತಿಗಳಮಟ್ಟ ಏರಬೇಕಾದರೆ ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳ ಸಹಾಯ ಬೇಕೆಂದು ಲೆನಿನ್ ಯೋಚಿಸಿದರು. ಆದರಂತೆ ರಷ್ಯಾದ ಮೇಲೆ ಯುದ್ಧಕ್ಕೆ ಹೋಗಿ ಸೋತು ಸುಣ್ಣವಾಗಿದ್ದ ಸಾಮ್ರಾಜ್ಯಶಾಹಿ ದೇಶಗಳು ಲಾಭದ ಆಸೆಗಾಗಿ ರಷ್ಯಾದಲ್ಲಿ ತಮ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ನಾಮುಂದು ತಾಮುಂದು ಎಂದು ಸ್ಪರ್ಧೆ ನಡೆಸಿದುವು. ಬ್ರಿಟನ್ ಅಮೇರಿಕಾ ಮೊದಲಾದ ದೇಶಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮತಿ ದೊರಕಿತು.

ರೈತರ ಸಲುವಾಗಿ ಮಾರುಕಟ್ಟೆಯ ಸಂಬಂಧಗಳು ಬಂದ ಮೇಲೆ ಅದಕ್ಕನುಗುಣವಾಗಿ ಸರಕು ವಾಣಿಜ್ಯದ ಸಂಬಂಧಗಳೂ ಬಂದವು. ಅದರೊಡನೆಯೇ ಕೇಂದ್ರದಲ್ಲಿ ಎಲ್ಲಾ ಉತ್ಪಾದನೆಯನ್ನು ನಿಯಂತ್ರಿಸುವ ಪದ್ಧತಿಗೆ ಬದಲಾಗಿ ಪ್ರತಿ ಕೈಗಾರಿಕೆಯೂ ತನ್ನ ಲಾಭ ನಷ್ಟಗಳಿಗೆ ತಾನೆ ಜವಾಬ್ದಾರವಾಗುವ ತನ್ನ ವಿಸ್ತರಣೆ ಬೆಳವಣಿಗೆಗೆ ತಾನೇ ಹಣ ಹೊಂಚಿಕೊಳ್ಳುವ ನೀತಿಯನ್ನು ರೂಪಿಸಲಾಯಿತು.

ಹೀಗೆ ಹೊಸ ಆರ್ಥಿಕ ನೀತಿಯನ್ನು ಘೋಷಿಸಿದ ಮೇಲೆ ರೈತರಿಗೂ, ಕಾರ್ಮಿಕರಿಗೂ ಅವರ ವೈಯಕ್ತಿಕ ಪ್ರಯೋಜನಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ಕಾರ್ಮಿಕರ ಉತ್ಸಾಹಕ್ಕೆ ಮೇರೆಯಿಲ್ಲವಾಯಿತು. ಕೃಷಿಯ ಉತ್ಪಾದನೆ ಹಾಗೂ ಕೈಗಾರಿಕಾ ಉತ್ಪಾದನೆ ಎರಡೂ ಶೀಘ್ರವಾಗಿ ಏರಿತು. ಈ ಉತ್ಸಾಹದ ಪ್ರಯೋಜನ ಪಡೆಯಲು ಕೈಗಾರಿಕೆಗಳಲ್ಲಿ ಪ್ರಜಾಪ್ರಭುತ್ವ ಪದ್ಧತಿ ಹಾಗೂ ಕೃಷಿಯಲ್ಲಿ ಸಹಕಾರಿ ಪದ್ಧತಿಯೂ ರೂಪಗೊಂಡಿತು. ಈ ನೀತಿಯ ಫಲವಾಗಿ ಕೃಷಿಯಲ್ಲಿ ಬಂಡವಾಳ ಶಾಹಿ ಬೆಳೆಯಲು ಅವಕಾಶವಾಯಿತು ನಿಜ, ಆದರೆ ಸಮಾಜವಾದಿ ಬೃಹತ್ ಕೈಗಾರಿಕೆಯ ನಿಯಂತ್ರಣದಲ್ಲಿ, ಕಾರ್ಮಿಕ ಪ್ರಭುತ್ವದಡಿಯಲ್ಲಿ ನಡೆಯಿತು, ಉತ್ಪಾದನಾ ಶಕ್ತಿಗಳನ್ನು ತೀವ್ರವಾಗಿ ಬೆಳೆಸಲು ಆ ಮೂಲಕ ಸಮಾಜವಾದಿ ಸಂಬಂಧಗಳನ್ನು ಸ್ಥಾಪಿಸಲು ನೆರವಾಯಿತು.



ತೃತೀಯ ಅಂತರ್ರಾಷ್ಟ್ರೀಯದ ಅಧ್ಯಕ್ಷ ಮಂಡಳಿ

ಕರ್ತವ್ಯವೇನು? ಎಲ್ಲಿಂದ ಆರಂಭಿಸಬೇಕು? ಎಂಬ ಲೇಖನಗಳ ಮೂಲಕ ಲೆನಿನರು ಝಾರ್ ಶಾಹಿ ರಷ್ಯಾದಲ್ಲಿ ೨೦ನೇ ಶತಮಾನದ ಆರಂಭದ ವರ್ಷಗಳಲ್ಲಿ ೧೯೦೩-೦೫ರ ಸುಮಾರಿನಲ್ಲಿ ರಷ್ಯಾದ ಕಾರ್ಮಿಕ ವರ್ಗವು ರಷ್ಯಾದ ರಾಜಕೀಯದಲ್ಲಿ ಸಕ್ರಿಯ ಮತ್ತು ಸ್ವತಂತ್ರವಾದ ಮತ್ತು ಮಹತ್ವದ ಪಾತ್ರ ವಹಿಸುವಂತೆ ಮಾಡಿದರು. ಅಷ್ಟು ಮಹತ್ವದ ಕರ್ತವ್ಯವನ್ನು ಈ ಲೇಖನಗಳು ಹೇಗೆ ಪೂರೈಸಿದವು ಎಂಬುದನ್ನು ತಿಳಿಯುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

೧೯ನೇ ಶತಮಾನದ ಕೊನೆಗೆ ಮಾರ್ಕ್ಸ್‌ವಾದವು ರಷ್ಯಾದ ಸಮಾಜದ ಕ್ರಾಂತಿಕಾರಿ ಪುನಸ್ಸಂಘಟನೆಗೆ ಸಮರ್ಪಕವಾದ ಸಿದ್ಧಾಂತವೆಂದು ಪ್ರತಿಷ್ಠಾಪಿಸಲ್ಪಟ್ಟಿತು.

ಅದೇ ವೇಳೆಯಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಫಲವಾಗಿ ಕಾರ್ಮಿಕ ವರ್ಗವು ವಿಸ್ತೃತವಾಗಿ ಬೆಳೆದು ಬಂತು. ಬೃಹತ್ ಕಾರ್ಖಾನೆಗಳು ವಿದೇಶೀಯರ ಮತ್ತು ದೇಶೀಯ ಬಂಡವಾಳಗಾರರ ಒಡೆತನದಲ್ಲಿ ಸ್ಥಾಪಿಸಲ್ಪಟ್ಟವು. ಕಾರ್ಮಿಕರ ಸಂಖ್ಯೆಯು ಜನಸಂಖ್ಯೆಯಲ್ಲಿ ಒಂದು ಗಣನೀಯ ಅಂಶವಾಗಿ ಬೆಳೆದು ಬಂತು. ಪರಿಣಾಮವಾಗಿ ಟ್ರೇಡ್ ಯೂನಿಯನ್ ವಿಸ್ತೃತವಾಗಿ ಬೆಳೆಯಿತು. ಸ್ವಾಭಾವಿಕವಾಗಿ ಅದೇ ಸಮಯದಲ್ಲಿ, ಯೂರೋಪಿನಲ್ಲಿ ೨ನೇ ಅಂತರ ರಾಷ್ಟ್ರೀಯದಲ್ಲಿ ತಲೆದೋರಿದ ಎಲ್ಲಾ ಸುಧಾರಣಾವಾದಗಳು, ಪರಿಷ್ಕರಣವಾದಗಳು ಮತ್ತು ಅರಾಜಕತಾವಾದಗಳು ಮಾರ್ಕ್ಸ್‌ವಾದದ ಹೆಸರಿನಲ್ಲಿ "ವಿಮರ್ಶೆಯ ಸ್ವಾತಂತ್ರ್ಯ" ಎಂಬ ಘೋಷಣೆಗಳ ಅಡಿಯಲ್ಲಿ ರಷ್ಯಾದಲ್ಲಿ ವಿಶೇಷವಾಗಿ ಕಾರ್ಮಿಕರ ಮಧ್ಯೆ ಪ್ರಚಾರಕ್ಕೆ ಬಂದವು.

ಈ ಎಲ್ಲಾ ವಾದಗಳ ತಿರುಳು: "ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಸ್ವತಂತ್ರ ರಾಜಕೀಯ ಸಿದ್ಧಾಂತ ಮತ್ತು ಪಕ್ಷ ಸಂಘಟನೆಯ ಅವಶ್ಯಕತೆ ಇಲ್ಲ. ಕಾರ್ಮಿಕರು ಟ್ರೇಡ್ ಯೂನಿಯನುಗಳನ್ನು ಆರ್ಥಿಕ ನೆಲೆಯಲ್ಲಿ ಕಟ್ಟಿ ಬೆಳೆಸಿ ಹೋರಾಡುವ ಮೂಲಕ ತಮ್ಮ ಸ್ಥಾನವನ್ನು ದೇಶದ ಮತ್ತು ಸರ್ಕಾರದ ಆಡಳಿತದಲ್ಲಿ ಭಾಗವಹಿಸುವುದು. ಕಾರ್ಮಿಕವರ್ಗದ ಚಳುವಳಿಯು ತನ್ನದೇ ಆದ ತರ್ಕಬದ್ಧ ಮಾರ್ಗದಲ್ಲಿ ಯಾವ ಸಿದ್ಧಾಂತದ ಸಹಾಯವಿಲ್ಲದೇ, ಪ್ರತ್ಯೇಕವಾದ ಕಾರ್ಮಿಕ ವರ್ಗದ ರಾಜಕೀಯ ಪಕ್ಷದ ನೇತೃತ್ವವಿಲ್ಲದೇ ಮುಂದುವರೆಯುವ ಸಾಧ್ಯತೆಯುಳ್ಳದ್ದಾಗಿದೆ".

ಈ ಇದೇ ವಾದ ಸರಣಿಯನ್ನು ಮುರಿದು ಹಾಕಿ ಕಾರ್ಮಿಕ ವರ್ಗಕ್ಕೆ ರಾಜಕೀಯ ಮತ್ತು ತಾತ್ವಿಕ ಸಿದ್ಧಾಂತವು ಮಾರ್ಕ್ಸ್‌ವಾದದ ರೂಪದಲ್ಲಿ ಹೊರಗಿನಿಂದ ಬರಬೇಕೆಂದೂ, ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಸಿದ್ಧಾಂತ ಆಧಾರಿತ ಮತ್ತು ತಂತ್ರಬದ್ಧ ರಾಜಕೀಯ ಪಕ್ಷದ ಅವಶ್ಯಕತೆ ಇದೆಯೆಂದೂ, ಕಾರ್ಮಿಕ ವರ್ಗವು ಈ ಸಿದ್ಧಾಂತದ ಮತ್ತು ಪಕ್ಷದ ಸಹಾಯವಿಲ್ಲದಿದ್ದರೆ ಕೇವಲ "ಆರ್ಥಿಕವಾದ" "ಟ್ರೇಡ್ ಯೂನಿಯನ್ ವಾದ" ಮತ್ತು "ಸ್ವಯಂ ಸ್ಫೂರ್ತಿ ಚಳುವಳಿ"ಯಲ್ಲಿ ಮುಳುಗಿ ಕ್ರಮೇಣ ಬಂಡವಾಳಶಾಹಿ ವ್ಯವಸ್ಥೆಯ ಒಳಗೇ ಇದ್ದು ಅದರ ಕಾನೂನು ಚೌಕಟ್ಟಿನೊಳಗೇನೇ ಕಾರ್ಯವೆಸಗುವ ಸುಧಾರಣಾ ಪ್ರವೃತ್ತಿಯನ್ನು ಅವಲಂಬಿಸುವ ವರ್ಗವಾಗಿ ಬೆಳೆಯುವುದು ಎಂದು ಈ ಲೇಖನಗಳ ಮಹಾ ಕೃತಿಗಳ ಮೂಲಕ ಲೆನಿನರು ಸಾಧಿಸಿ ತೋರಿಸಿದರು.

ಅದರ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಿದೆಯಷ್ಟೆ.

ವಿಮರ್ಶೆಯ ಸ್ವಾತಂತ್ರ ಮತ್ತು ಸ್ವಯಂ ಪ್ರೇರಿತ ಕಾರ್ಮಿಕ ಚಳುವಳಿಗಳಲ್ಲಿ ಕಾರ್ಮಿಕರ ಪಾತ್ರ

ಜಿ.ವಿ. ಶ್ರೀರಾಮರೆಡ್ಡಿ

ವಿಮರ್ಶೆಯ ಸ್ವಾತಂತ್ರ

ವಿಮರ್ಶೆಯ ಸ್ವಾತಂತ್ರ ಇಂದು ಬಹಳ ಪ್ರಚಲಿತದಲ್ಲಿರುವ ಅತ್ಯಂತ ಸೊಗಸಾದ ಘೋಷಣೆ. ಇದೇ ಘೋಷಣೆಯಡಿಯಲ್ಲಿ ಆಧುನಿಕ ಅಂತರರಾಷ್ಟ್ರ ಸಮಾಜವಾದಿ ಪ್ರಜಾತಂತ್ರ ಚಳುವಳಿಯಲ್ಲಿ ಎರಡು ಪ್ರವೃತ್ತಿಗಳು ರೂಪು ತಳೆದಿದೆ ಎಂಬುದು ಸರ್ವವಿಧಿತವಾಗಿದೆ. ಅವುಗಳೆಂದರೆ "ಹಳತಾದ ಶ್ಯಾಸ್ತಾಂಧತೆ" ಹಾಗೂ ಮಾರ್ಕ್ಸ್‌ವಾದದ ಬಗ್ಗೆ "ವಿಮರ್ಶಾ ಸ್ವಾತಂತ್ರ" ಈ ಎರಡು ಪ್ರವೃತ್ತಿಗಳ ಮಧ್ಯೆ ಆಗಿಂದಾಗ್ಗೆ ಘರ್ಷಣೆಯು ನಡೆಯುತ್ತದೆ. ಒಮ್ಮೆ ಈ ಘರ್ಷಣೆಯು ಉಜ್ವಲ ಜ್ವಾಲೆಯೊಂದಿಗೆ ಭುಗಿಲೆದ್ದರೆ, ಮತ್ತೊಮ್ಮೆ ಭವ್ಯ ರಾಜಿ ನಿರ್ಣಯಗಳ ಬೂದಿಯ ಕೆಳಗೆ ಅಳಿದು ಹೋಗೆಯಾಡುತ್ತದೆ. ಈ ವಿಮರ್ಶಾ ಸ್ವಾತಂತ್ರವು ಪ್ರಸ್ತುತ ಪರಿಸ್ಥಿತಿಯಲ್ಲಿ ಆಕಸ್ಮಿಕವಾಗಿ ಬಂದದ್ದೇನು ಅಲ್ಲಾ. ಮಾರ್ಕ್ಸ್‌ವಾದದ ವಿರುದ್ಧದ ಟೀಕೆಯು ಬಹಳ ಕಾಲದಿಂದ ರಾಜಕೀಯ ವೇದಿಕೆಗಳಿಂದಲೂ, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕ ಪೀಠಗಳಿಂದಲೂ, ಅಸಂಖ್ಯಾತ ಕಿರು ಹೊತ್ತಿಗೆಗಳಲ್ಲೂ, ಪಾಂಡಿತ್ಯ ಪೂರ್ಣ ಸೈದ್ಧಾಂತಿಕ ಕೃತಿ ಮಾಲಿಕೆಗಳಿಂದಲೂ ಮಾಡಲಾಗುತ್ತಿದೆ. ಸುಶಿಕ್ಷಿತ ವರ್ಗಗಳ ಇಡಿ ಯುವ ಪೀಳಿಗೆಗಳನ್ನು ಅನೇಕ ದಶಕಗಳಿಂದ ಈ ಟೀಕೆಯ ವಾತಾವರಣದಲ್ಲೇ ಕ್ರಮ ಬದ್ಧವಾಗಿ ಪೋಷಿಸಿಕೊಂಡು ಬರಲಾಗುತ್ತಿದೆ. ಮಾರ್ಕ್ಸ್‌ವಾದದ ಬಗ್ಗೆ ಈ ವಿಮರ್ಶಾ ಸ್ವಾತಂತ್ರದ ನಿಜವಾದ ಗುರಿಯೇನು? ಇದನ್ನು ಪ್ರಸ್ತುತ ಅಂತರರಾಷ್ಟ್ರೀಯ ಸಮಾಜವಾದಿ ಪ್ರಜಾತಂತ್ರದ ಚಳುವಳಿಯ ಹಿನ್ನಲೆಯಲ್ಲಿ ವಿಶ್ಲೇಷಿಸಿದರೆ ಇದರ ಸ್ವರೂಪ ಬಯಲಾಗುತ್ತದೆ.


"ಸಮಾಜವಾದದಲ್ಲಿನ ಈ ಹೊಸ ಟೀಕೆಯ ಪ್ರವೃತಿಯು ಹೆಚ್ಚು ಕಡಿಮೆ ಸಂದರ್ಭಸಾಧಕವಾದದ ಒಂದು ಹೊಸ ಮಾದರಿಯಲ್ಲದೆ" ಬೇರೇನು ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಸ್ವಾತಂತ್ರವೆಂಬುದೇನೋ ಒಂದು "ಭವ್ಯವಾದ ಪದ". ಆದರೆ ಕೈಗಾರಿಕಾ ಸ್ವಾತಂತ್ರದ ಹೆಸರಿನಲ್ಲಿ ಅತ್ಯಂತ ಸೂರೆ ಘೋರ ಯುದ್ಧಗಳನ್ನು ಮಾಡಲಾಗುತ್ತಿಲ್ಲವೆ? ಶ್ರಮ ಸ್ವಾತಂತ್ರದ ಹೆಸರಿನಲ್ಲಿ ಶ್ರಮ ಜೀವಿಗಳನ್ನು ಕೊಳ್ಳೆ ಹೊಡೆಯಲಾಗುತ್ತಿಲ್ಲವೆ? ಭೂಮಿಯನ್ನು ಊಳಿಗಮಾನ್ಯ ಪ್ರಭುಗಳಿಂದ ವಿಮುಕ್ತಿಗೊಳಿಸುವ ಹೆಸರಿನಲ್ಲಿ ಭೂ ಹೀನ ಕೃಷಿ ಕಾರ್ಮಿಕರನ್ನು ಬಡ ರೈತರನ್ನು ದೋಚುತ್ತಿಲ್ಲವೇ? ಈಗ ಪ್ರತಿಪಾದಿಸುತ್ತಿರುವ ಟೀಕಾ ಸ್ವಾತಂತ್ರವು ಇದೇ ಅಂತರ್ಗತ ಮಿಥ್ಯೆಯನ್ನು ಒಳಗೊಂಡಿದೆ ಎಂಬುದು ಸ್ಪಟಿಕದಷ್ಟೇ ಸ್ಪಷ್ಟವಾಗಿದೆ.

ಸಮಾಜವಾದಿ ಪ್ರಜಾತಂತ್ರದ ಬಗ್ಗೆ ವಿಮರ್ಶಾ ಸ್ವಾತಂತ್ರವೆಂದರೆ ಸಾಮಾಜಿಕ ಕ್ರಾಂತಿಯ ಪಕ್ಷದ ಸ್ಥಿತಿಯಿಂದ ಸಮಾಜ ಸುಧಾರಣಾ ಪ್ರಜಾಸತ್ತಾತ್ಮಕ ಪಕ್ಷದ ಸ್ಥಿತಿಗೆ ತರಬೇಕೆಂಬ ರಾಜಕೀಯ ಹೇಳಿಕೆ. ಇದರ ಸುತ್ತ ಚೆನ್ನಾಗಿ ಅನುಗೊಳಿಸಿದ ಹೊಸ ವಾದಗಳ ಒಂದು ಸಮೂಹವನ್ನೇ ಸೃಷ್ಟಿಸಿದ್ದಾರೆ. ಸಮಾಜ ವಾದವನ್ನು

ವೈಜ್ಞಾನಿಕ ಆಧಾರದ ಮೇಲೆ ಸ್ಥಾಪಿಸುವ ಹಾಗೂ ಇತಿಹಾಸದ ಭೌತಿಕ ವಾದದ ಪರಿಕಲ್ಪನೆಯ ದೃಷ್ಟಿಕೋನದಿಂದ ಅದರ ಅವಶ್ಯಕತೆಯನ್ನು ಮತ್ತು ಅನಿವಾರ್ಯತೆಯನ್ನು ಪ್ರದರ್ಶಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗಿದೆ. ದಾರಿದ್ರ್ಯ ಹೆಚ್ಚಾಗುತ್ತಿದೆ, ಜನ ನಿರ್ಗತಿಕರಾಗಿ ಶ್ರಮ ಜೀವಿ ವರ್ಗ ಸೇರುವ ಪ್ರಕ್ರಿಯೆಯು ತೀವ್ರಗೊಳ್ಳುತ್ತಿದೆ. ಬಂಡವಾಳಶಾಹಿ ವೈರುಧ್ಯಗಳು ತೀವ್ರಗೊಳ್ಳುತ್ತಿದೆ ಎಂಬ ವಾಸ್ತವಾಂಶವನ್ನು ಅಲ್ಲಗಳೆಯಲಾಗುತ್ತಿದೆ. ಶ್ರಮಜೀವಿ ವರ್ಗದ ಅಂತಿಮ ಗುರಿ ಎಂಬ ಪರಿಕಲ್ಪನೆ ನಿರಾಧಾರವಾದುದು ಎಂದು ಘೋಷಿಸಲಾಯಿತು. ಶ್ರಮಜೀವಿ ವರ್ಗದ ಸರ್ವಾಧಿಕಾರದ ವಿಚಾರವನ್ನೇ ಸಂಪೂರ್ಣವಾಗಿ ತಳ್ಳಿಹಾಕಲಾಯಿತು. ಉದಾರ ವಾದಕ್ಕೂ ಮತ್ತು ಸಮಾಜವಾದಕ್ಕೂ ನಡುವೆ ತಾತ್ವಿಕ ವೈರುಧ್ಯವಿದ್ದದ್ದನ್ನು ಅಲ್ಲಗಳೆಯಲಾಗುತ್ತಿದೆ. ಬಹುಮತದ ಅಭಿಪ್ರಾಯದ ಆಧಾರದ ಮೇಲೆ ಆಡಳಿತ ನಡೆಯುತ್ತಿರುವ ಕಟ್ಟುನಿಟ್ಟಾದ ಪ್ರಜಾಸತ್ತಾತ್ಮಕ ಸಮಾಜಕ್ಕೆ ಅನ್ವಯಿಸಲು ಸಾಧ್ಯವಿಲ್ಲವೆಂಬ ವಾದವನ್ನು ಮಂಡಿಸಿ ವರ್ಗ ಹೋರಾಟದ ಸಿದ್ಧಾಂತವನ್ನು ಅಲ್ಲಗಳೆಯಲಾಗುತ್ತಿದೆ. ಟೀಕಾ ಸ್ವಾತಂತ್ರ್ಯವೆಂಬ ಲಾಂಛನದಡಿಯಲ್ಲಿ ಮಾರ್ಕ್ಸ್‌ವಾದದ ಪುನರ್ ಪರಿಶೀಲನೆಯ ಪ್ರವೃತ್ತಿಯು ಬಂಡವಾಳಶಾಹಿ ಸಿದ್ಧಾಂತದ ಪ್ರೇರಣೆ. ಕ್ರಾಂತಿಕಾರಿ ಸಂಘಟನೆಯೊಳಗೆ ಬಂಡವಾಳಶಾಹಿ ಸಿದ್ಧಾಂತವನ್ನು ನುಸುಳಿಸಿ ಕ್ರಾಂತಿಕಾರಿ ಚಳುವಳಿಯೊಂದನ್ನು ಸುಧಾರಣಾವಾದಕ್ಕೆ ಇಳಿಸುವ ಪ್ರಯತ್ನ ಮಾಡುವುದೇ ಈ ವಿಮರ್ಶಾ ಸ್ವಾತಂತ್ರ್ಯದ ನಿಜವಾದ ತಿರುಳು.

"ಶಾಸ್ತ್ರಾಂಧತೆ, ಸಿದ್ಧಾಂತವಾದ" ಪಕ್ಷವನ್ನು ಜಡ್ಡುಗಟ್ಟಿಸುವುದು, ಚಿಂತನೆಯನ್ನು ಉಗ್ರವಾಗಿ ಅತಿ ಕಟ್ಟುನಿಟ್ಟಿಗೆ ಒಳಪಡಿಸುವುದರಿಂದ ಅನಿವಾರ್ಯವಾಗಿ ಉಂಟಾಗುವ ಪಾಪ ಫಲ. ಇವುಗಳ ವಿರುದ್ಧವೆ ಟೀಕಾ ಸ್ವಾತಂತ್ರ್ಯದ ಪ್ರತಿಪಾದಕರು ಕತ್ತಿ ಮಸೆಯುತ್ತಾರೆ. ಈಗಿನ ವರ್ಷಗಳಲ್ಲಿ ಸಿದ್ಧಾಂತದಲ್ಲಿ ಆಸಕ್ತಿ ಕಮ್ಮಿಯಾಗುತ್ತಿದ್ದದ್ದನ್ನು ಎತ್ತಿ ತೋರಿಸಿ ಶ್ರಮ ಜೀವಿ ವರ್ಗದ ಕ್ರಾಂತಿಕಾರಿ ಚಳುವಳಿಯ ಬೆಳವಣಿಗೆಗಳು ಆಗ್ರಹಿಸಿ ಕೇಳುತ್ತಿವೆ. ಈ ಚಳುವಳಿಯಲ್ಲಿ ಸಂದರ್ಭಸಾಧಕತನದ ಪ್ರವೃತ್ತಿಗಳು ಮತ್ತು ಕ್ರಾಂತಿ ವಿರೋಧಿ ಪ್ರವೃತ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಹೋರಾಡಬೇಕಾದ ಅನಿವಾರ್ಯತೆ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ "ಟೀಕಾ ಸ್ವಾತಂತ್ರ್ಯವನ್ನು" ಅಲ್ಲಗೆಳೆದರೆ "ಚಿಂತನೆ ಜಡ್ಡುಗಟ್ಟಿ" ಹೋಗುತ್ತದೆಂಬ ಅಬ್ಬರದ ಮಾತುಗಳ ನಿಜ ಸ್ವರೂಪವೇನೆಂದರೆ ಚಿಂತನೆಗೆ ಸಂಬಂಧಿಸಿದ ಹಾಗೆ ಅವರ ನಿಸ್ಸಹಾಯಕತೆಯನ್ನು ಮತ್ತು ನಿರಾಶಕ್ತಿಯನ್ನು ತೋರಿಸುತ್ತದೆ. ವಿಮರ್ಶಾತ್ಮಕ ಸ್ವಾತಂತ್ರ್ಯದ ಅರ್ಥ ಒಂದು ಸಿದ್ಧಾಂತದ ಸ್ಥಳದಲ್ಲಿ ಇನ್ನೊಂದನ್ನು ಇರಿಸುವುದು ಎಂದು ಅರ್ಥವಲ್ಲ. "ಆದರೆ ಎಲ್ಲಾ ಅಖಂಡವಾದ ಹಾಗೂ ಮನನ ಮಾಡಿದ ಸಿದ್ಧಾಂತದಿಂದ ಸ್ವಾತಂತ್ರ್ಯವೆಂದಾಗುತ್ತದೆ. ಅದು ಸಾರ ಸಂಗ್ರಹವಾದದ

ಮಾಕ್ಸಿಂ ಗೋರ್ಕಿಯವರೊಂದಿಗೆ, ೧೯೨೦



ಹಾಗೂ ನೀತಿ ಸಂಹಿತೆಯ ಅರ್ಥ ನೀಡುತ್ತದೆ. ಇದಕ್ಕೆ ರಶಿಯನ್ ಸಮಾಜವಾದಿ ಪ್ರಜಾತಂತ್ರವಾದಿಗಳು ಸ್ಪಷ್ಟ ನಿದರ್ಶನವಾಗುತ್ತಾರೆ.

ಮಾರ್ಕ್ಸ್‌ವಾದವು ವಿಸ್ತೃತವಾಗಿ ಹರಡಿದಂತೆ ಸೈದ್ಧಾಂತಿಕ ಮಟ್ಟ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ ಎಂಬುದನ್ನು ಚಳುವಳಿಯ ನಿಜವಾದ ಸ್ಥಿತಿಯ ಅಶಲ್ಪ ಪರಿಚಯವಿರುವವನು ಸಹಾ ಕಾಣದೇ ಹೋಗುವುದಿಲ್ಲಾ. ಸೈದ್ಧಾಂತಿಕ ತಿಳುವಳಿಕೆ ಕಡಿಮೆ ಇರುವುದು ಅಥವಾ ಏನೂ ಇಲ್ಲದ ಅನೇಕರು ನಮ್ಮ ಚಳುವಳಿಯಲ್ಲಿ ಅದರ ಪ್ರಾಯೋಗಿಕ ಮಹತ್ವ ಹಾಗೂ ಪ್ರಾಯೋಗಿಕ ಯಶಸ್ಸುಗಳಿಂದಾಗಿ ಸೇರಿಕೊಳ್ಳುತ್ತಾರೆ. ಟೀಕಾ ಸ್ವಾತಂತ್ರ್ಯದ ಪ್ರತಿಪಾದಕರು ಮಾರ್ಕ್ಸ್‌ರವರು ಹೇಳಿರುವ - "ನಿಜವಾದ ಚಲನೆಯ ಪ್ರತಿಯೊಂದು ಹೆಜ್ಜೆಯು ಹತ್ತಾರು ಕಾರ್ಯಕ್ರಮಗಳಿಗಿಂತ ಹೆಚ್ಚು ಮುಖ್ಯವಾದದ್ದು" (ಇದನ್ನು ಗೋಥಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ಹಾಗೆ ಮಾರ್ಕ್ಸ್‌ರವರು ೧೮೭೫ ಮೇ ತಿಂಗಳು ೫ ರಂದು ಬರೆದ ಪತ್ರ) ಹಿಡಿದು ಹೌಹಾರುತ್ತಾರೆ. ಇದು ಎಷ್ಟು ಜ್ಞಾನ ಶೂನ್ಯತೆಯನ್ನು ತೋರಿಸುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. ಸೈದ್ಧಾಂತಿಕ ಅವ್ಯವಸ್ಥೆಯ ಕಾಲದಲ್ಲಿ ಮಾರ್ಕ್ಸ್‌ರವರ ಮಾತುಗಳನ್ನು ಪುನರುಚ್ಚರಿಸುವುದೆಂದರೆ ಶವ ಸಂಸ್ಕಾರದ ದಿನದಂದು ದುಃಖಿಸುತ್ತಿರುವವರಿಗೆ ಅಂತಹ ದಿನಗಳು ಮತ್ತೆ ಮತ್ತೆ ಬರಲೆಂದು ಹಾರೈಸಿದಂತಾಗುತ್ತದೆ. ಆದರೆ ಮಾರ್ಕ್ಸ್‌ರವರು ಸೂತ್ರಗಳ ನಿರೂಪಣೆಯನ್ನು ಸಾರಸಗಟಾಗಿ ಬಳಸುವುದನ್ನು ತೀವ್ರವಾಗಿ ಖಂಡಿಸಿದ್ದಾರೆ. ಮಾರ್ಕ್ಸ್‌ರವರು ಪಕ್ಷದ ಮುಖಂಡರಿಗೆ ಬರೆದಿರುವ ಪತ್ರದಲ್ಲಿ ಹೀಗೆ ಬರೆದಿದ್ದಾರೆ. "ನೀವು ಒಂದುಗೂಡಬೇಕು ಎನ್ನುವುದಾದರೆ ಚಳುವಳಿಯ ಪ್ರಾಯೋಗಿಕ ಗುರಿಗಳನ್ನು ತೃಪ್ತಿಗೊಳಿಸಲು ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಆದರೆ ತತ್ವಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಚೌಕಾಶಿಗೂ ಅವಕಾಶ ನೀಡಬೇಡಿ. ಸೈದ್ಧಾಂತಿಕ ರಿಯಾಯಿತಿಗಳನ್ನು ನೀಡಬೇಡಿ" ಎಂದು ಮಾರ್ಕ್ಸ್ ಹೇಳಿದ್ದನ್ನು ವಿಕೃತಗೊಳಿಸುವ ಪ್ರಯತ್ನವನ್ನು ವಿಮರ್ಶಾ ಸ್ವಾತಂತ್ರ್ಯದ ಪ್ರತಿಪಾದಕರು ನಿರಂತರವಾಗಿ ಮಾಡುತ್ತಿದ್ದಾರೆ.

ವಿಮರ್ಶಾ ಸ್ವಾತಂತ್ರ್ಯದ ಹೆಸರಿನಲ್ಲಿ ಕ್ರಾಂತಿಕಾರಿ ಚಳುವಳಿಯನ್ನು ದಿಕ್ಕುತಪ್ಪಿಸುವುದರ ವಿರುದ್ಧ ಮತ್ತು ವಿಮರ್ಶಾ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುವ ಸಂದರ್ಭಸಾದಕತನದ ವಿರುದ್ಧ ಶ್ರಮಜೀವಿ ವರ್ಗ ಮತ್ತು ಅದಕ್ಕೆ ನಾಯಕತ್ವ ಕೊಡುವ ಕ್ರಾಂತಿಕಾರಿ ಪಕ್ಷವು ನಿರಂತರ ಹೋರಾಟವನ್ನು ನಡೆಸಬೇಕಾಗಿದೆ. ಶ್ರಮಜೀವಿ ವರ್ಗದ ಮುಂದೆ ಮತ್ತು ಸಮಾಜವಾದಿ ಪ್ರಜಾತಂತ್ರದ ಮುಂದೆ ಮುಖ್ಯವಾಗಿ ಮೂರು ಪ್ರಶ್ನೆಗಳಿವೆ. ಒಂದು ಕ್ರಾಂತಿಕಾರಿ ಪಕ್ಷವು ರೂಪಗೊಳ್ಳುವ ಪ್ರಕ್ರಿಯೆದಲ್ಲಿರುವಾಗ ಚಳುವಳಿಯನ್ನು ಸರಿಯಾದ ಪಥದಿಂದ ಅಡ್ಡದಾರಿಗೆ ತಿರುಗಿಸುವಂತಹ ಕ್ರಾಂತಿ ವಿರೋದಿ ಪ್ರವೃತ್ತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟವನ್ನು ನಿರಂತರವಾಗಿ ನಡೆಸಬೇಕಾಗುತ್ತದೆ. ಇದರಿಂದಾಗಿ ಸಿದ್ಧಾಂತದ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಮಂದ ದೃಷ್ಟಿಯ ಜನರಷ್ಟೆ ಕ್ರಾಂತಿಕಾರಿ ಚಳುವಳಿಯಲ್ಲಿನ ವಿವಿಧ ಪ್ರವೃತ್ತಿಗಳ ಬಗ್ಗೆ ನಿಖರವಾದ ವ್ಯತ್ಯಾಸವನ್ನು ಕಾಣದೆ ಕಟ್ಟುನಿಟ್ಟಾಗಿ ನೋಡುವುದು ಸರಿಯಲ್ಲವೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಎರಡನೆಯದಾಗಿ ಸಮಾಜವಾದಿ ಪ್ರಜಾತಂತ್ರ ಚಳುವಳಿಯು ಅಂತರರಾಷ್ಟ್ರೀಯ ಚಳುವಳಿಯ ಒಂದು ಭಾಗ. ನಾವು ಸ್ವದೇಶ ಮೂಡಾಭಿಮಾನದ ವಿರುದ್ಧ ಹೋರಾಡುವುದಷ್ಟೆ ಅಲ್ಲ, ಇತರ ದೇಶಗಳ ಚಳುವಳಿಯ ಅನುಭವಗಳನ್ನು ಬಳಸಿಕೊಳ್ಳಬೇಕು. ಬಳಸಿಕೊಳ್ಳಬೇಕಾದರೆ ಅವುಗಳ ಪರಿಚಯ ಮಾಡಿಕೊಂಡರಷ್ಟೆ ಸಾಲದು. ಆ ಅನುಭವಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಅವುಗಳನ್ನು ಸ್ವತಂತ್ರವಾಗಿ ಪರೀಕ್ಷೆಗೆ ಒಳಪಡಿಸುವುದು ಅವಶ್ಯ. ಮೂರನೆಯದಾಗಿ ಸಮಾಜವಾದಿ ಪ್ರಜಾತಂತ್ರ ಚಳುವಳಿಯು ಒಂದು ನಿರ್ದಿಷ್ಟ ದೇಶದಲ್ಲಿನ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ, ಎಂತಹ ಕಾರ್ಯಭಾರಗಳಾಗಿರುತ್ತವೆಂದರೆ ಇಡೀ ಜನರನ್ನು ಬಂಡವಾಳಶಾಹಿ ನಿರಂಕುಶ ಪ್ರಭುತ್ವದ ನೊಗದಿಂದ ಮುಕ್ತಿಗೊಳಿಸುವ ಕಾರ್ಯಭಾರವಿರುತ್ತದೆ. ಆ ಚಳುವಳಿಗಳ ಮೇಲೆ ಅತಿ ಮುಖ್ಯವಾದ ರಾಜಕೀಯ ಮತ್ತು ಸಂಘಟನಾತ್ಮಕವಾದ ಕರ್ತವ್ಯಗಳು ಇರುತ್ತವೆ. ಆದುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಂತ ಮುಂದುವರಿದ ಸಿದ್ಧಾಂತದಿಂದ ಮಾರ್ಗದರ್ಶಿತವಾದ ಪಕ್ಷ ಒಂದಷ್ಟೆ ಯೋಧನ ಪಾತ್ರವನ್ನು ವಹಿಸಬಲ್ಲದು.

ಸ್ವಯಂಪ್ರೇರಿತ ಚಳುವಳಿಗಳು ಮತ್ತು ಕ್ರಾಂತಿಕಾರಿ ಸಂಘಟನೆಗಳ ಪಾತ್ರ:


ಕ್ರಾಂತಿಕಾರಿ ಪ್ರಜ್ಞೆ ಮತ್ತು ಸಮಾಜವಾದಿ ಪ್ರಜ್ಞೆಗಳು ಸ್ವತಃ ಕಾರ್ಮಿಕರ ಚಳುವಳಿಯಲ್ಲಿ ಸ್ವಯಂ ಪ್ರೇರಣೆಯಿಂದ ಬೆಳೆದು ಸ್ವಯಂ ಪ್ರೇರಣೆಯಿಂದಲೇ ಕಾರ್ಮಿಕ ವರ್ಗದ ಮಧ್ಯದಲ್ಲೇ ಹರಡುತ್ತವೆ ಎಂದು ಆರ್ಥಿಕವಾದಿಗಳು ಪ್ರತಿಪಾದಿಸುತ್ತಾರೆ. ಆದರೆ ಇದು ಆರ್ಥಿಕವಾದಿಗಳ ಅಜ್ಞಾನ ಮತ್ತು ಅವೈಜ್ಞಾನಿಕವಾಗಿದೆ. ವೈಜ್ಞಾನಿಕ ಸಮಾಜವಾದಿ ಸಿದ್ಧಾಂತಕ್ಕೆ ಕಾರ್ಮಿಕ ವರ್ಗದ ಸ್ವಯಂ ಪ್ರೇರಿತ ಅಥವಾ ಪ್ರಜ್ಞಾ ಪೂರ್ವಕ ಟ್ರೇಡ್ ಯೂನಿಯನ್ ಚಳುವಳಿಯ ಕಾರ್ಮಿಕ ವರ್ಗದ ತಕ್ಷಣದ ಬೇಡಿಕೆಗಳಿಗಾಗಿ ಸೀಮಿತವಾಗಿರುತ್ತದೆ. ಆರ್ಥಿಕ ಸಮಸ್ಯೆಗಳಿಗಾಗಿ ಹೋರಾಡುವ ಕಾರ್ಮಿಕರ ಚಳುವಳಿಯೊಂದು ಸಮಾಜವಾದಕ್ಕೂ ಹೋರಾಡುವುದೆಂದು ಯಾರಾದರೂ ಅಭಿಪ್ರಾಯಪಟ್ಟರೆ ಅದು ತಪ್ಪಾಗುತ್ತದೆ. ಕಾರ್ಮಿಕ ವರ್ಗದಲ್ಲಿ ಮಾಲೀಕರ ವಿರೋಧ ಭಾವನೆ ಸರ್ಕಾರದ ಬಗ್ಗೆ ವಿರೋಧದ ಭಾವನೆ ಬೆಳೆದು ಬರಬಹುದು. ಆದರೆ ಒಂದು ವ್ಯವಸ್ಥೆಯ ಬಗ್ಗೆ ವಿರೋಧ ಭಾವನೆ ಸ್ವಯಂ ಪ್ರೇರಿತವಾಗಿ ಬೆಳೆದು ಬರುವುದೂ, ಹೆಚ್ಚೆಂದರೆ ಒಂದು ವ್ಯವಸ್ಥೆಯ ಬಗ್ಗೆ ಅಸಹ್ಯದ ಭಾವನೆ ಅಥವಾ ಜಿಗುಪ್ಸೆ ಬೆಳೆದು ಬರಬಹುದು. ಆದರೆ ಆ ವ್ಯವಸ್ಥೆಯು ತಮ್ಮ ಎಲ್ಲಾ ರೀತಿಯ ಶೋಷಣೆಗೆ ಮೂಲ ಕಾರಣವೆಂದು ಅವ್ಯವಸ್ಥೆ ಹೋಗಿ ಹೊಸ ವ್ಯವಸ್ಥೆಯೊಂದು ಬರಬೇಕೆಂಬ ಭಾವನೆ ಸ್ವಯಂ ಪ್ರೇರಣೆಯಾಗಿ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಬರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವ್ಯವಸ್ಥೆ ಬದಲಾಗಬೇಕೆಂಬ ಆಕಾಂಕ್ಷೆ ಇದ್ದರೂ. ಈ ವ್ಯವಸ್ಥೆ ಬದಲಾಗಿ ಎಂತಹ ವ್ಯವಸ್ಥೆ ಬರಬೇಕೆಂಬುದರ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇರುವುದಿಲ್ಲ. ಆಥಿಕವಾದಿಗಳು ಕಾರ್ಮಿಕ ವರ್ಗದ ಚಳುವಳಿಯನ್ನು ಆರ್ಥಿಕ ಸಮಸ್ಯೆಗಳಿಗೆ ಸೀಮಿತಗೊಳಿಸುವುದಷ್ಟೇ ಅಲ್ಲದೆ ಕಾರ್ಮಿಕ ವರ್ಗದಲ್ಲಿ ರಾಜಕೀಯ ಪ್ರಜ್ಞೆಯ ಬೆಳವಣಿಗೆಗೆ ಕಡಿವಾಣವನ್ನು ಹಾಕಲು ಪ್ರಜ್ಞಾ ಪೂರ್ವಕವಾಗಿಯೇ ಪ್ರಯತ್ನ ಮಾಡುತ್ತಾರೆ. ಆರ್ಥಿಕ ಶೋಷಣೆಯ ವಿರುದ್ಧ ಸ್ವಯಂ ಪ್ರೇರಿತ ಸಮರ ಶೀಲ ಹೋರಾಟಗಳನ್ನು ನಡೆಸಿರುವ ಯಾವುದೇ ಕಾರ್ಮಿಕ 'ಚಳುವಳಿಯ (ಯಾವುದೇ ದೇಶದಲ್ಲಾಗಲಿ) ಬಂಡವಾಳಶಾಹಿ ಶೋಷಕ ವ್ಯವಸ್ಥೆಯನ್ನು ನಾಶ ಮಾಡಲು ಸಾಧ್ಯವಿಲ್ಲ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ ಯುರೋಪಿನಲ್ಲಿನ ಬಂಡವಾಳ ಶಾಹಿ ದೇಶಗಳಲ್ಲಿನ ಕಾರ್ಮಿಕ ಚಳುವಳಿಗಳು.

ಸಮಾಜವಾದಿ ಸಿದ್ಧಾಂತ ಮತ್ತು ವರ್ಗ ರಾಜಕೀಯದ ಸಿದ್ಧಾಂತವು ಸ್ವಯಂ ಪ್ರೇರಿತವಾಗಿ ಕಾರ್ಮಿಕ ಚಳುವಳಿಗಳಲ್ಲಿ ಬರುವುದಿಲ್ಲ. ಬದಲು ಸ್ವಯಂ ಪ್ರೇರಿತ ಕಾರ್ಮಿಕ ಚಳುವಳಿಯಿಂದ ಹೊರಗೆ ಉಂಟಾದ ಸಿದ್ಧಾಂತವಾಗಿದೆ ಎಂದು ಕಾಂ: ಲೆನಿನ್ನರು ಪ್ರತಿಪಾದಿಸಿದ್ದಾರೆ.

ಈ ಸಂದರ್ಭದಲ್ಲಿ ಕಾರ್ಮಿಕ ಚಳುವಳಿಯಲ್ಲಿ ಸ್ವಯಂ ಪ್ರೇರಣೆ ಮತ್ತು ಪ್ರಜ್ಞಾ ಪೂರ್ವಕತೆಗಳ ತುಲನಾತ್ಮಕ ಅಂಶದ ಸಮಸ್ಯೆಯನ್ನು ಸ್ವಯಂ ಪ್ರೇರಣೆಯ ಕಾರ್ಮಿಕ ಚಳುವಳಿಗೆ ಸಮಾಜವಾದಿ ಸಿದ್ಧಾಂತದ ಸೇರ್ಪಡೆಯ ಪ್ರಶ್ನೆಯನ್ನು ಎತ್ತಿದರು. ಕಾರ್ಮಿಕ ವರ್ಗ ಚಳುವಳಿಗೆ ಸಮಾಜವಾದಿಸಿದ್ಧಾಂತವನ್ನು ತರುವುದು ಹೊರಗಿನಿಂದಷ್ಟೆ (ಅಂದರೆ ಆರ್ಥಿಕ ಹೋರಾಟದ ಹೊರಗಿನಿಂದ) ಸಾಧ್ಯವೆಂದು ಕಾಂ: ಲೆನಿನರು ಪ್ರತಿಪಾದಿಸಿದರು. ಕಾರ್ಮಿಕ ಜನ ಸಮೂಹಗಳು ತಮ್ಮ ಚಳುವಳಿಯ ಪ್ರಕ್ರಿಯೆಯಲ್ಲಿ ತಾವೇ ಸ್ವತಂತ್ರವಾಗಿ ಸಿದ್ಧಾಂತ ಒಂದನ್ನು ರೂಪಿಸಿಕೊಳ್ಳುತ್ತವೆ ಎಂಬ ಮಾತು ಇರಲು ಸಾಧ್ಯವಿಲ್ಲ. ಅವುಗಳ ಮುಂದೆ ಇರುವ ಏಕೈಕ ಆಯ್ಕೆಯೆಂದರೆ ಬಂಡವಾಳಶಾಹಿ ಶೋಷಕ ಸಿದ್ಧಾಂತವನ್ನು ಒಪ್ಪಿಕೊಳ್ಳುವುದು. ಇಲ್ಲವೆ ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಳ್ಳುವುದು. ಮಧ್ಯ ಮಾರ್ಗವೆಂಬುದಿಲ್ಲ. ಆದುದರಿಂದ ಶ್ರಮ ಜೀವಿ ವರ್ಗವು ನಿಜವಾಗಿಯೂ ತನ್ನ ಶೋಷಣೆಯ ಮೂಲ ಬೇರನ್ನು ಹುಡುಕಿ ಶ್ರಮ ಜೀವಿ ವರ್ಗದ ನಿಜವಾದ ಶತ್ರುವಾದ ಬಂಡವಾಳಶಾಹಿ ವರ್ಗ ಶೋಷಣೆಯನ್ನು ಮತ್ತು ಅದರ ಸಿದ್ಧಾಂತವನ್ನು ತಿರಸ್ಕರಿಸಿ ಕಿತ್ತೊಗೆಯಬೇಕಾದರೆ ಅದಕ್ಕೆ ವೈಜ್ಞಾನಿಕ ಸಮಾಜವಾದ ಸಿದ್ಧಾಂತ ಒಂದೆ ಅನಿವಾರ್ಯ ಮಾರ್ಗ. ಈ ಸಿದ್ಧಾಂತವನ್ನು ಯಾವುದೇ ಕಾರಣದಿಂದ ಅಲ್ಪಗಾಣಿಸಬಾರದು ಮತ್ತು ಸಣ್ಣ ಪ್ರಮಾಣದಲ್ಲೂ ಸಹಾ ಪಕ್ಕಕ್ಕೆ ಸರಿಯುವುದು ಅಪಾಯಕಾರಿ ಆಗುತ್ತದೆ.

ಸಮಾಜವಾದಿ ಪ್ರಜ್ಞೆ ಸ್ವಯಂ ಪ್ರೇರಣೆ ಕಾರ್ಮಿಕ ವರ್ಗದ ಚಳುವಳಿಯ ಒಳಗಿನಿಂದ ಕಾಣಿಸಿಕೊಳ್ಳುವುದಿಲ್ಲ. ಬದಲಾಗಿ ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಒಪ್ಪಿರುವ ಪಕ್ಷವಷ್ಟೆ. ಕಾರ್ಮಿಕ ವರ್ಗದ ಚಳುವಳಿಯ ಹೆಸರಿನಲ್ಲಿ ಕಾರ್ಮಿಕ ವರ್ಗದ ಮೇಲೆ ಬಂಡವಾಳಶಾಹಿ ಸಿದ್ಧಾಂತಗಳ ಪ್ರಭಾವವನ್ನು ತರುವುದರ ವಿರುದ್ಧ ಮತ್ತು ಬಂಡವಾಳಶಾಹಿ ವಿಚಾರಗಳ ಪ್ರಭಾವಕ್ಕೆ ಕಾರ್ಮಿಕ ಚಳುವಳಿಗೆ ಕೊಂಡೊಯ್ಯುವ ಸಂದರ್ಭಸಾಧಕ ತನದ ವಿರುದ್ಧ ಕಾರ್ಮಿಕ ವರ್ಗವು ನಿರಂತರವಾಗಿ ಹೋರಾಡಬೇಕಾಗಿದೆ. ಹಾಗೆಯೇ ಸಮಾಜವಾದಿ ಸಿದ್ಧಾಂತದ ಪರಿಶುದ್ಧತೆಗಾಗಿ ಶ್ರಮಜೀವಿ ವರ್ಗದ ಮತ್ತು ಅದರ ನಾಯಕ ಪಕ್ಷದ ಮಹತ್ತರ ಕರ್ತವ್ಯವಾಗಿದೆ. ಕಾರ್ಮಿಕ ಚಳುವಳಿಯು, ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷದ ಸಮಾಜವಾದ ಸಿದ್ಧಾಂತದ ಮಹೋನ್ನತ ಪ್ರಾಮುಖ್ಯತೆಯನ್ನು ಅರಿಯಬೇಕಾಗಿದೆ. "ಅತ್ಯಂತ ಮುಂದುವರಿದ ಸಿದ್ಧಾಂತದಿಂದ ಮಾರ್ಗದರ್ಶಿತವಾದ ಪಕ್ಷ ಒಂದಷ್ಟೆ ಮುಂಚೂಣಿಯ ಯೋಧನ ಪಾತ್ರವನ್ನು ನಿರ್ವಹಿಸಲ್ಲದು. ಸಮಾಜವಾದಿ ಪ್ರಜಾತಂತ್ರ ಬೆಳವಣಿಗೆ ಐತಿಹಾಸಿಕ ವೈಶಿಷ್ಯದಿಂದಾಗಿ ಹಾಗೂ ಅದರ ಮುಂದಿರುವ ಕ್ರಾಂತಿಕಾರಿ ಕಾರ್ಯ ಜವಾಬ್ದಾರಿಗಾಗಿ ಪುರೋಗಾಮಿ ಸಿದ್ಧಾಂತವು ವಿಶೇಷ ಮಹತ್ವದ ಸ್ಥಾನವನ್ನು ಪಡೆಯುತ್ತದೆ. "ಮಾಡಬೇಕಾದುದೇನು" ಕೃತಿಯಲ್ಲಿ ರಶಿಯದ ಶ್ರಮ ಜೀವಿ ವರ್ಗ ಮತ್ತು ಅದರ ಪಕ್ಷದ ತಂತ್ರಗಳ ಸಮರ್ಥನೆಗೆ ಅಧ್ಯ ಗಮನ ಕೊಡಲಾಗಿದೆ. ಕಾರ್ಮಿಕ ವರ್ಗವು ಭೂಮಾಲೀಕ ಬಂಡವಾಳಶಾಹಿ ಪ್ರಭುತ್ವದ ವಿರುದ್ಧ ಸಾರ್ವಜನಿಕ ಪ್ರಜಾಸತ್ತಾತ್ಮಕ ಚಳುವಳಿಯ ನಾಯಕತ್ವವನ್ನು ವಹಿಸಲೇಬೇಕು ಮತ್ತು ವಹಿಸಬಲ್ಲದು ಎಂಬುದನ್ನು ಲೆನಿನರು ತೋರಿಸಿ ಕೊಟ್ಟಿದ್ದಾರೆ. ಇಂತಹ ಮಹತ್ತರ ಕಾರ್ಯಭಾರವನ್ನು ನಿರ್ವಹಿಸಲು ಶ್ರಮಜೀವಿ ವರ್ಗಕ್ಕೆ ರಾಜಕೀಯ ಶಿಕ್ಷಣದ ಅನಿವಾರ್ಯ ಜವಾಬ್ದಾರಿ ಆಯಿತು.


ಕಾದಂಬರಿಗಾರ ಹೆಚ್.ಜಿ. ವೆಲ್ಸ್‌ರೊಂದಿಗೆ



ಪಶ್ಚಿಮದ ಯುರೋಪ ದೇಶಗಳಲ್ಲಿ ಮತ್ತು ಇತರ ವಿಭಾಗಗಳಲ್ಲಿ ಆರ್ಥಿಕ ವಾದಿಗಳು ಐತಿಹಾಸಿಕ ಪ್ರಕ್ರಿಯೆಯ ಸ್ವಯಂ ಪ್ರೇರಣೆಯನ್ನು ಅವಲಂಬಿಸಿ ಕಾರ್ಮಿಕ ವರ್ಗದ ರಾಜಕೀಯ ಹೋರಾಟದ ಕ್ರಿಯಾಶೀಲತೆಯನ್ನು ಸರಿಯಾಗಿ ಮಾಲೀಕರಿಸದೆ ಇದನ್ನು ಶುದ್ಧ ಆರ್ಥಿಕ ಬೇಡಿಕೆಗಳ ಮಟ್ಟಕ್ಕೆ ಇರಿಸಿ ಅದರ ವಲಯವನ್ನು ಆರ್ಥಿಕ ಹಾಗೂ ವೃತ್ತಿ ಸಂಘ ಹೋರಾಟಕ್ಕೆ ಸೀಮಿತಗೊಳಿಸುತ್ತಾರೆ. ಇಂತಹ ವೃತ್ತಿ ಸಂಘವಾದಿ ಕಾರ್ಮಿಕ ಚಳುವಳಿಯು ಅನಿವಾರ್ಯವಾಗಿ ಬಂಡವಾಳಶಾಹಿ ವಿಚಾರಗಳ ಮತ್ತು ಬಂಡವಾಳಶಾಹಿ ರಾಜಕಾರಣಕ್ಕೆ ಅಧೀನವಾಗುತ್ತದೆ. ಈ ಸಂದರ್ಭಸಾಧಕತನದ ವಿರುದ್ಧ ಸಮಾಜದ ವಿಕಾಸದಲ್ಲಿ ರಾಜಕೀಯ ಹೋರಾಟದಲ್ಲಿ ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳನ್ನು ಸರಿಯಾದ ರೀತಿಯಲ್ಲಿ ಅಳವಡಿಸಿ "ವರ್ಗಗಳ ಅತ್ಯಂತ ಅಗತ್ಯ ನಿರ್ಣಾಯಕ ಹಿತಗಳನ್ನು ಆಮೂಲಾಗ್ರ ರಾಜಕೀಯ ಬದಲಾವಣೆಗಳಿಂದ ಮಾತ್ರವೆ ತೃಪ್ತಿಗೊಳಿಸಲು ಸಾಧ್ಯ. ನಿರ್ದಿಷ್ಟವಾಗಿ ಶ್ರಮಜೀವಿ ವರ್ಗದ ಮೂಲಭೂತ ಆರ್ಥಿಕ ಹಿತಗಳನ್ನು ಸಾಧಿಸಬೇಕಾದರೆ ಭೂ ಮಾಲೀಕ ಬಂಡವಾಳಶಾಹಿ ಸರ್ವಾಧಿಕಾರಿ ಸ್ಥಳದಲ್ಲಿ ಶ್ರಮಜೀವಿ ವರ್ಗದ ಸರ್ವಾಧಿಕಾರವನ್ನು ತರುವ ರಾಜಕೀಯ ಕ್ರಾಂತಿಯಿಂದ ಮಾತ್ರವೇ ಸಾಧ್ಯ.

ಶ್ರಮಜೀವಿ ವರ್ಗದ ಸಂಘಟನೆಯ ಕಾರ್ಯಭಾರಗಳ ವಲಯದಲ್ಲಿ ಸ್ವಯಂ ಪ್ರೇರಣೆಗೆ ಆರ್ಥಿಕವಾದಿಗಳು ತಲೆ ಬಾಗುವುದು. ಪಕ್ಷದ ನಿರ್ಮಾಣದ ಕೆಲಸಗಳಲ್ಲಿ ಅವರ ಅಸಂಗತವಾದವನ್ನು ತೋರಿಸುತ್ತದೆ. ಸಮಾಜವಾದಿ ಪ್ರಜಾತಂತ್ರದ ಚಳುವಳಿಯನ್ನು ಟ್ರೇಡ್ ಯೂನಿಯನ್ ಮಟ್ಟಕ್ಕಿಳಿಸುವುದು ಕಾರ್ಮಿಕ ವರ್ಗದ ಸಂಘಟನೆಯಲ್ಲಿ ಎರಡು ರೂಪಗಳನ್ನು ತೋರಿಸುತ್ತದೆ. ಶ್ರಮ ಜೀವಿ ವರ್ಗವು ತನ್ನ ಆರ್ಥಿಕ ಸಮಸ್ಯೆಗಳಿಗಾಗಿ ವೃತ್ತಿ ಸಂಘಟನೆಗಳನ್ನು ಕಟ್ಟುವುದು ಹಾಗೂ ಕಾರ್ಮಿಕ ವರ್ಗದ ವರ್ಗಸಂಘಟನೆಯ ಉನ್ನತ ರೂಪವಾಗಿ ರಾಜಕೀಯ ಪಕ್ಷವನ್ನು ಕಟ್ಟುವುದು ಎಂಬ ವಿಷಯಗಳನ್ನು ಗೊಂದಲ ಮಯಗೊಳಿಸುವುದು ಆರ್ಥಿಕ ವಾದಿಗಳ ಮೂಲವೆಂದು ಲೆನಿನರು ತಿಳಿಸಿ ಹೇಳಿದ್ದಾರೆ. ಜನ ಸಮೂಹಗಳೊಡನೆ ಅವಿಚ್ಛಿನ್ನವಾಗಿ ಸಂಬಂಧ ಪಡೆದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಹೋರಾಟಕ್ಕೆ ಸಮರ್ಥವಾದ ರಾಜಕೀಯ ಪಕ್ಷದ ರಚನೆಯು ಅತ್ಯಂತ ಮಹತ್ತರವಾದ ಕೆಲಸವಾಗುತ್ತದೆ. ಪಕ್ಷವು ಕಾರ್ಮಿಕರ ಸ್ವಯಂ ಪ್ರೇರಿತ ಚಳುವಳಿಯ ಮುಂಚೂಣಿಯಲ್ಲಿದ್ದುಕೊಂಡು ಅದಕ್ಕೆ ಮಾರ್ಗ ದರ್ಶನ ಮಾಡುತ್ತಾ ಶ್ರಮಜೀವಿ ವರ್ಗವು ಎದುರಿಸುತ್ತಿರುವ ಎಲ್ಲಾ ಸೈದ್ಧಾಂತಿಕ ರಾಜಕೀಯ ಮತ್ತು ಸಂಘಟನಾತ್ಮಕ ಪ್ರಶ್ನೆಗಳಿಗೂ ಉತ್ತರ ಕೊಡಬೇಕು. ಶ್ರಮ ಜೀವಿ ವರ್ಗದ ಸ್ವಯಂಪ್ರೇರಿತ ಹೋರಾಟವು ಕ್ರಾಂತಿಕಾರಿಗಳ ಒಂದು ಬಲಿಷ್ಠ ಸಂಘಟನೆ ಯಿಂದ ಮಾರ್ಗದರ್ಶಿತವಾಗುವವರೆಗೂ ಶ್ರಮ ಜೀವಿಗಳ ನೈಜ ವರ್ಗ ಹೋರಾಟವಾಗುವುದಿಲ್ಲ.

ಜೂನ್ 1917ರ ಒಂದು ವ್ಯಂಗ್ಯ ಚಿತ್ರ



ಸಾಮ್ರಾಜ್ಯಶಾಹಿ ಕುರಿತು (ಪುಟ ೧೬ರಿಂದ)

ಹೇಳಿದ ಕಾರಣಗಳಿಂದಾಗಿಯೇ ಅಮೆರಿಕಾದ ಆರ್ಥಿಕ ಅಭಿವೃದ್ಧಿ ಇನ್ನೂ ಹೆಚ್ಚು ಎಂದು ತನ್ನ ಕೃತಿ "ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ"ದಲ್ಲಿ ಲೆನಿನ್ ತೋರಿಸಿಕೊಟ್ಟರು. ಅದರ ಬೆಳವಣಿಗೆಯೊಂದಿಗೆ ಪರಾವಲಂಬಿ ಲಕ್ಷಣಗಳೂ ಕಾಣಿಸಿಕೊಳ್ಳುತ್ತವೆ. ಅವು ಎದ್ದು ಕಾಣಲಾರಂಭಿಸುತ್ತವೆ.

ಶ್ರಮಿಕ ವಿಭಾಗದಲ್ಲಿ ಶ್ರೀಮಂತಿಕೆಯ ಮನೋಭಾವ ಸಾಮಾಜಿಕ ಸಮಯಸಾಧಕ ತನದ ಪಾತ್ರವೂ ಸಾಮ್ರಾಜ್ಯಶಾಹಿ ಘಟ್ಟದ ಒಂದು ವಿಶಿಷ್ಟ ಲಕ್ಷಣ. ಸಾಮ್ರಾಜ್ಯಶಾಹಿ ಮತ್ತು ಸಮಯಸಾಧಕ ತನದ ನಡುವೆ ಒಂದು ಸಂಬಂಧ ಸೃಷ್ಟಿಯಾಗುತ್ತದೆ ಎನ್ನುತ್ತಾರೆ ಲೆನಿನ್ ಬ್ರಿಟಿಷ್ ಲೇಬರ್. ಪಕ್ಷ ಇಂತಹ ಮೊದಲ ಪಕ್ಷ. ಏಕೆಂದರೆ ಸಾಮ್ರಾಜ್ಯಶಾಹಿ ಮೊದಲು ಬೆಳೆದದ್ದು ಅಲ್ಲಿ ಎಂದು ಅವರು ವರ್ಣಿಸಿದ್ದಾರೆ.

ಸಮಾಜವಾದ ಹಾಗೂ ವಿಮೋಚನಾ ಹೋರಾಟಗಳ ಹಾದಿಯಲ್ಲಿ

ಈಗಾಗಲೇ ಹೇಳಿದಂತೆ ಸಾಮ್ರಾಜ್ಯಶಾಹಿಗಳ ಸರಪಳಿಯಲ್ಲಿ ಅತ್ಯಂತ ಬಲಹೀನವಾದ ಕೊಂಡಿಯನ್ನು ಮುರಿದು ಹಾಕುವ ಸಿದ್ಧಾಂತವಾಗಿದೆ. ರಷ್ಯಾದ ಝಾರ್‌ಶಾಹಿ ಆ ಕೊಂಡಿಯಾಗಿತ್ತು. ಇದು ಸಾಮ್ರಾಜ್ಯಶಾಹಿ ಸಿದ್ಧಾಂತದಲ್ಲಿ ಅತೀ ಮುಖ್ಯವಾಗಿರುವುದಾದರೂ ಆ ಸಿದ್ಧಾಂತದಲ್ಲಿ ಇನ್ನೂ ಹಲವು ಅಷ್ಟೇ. ಪ್ರಾಮುಖ್ಯವಾದ ಅಂಶಗಳು ಇವೆ. ಅತೀ ಬಲಹೀನವಾದ ಸಾಮ್ರಾಜ್ಯಶಾಹಿಯ ಕೊಂಡಿಯನ್ನು ಕಿತ್ತು ಹಾಕುವ ಸೈದ್ಧಾಂತಿಕ ನಿರೂಪಣೆಯನ್ನು ತಾರ್ಕಿಕವಾಗಿ ಬೆಳೆಸಿದಾಗ ಅದು ಒಂದು ರಾಷ್ಟ್ರದಲ್ಲಿ ಕ್ರಾಂತಿ ಸಾಧಿಸಬಹುದು ಎಂಬ ಇನ್ನೊಂದು ಸೈದ್ಧಾಂತಿಕ ನಿರೂಪಣೆಗೆ ಎಡೆ ಮಾಡಿಕೊಡುತ್ತದೆ.

ಸಾಮ್ರಾಜ್ಯಶಾಹಿಯ ಅತೀ ಬಲಹೀನವಾಗಿರುವ ಕೊಂಡಿಯನ್ನು ಕಿತ್ತು ಹಾಕುವುದೆಂದರೆ ಆ ಸಾಮ್ರಾಜ್ಯಶಾಹಿ ಶಕ್ತಿಯ ಹಿಡಿತಕ್ಕೆ ಒಳಗಾಗಿದ್ದ ಹಲವಾರು ರಾಷ್ಟ್ರಗಳ ಒಂದು ಗುಂಪು ಸ್ವತಂತ್ರವಾಗುವುದೆಂದರ್ಥ. ಇದು ಜನಾಂಗಗಳ ಸ್ವಯಂ ನಿರ್ಧಾರದ ಸಿದ್ಧಾಂತಕ್ಕೆ ಕಾರಣೀಭೂತವಾಗುತ್ತದೆ. ಈ ಜನಾಂಗಗಳು ತಾವಾಗಿಯೇ ಇತರ ಸಮಾಜವಾದೀ ಜನಾಂಗಗಳ ಜೊತೆ ಸೇರಿ ಯೂನಿಯನ್ (ಒಕ್ಕೂಟ) ರಚಿಸಿಕೊಳ್ಳಬಹುದು. ಪರಿಣಾಮವಾಗಿ ಅವುಗಳು ಕೆಲವು ಸಂದರ್ಭದಲ್ಲಿ ಬಂಡವಾಳಶಾಹಿಯ ಘಟ್ಟವನ್ನು ಬದಿಗಿರಿಸಿ ಬೆಳೆದು ಬರಬಹುದು. ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಸಂಬಂಧಪಟ್ಟ ಸಿದ್ಧಾಂತಗಳೂ, ಈ ಸಿದ್ಧಾಂತಗಳೂ ಈ ಚಳುವಳಿಗಳಿಗೆ ಮಾತೃ ರಾಷ್ಟ್ರಗಳ ಕಾರ್ಮಿಕ ವರ್ಗದ ಪಕ್ಷಗಳು ಸಹಾಯ ಮಾಡುವ ಅವಶ್ಯಕತೆಯ ಸಿದ್ಧಾಂತ ಇತ್ಯಾದಿ ಪ್ರಶ್ನೆಗಳು ಎದ್ದು ಬಂದವು. ರಷ್ಯಾದ ಕ್ರಾಂತಿಯು ಯಶಸ್ವಿಯಾದ ನಂತರ ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಎರಡನೇ ಅಧಿವೇಶನದಲ್ಲಿ ಲೆನಿನ್‌ರವರು ವಸಾಹತುಶಾಹಿ ವಿಮೋಚನಾ ಸಿದ್ಧಾಂತವನ್ನು ಪ್ರತಿಪಾದಿಸಿದರು. ಲೆನಿನ್‌ರ ಈ ವಸಾಹತುಶಾಹಿ ವಿಮೋಚನಾ ಸಿದ್ಧಾಂತವೇ ನಮ್ಮಂಥ ವಸಾಹತುಶಾಹಿ ರಾಷ್ಟ್ರಗಳಿಗೆ ಮಾರ್ಗದರ್ಶನವಿತ್ತಿತು. ಈ ಸಿದ್ಧಾಂತಕ್ಕೆ ಅನುಸಾರವಾಗಿ ಬ್ರಿಟೀಷ್ ಕಮ್ಯುನಿಸ್ಟ್ ಪಾರ್ಟಿಯಿಂದ

ನಮ್ಮ ಸ್ವಾತಂತ್ರ್ಯ ಚಳುವಳಿಗೆ ಸೌಹಾರ್ದ ಸಹಾಯ ದೊರಕಿತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಈ ಒಂದು ರಾಷ್ಟ್ರದಲ್ಲಿ ಕ್ರಾಂತಿಯ ಸಿದ್ಧಾಂತವನ್ನು ಯಶಸ್ವಿಯಾಗಿ ಅನ್ವಯಿಸಿದ ಫಲವಾಗಿ ಸೋವಿಯತ್ ಪ್ರಭುತ್ವವು ಸ್ಥಾಪಿತವಾಯಿತು. ಆದರೆ ಅದೇ ಸಂದರ್ಭದಲ್ಲಿ ಅದನ್ನು ಸಾಮ್ರಾಜ್ಯಶಾಹಿ ಯುದ್ಧಕೋರರಿಂದ ರಕ್ಷಿಸುವ ಅಪಾಯ ಎದ್ದು ಬಂತು. ಪರಿಣಾಮವಾಗಿ ಸಮಾಜವಾದೀ ಪ್ರಜಾ ಪ್ರಭುತ್ವದ ಸಾರ್ವಭೌಮತೆಯನ್ನು ಎತ್ತಿಹಿಡಿಯುವ ಮತ್ತು ರಾಷ್ಟ್ರಗಳ ಸಮುದಾಯದಲ್ಲಿ ಸಮಾಜವಾದೀ ಪ್ರಜಾಪ್ರಭುತ್ವದ ಅಸ್ತಿತ್ವದ ಮೂಲಭೂತ ಹಕ್ಕನ್ನೂ ಪ್ರತಿಪಾದಿಸುವ ಅವಶ್ಯಕತೆ ಬೆಳೆದುಬಂತು. ಇದರಿಂದಾಗಿ ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಯುಳ್ಳ ರಾಷ್ಟ್ರಗಳ ಶಾಂತಿಯುತ ಸಹಬಾಳ್ವೆಯ ಸಿದ್ಧಾಂತವು 'ವರ್ಗಮಿತ್ರತ್ವದ' ಸಿದ್ಧಾಂತವಲ್ಲ. ಅದು ಸಮಾಜವಾದೀ ರಾಷ್ಟ್ರವನ್ನು ರಕ್ಷಿಸುವ ಮತ್ತು ಎಲ್ಲಾ ರಾಷ್ಟ್ರಗಳೂ ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ತಾವೇ ನಿರ್ಧರಿಸುವ ಹಕ್ಕುಳ್ಳದ್ದು ಎಂಬುದನ್ನೂ ಸಾರುವ ಸಿದ್ಧಾಂತವಾಗಿದೆ. ಅದು ಸ್ವಯಂ ನಿರ್ಧಾರಿತ ಹಕ್ಕಿನ ಸಿದ್ಧಾಂತದೊಡನೆ ಅತೀ ನಿಕಟವಾಗಿ ಸಂಬಂಧಿಸಿದ್ದು ಸಾಮ್ರಾಜ್ಯಶಾಹಿ ಆಕ್ರಮಣಗಳಿಗೆ ವಿರೋಧ ಸೂಚಕವಾಗಿತ್ತು.

ಅತ್ಯಂತ ಬಲಹೀನವಾಗಿರುವ ಸಾಮ್ರಾಜ್ಯಶಾಹಿಯ ಕೊಂಡಿಯನ್ನು ರಷ್ಯಾದಲ್ಲಿ ಕಿತ್ತುಹಾಕಲಾರದುದೆಂದರೆ ಅದರ ಆರ್ಥಿಕವೂ ಬಹಳ ಹಿಂದುಳಿದಿತ್ತು ಎಂದರ್ಥ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಇತ್ಯಾದಿಯಾಗಿ ಹೆಚ್ಚು ಬೆಳವಣಿಗೆ ಸಾಧಿಸಿದ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ಹೋಲಿಸಿದಾಗ ಝಾರ್ ಶಾಹಿ ರಶಿಯಾ ಮತ್ತು ಅದರ ವಸಾಹತು ರಾಷ್ಟ್ರಗಳ ಆರ್ಥಿಕವು ಬಹಳ ಹಿಂದುಳಿದಿತ್ತು. ಸಾಮಾಜಿಕ, ಆರ್ಥಿಕ, ಅಂಶಗಳೂ, ರಾಜಕೀಯ ಸಂಘಟನೆಯೂ, ಪ್ರಭುತ್ವದ ಸ್ವರೂಪವು ಎಲ್ಲವೂ ನವೀನವಾಗಿ ನಿರ್ಧರಿಸಲ್ಪಡಬೇಕಾಯಿತು. ಇದನ್ನೇ ಕಾರ್ಮಿಕ ವರ್ಗದ ಸರ್ವಾಧಿಕಾರದ ಸಿದ್ಧಾಂತವಾಗಿ ಲೆನಿನ್ ಬೆಳೆಸಿದರು. ಇದರ ಜೊತೆಯಲ್ಲೇ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ಸಖ್ಯತೆ ಸಿದ್ಧಾಂತವಾಗಿ ಬೆಳೆಯಿತು. ಕಾರ್ಮಿಕವರ್ಗ ಮತ್ತು ರೈತಾಪಿ ವರ್ಗಗಳ ಸಖ್ಯತೆಯ ಸಿದ್ಧಾಂತದ ಪ್ರಾಮುಖ್ಯತೆಯನ್ನು ನಮ್ಮ ದೇಶದ ಹಾಗೂ ಜಗತ್ತಿನ ಇತರೆ ರಾಷ್ಟ್ರೀಯ ವಿಮೋಚನಾ ಚಳುವಳಿಗಳಲ್ಲಿ ನಾವು ಕಾಣಬಹುದು. ಲೆನಿನ್‌ರ ಕಾರ್ಮಿಕ ವರ್ಗದ ಸರ್ವಾಧಿಕಾರದ ಸಿದ್ಧಾಂತ ಹಾಗೂ ಸಾರ್ವತ್ರಿಕವಾಗಿರುವ ಸರ್ವಾಧಿಕಾರೀ ವ್ಯವಸ್ಥೆಯ ನಡುವೆಯಲ್ಲಿ ಗೊಂದಲ ಮಾಡಬಾರದು. ಮಾರ್ಕ್ಸ್‌ನ ಪ್ರಭುತ್ವ ಸಿದ್ಧಾಂತದ ಪ್ರಕಾರ ಅದು ಒಂದು ಅಥವಾ ಹಲವು ವರ್ಗಗಳ ಸರ್ವಾಧಿಕಾರವಾಗಿರುತ್ತದೆ. ಬಂಡವಾಳಶಾಹೀ ಪ್ರಜಾಪ್ರಭುತ್ವಗಳಲ್ಲಿ ಬಂಡವಾಳಶಾಹಿ ವರ್ಗವು ಅಲ್ಪಸಂಖ್ಯಾತ ವರ್ಗವಾಗಿದ್ದರೂ ಸರ್ವಾಧಿಕಾರವನ್ನೂ ನಡೆಸುತ್ತದೆ. ಸಮಾಜವಾದೀ ಪ್ರಜಾಪ್ರಭುತ್ವದಲ್ಲಿ ಬಹುಮತದಲ್ಲಿರುವ ಕಾರ್ಮಿಕ ವರ್ಗ ಈ ಸರ್ವಾಧಿಕಾರಿ ಕೆಲಸವನ್ನು ಬಂಡವಾಳಶಾಹೀ ಮತ್ತಿತರೆ ಶೋಷಕ ವರ್ಗಗಳ ವಿರುದ್ಧ ನಡೆಸುತ್ತದೆ. ಸಮಾಜವಾದೀ ಕ್ರಾಂತಿಯ ಒಂದು ಹಿಂದುಳಿದ ಆರ್ಥಿಕತೆವುಳ್ಳ ದೇಶದಲ್ಲಿ ಯಶಸ್ವಿಯಾಗುವುದರಿಂದ ಕಾರ್ಮಿಕ ವರ್ಗವೂ ಸಂಖ್ಯೆಯಲ್ಲಿ ಅತೀ ಬಲಿಷ್ಠವಾಗಿರದ ದೇಶದಲ್ಲಿ ಯಶಸ್ವಿಯಾಗಿರುವುದರಿಂದ ಕಾರ್ಮಿಕ ವರ್ಗ ಮತ್ತು ರೈತ ವರ್ಗಗಳ ಮಧ್ಯೆ ವಿಶೇಷ ಸಖ್ಯತೆಯನ್ನೂ ಸ್ಥಾಪಿಸಿ ಬೆಳೆಸಿಕೊಂಡು ಬರಬೇಕಾಯಿತು. ಸಮಾಜೀಕರಣ ತೀವ್ರವಾಗಿ ಬೆಳೆಯುತ್ತಾ ರೈತಾಪಿ ಜನತೆಯ ಹಿಂದುಳಿದಿರುವಿಕೆ ಹೊಡೆದುಹಾಕಲ್ಪಟ್ಟಾಗ ನಗರ ಮತ್ತು ಗ್ರಾಮಾಂತರದ ವ್ಯತ್ಯಾಸಗಳು ಹೋಗುವುದು. ಕಾರ್ಮಿಕ ವರ್ಗವು ಸಂಖ್ಯೆಯಲ್ಲಿ ಅತಿ ಬಲಿಷ್ಠವಾದ ವರ್ಗವಾಗುವುದು. ಅದು ಹೆಚ್ಚೆಚ್ಚು ಪ್ರಜಾಸತ್ತಾತ್ಮಕವಾಗಿ ಆಳುವ ವರ್ಗದ ಕೆಲಸಗಳನ್ನೂ ನಡೆಸಿಕೊಂಡು ಬರುವುದು.

ಒಂದು ಸಮಾಜವಾದೀ ರಾಷ್ಟ್ರದ ಜನತೆ ಲೆನಿನ್‌ರವರ ಪ್ರಕಾರ ತಮ್ಮ ಸ್ವಯಂ ಆಡಳಿತೆಯನ್ನೂ ಬಲಪಡಿಸಬೇಕಾಗಿದೆ. ಈ ಸ್ವಯಂ ಆಡಳಿತ ಅಂಗಗಳೇ ಸೋವಿಯತ್‌ಗಳು. ನೌಕರಶಾಹೀ ಪದ್ಧತಿಯ ವಿರುದ್ಧ ಸತತವಾಗಿ ಎಚ್ಚರಿಕೆ ವಹಿಸಬೇಕಾಗಿದೆ.

ಸಾಮ್ರಾಜ್ಯಶಾಹೀ ಸಿದ್ಧಾಂತದ ಅನ್ವಯವು ಲೆನಿನ್‌ರ ನಂತರವೂ ಬೆಳೆಯುತ್ತಾ ಬಂತು. ಜಗತ್ತನ್ನೂ ತಮ್ಮ ಅಧೀನವಾಗಿಟ್ಟುಕೊಂಡಿದ್ದಾ ಸಾಮ್ರಾಜ್ಯಶಾಹಿ ಶಕ್ತಿಗಳ ಬಲಹೀನತೆ ವಸಾಹತುಶಾಹೀ ನಿರ್ಮೂಲನದ ಪ್ರಕ್ರಿಯೆಗೆ ಎಡೆ ಮಾಡಿತು. ೧೯೪೭ ರಲ್ಲಿ ಭಾರತವು ಸಿದ್ಧಾಂತವಾಯಿತು. ಅದೇ ರೀತಿಯಲ್ಲಿ ಹಲವು ರಾಷ್ಟ್ರಗಳೂ ಸಹ ಸ್ವತಂತ್ರಗೊಂಡವು. ಆದರೆ ಈ ವಸಾಹತುಶಾಹಿಯ ನಿರ್ಮೂಲನದಿಂದ ಸಾಮ್ರಾಜ್ಯ ಶಾಹಿತ್ವವು ಕೊನೆಗೊಳ್ಳಲಿಲ್ಲ. ಬದಲಾಗಿ ಅದರ ಕಪಿಮುಷ್ಟಿಯು ಬೇರೆ ರೀತಿಯಲ್ಲಿ ಬೆಳೆದು ಬಂತು: ಪ್ರಥಮ ಜಾಗತಿಕ ಯುದ್ಧದ ನಂತರ ಅಮೇರಿಕನ್ ಸಾಮ್ರಾಜ್ಯಶಾಹಿಯ ಬಲಗೊಂಡಿರುವುದನ್ನು ಲೆನಿನ್‌ರವರೇ ಕಂಡು ಕೊಂಡಿದ್ದರು. ಎರಡನೇ


> ಬೋಲ್ಶೇವಿಕ್ ಆದರ್ಶದ ಹಿಂದೆ, ಅದರ ಉದ್ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆ ಎರೆದಿರುವ, ಅಸಂಖ್ಯಾತ ಸ್ತ್ರೀ ಪುರುಷರ ಪರಮ ಪವಿತ್ರ ತ್ಯಾಗವಿದೆ ಎಂಬುದನ್ನು ಪ್ರಶ್ನಿಸುವಂತಿಲ್ಲ. ಲೆನಿನ್‌ರಂತಹ ಅಪ್ರತಿಮ ಚೈತನ್ಯಗಳ ತ್ಯಾಗಗಳಿಂದ ಪುನೀತವಾಗಿರುವ ಈ ಆದರ್ಶವು, ವಿಫಲವಾಗಲಾರದು. ಅವರು ಮಾಡಿರುವಂತಹ ತ್ಯಾಗದ ದಿವ್ಯ ದೃಷ್ಟಾಂತವು ಎಂದೆಂದಿಗೂ ದೇದೀಪ್ಯಮಾನವಾಗಿರುವುದು. ಅಲ್ಲದೇ ಕಾಲಕಳೆದಂತೆ ಈ ಆದರ್ಶಕ್ಕೆ ಜೀವ ತುಂಬಿ ಅದನ್ನು ಪರಿಶುದ್ಧಗೊಳಿಸುವುದು.
>
> – ಗಾಂಧೀಜಿ
>
> (-ಯಂಗ್ ಇಂಡಿಯಾ, ನವೆಂಬರ್ ೧೫, ೧೯೨೮.)



"ಪೌರ: ನಿನ್ನ ಕಿರೀಟ ಜಾರಿಹೋಯ್ತು!"
ಫೆಬ್ರುವರಿ ಕ್ರಾಂತಿಯ ನಂತರದ ಒಂದು ವ್ಯಂಗ್ಯ ಚಿತ್ರ

ಮಹಾಯುದ್ಧದ ನಂತರ ಇದು ಇನ್ನಷ್ಟು ಸ್ಪಷ್ಟವಾಯಿತು. ಪ್ರಸ್ತುತ ಜಗತ್ತಿನಲ್ಲಿ ನವ ವಸಾಹತುಶಾಹಿ ಕಾಲಘಟ್ಟವು ಬೆಳೆದು ಬಂದು ಬಂಡವಾಳದ ಮತ್ತು ಹಿಂದುಳಿದ ರಾಷ್ಟ್ರಗಳ ಸಾಲದ ಹೊರೆ ಹೆಚ್ಚುತ್ತಾ ಬಂದಿದೆ. ರಾಜಕೀಯವಾಗಿ ಸ್ವತಂತ್ರವಾಗಿರುವ ರಾಷ್ಟ್ರಗಳನ್ನೂ ಆರ್ಥಿಕವಾಗಿ ತಮ್ಮ ಮೇಲೆಯೇ ಅವಲಂಬಿಸಿಕೊಂಡಿರುವಂತೆ ಸಾಮ್ರಾಜ್ಯಶಾಹಿ ಮಾಡುವುದು. ಸಾಮ್ರಾಜ್ಯಶಾಹಿಗಳಿಗೆ ಸಾಧ್ಯವಿದೆಯೆಂಬುದನ್ನೂ ಲೆನಿನ್‌ರವರೇ ಕಂಡುಕೊಂಡಿದ್ದರು. ಜಗತ್ತಿನ ಅಧಿಕ ಸಂಖ್ಯೆಯಲ್ಲಿರುವ ರಾಜಕೀಯವಾಗಿ ಸ್ವತಂತ್ರವಾಗಿ ಕಾಣುವ ರಾಷ್ಟ್ರಗಳನ್ನೂ ಅಮೇರಿಕನ್ ಮತ್ತಿತರ ಸಾಮ್ರಾಜ್ಯಶಾಹಿಗಳು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ತಮ್ಮ ಹಿಡಿತದಲ್ಲಿ ಇರಿಸಿಕೊಳ್ಳುತ್ತಿವೆ. ಈ ಸಾಮ್ರಾಜ್ಯಶಾಹಿ ಮತ್ತು ಅದರ ಮಧ್ಯಪ್ರವೇಶ ಧೋರಣೆಗೆ ಪ್ರತಿಕ್ರಿಯೆಯಾಗಿ ಅಲಿಪ್ತ ರಾಷ್ಟ್ರಗಳ ಚಳುವಳಿ ಮತ್ತು ಜಾಗತಿಕ ಶಾಂತಿ ಚಳುವಳಿಗಳು ಬೆಳೆದು ಬಂದವು.

ಲೆನಿನ್ ವಾದದ ಸಮರ್ಪಕತೆಯು ಈಗಿನ ಸಾಮ್ರಾಜ್ಯಶಾಹೀಗಳ ಶೋಷಣೆ ಮತ್ತು ವೈರುಧ್ಯಗಳ ಕಾಲದಲ್ಲಿ ತೀವ್ರವಾಗಿ ಹೆಚ್ಚಿದೆ. ಪ್ರಸ್ತುತ ಜಾಗತಿಕ ಯುದ್ಧದ ಸಾಧ್ಯತೆ ಕಡಿಮೆಯಾಗಿರುವುದಾದರೂ, ಜಾಗತಿಕ ಶಕ್ತಿಗಳ ಬಲಾಬಲದಲ್ಲಿ ಹೆಚ್ಚು ಕಡಿಮೆಯಾದರೆ ಸಾಮ್ರಾಜ್ಯಶಾಹಿಗಳು ಇನ್ನಷ್ಟು ಆಕ್ರಮಣಕಾರಿಯಾಗಿ ಮುಂದೆ ಬರುವ ಸಾಧ್ಯತೆ ಇದೆ. ಆದ್ದರಿಂದ ಲೆನಿನ್ ತತ್ವವನ್ನು ಕರಗತಮಾಡಿ ಸಾಮ್ರಾಜ್ಯಶಾಹೀ ಸಿದ್ಧಾಂತವನ್ನೂ ವಸ್ತುನಿಷ್ಠ ಪರಿಸ್ಥಿತಿಗೆ ಅನ್ವಯಿಸಿ ಬೆಳೆಸುವುದು ಇನ್ನಷ್ಟು ಮುಖ್ಯವಾಗಿದೆ.



ಒಂದು ಭಾಷಣದ ರೆಕಾರ್ಡಿಂಗ್‌ನಲ್ಲಿ

ವಾಗಿತ್ತು. ಅದು ಹೊಂದಿದ್ದ ಆಯುಧಗಳು ಆಯಾ ಕಾಲಘಟ್ಟದ ತಾಂತ್ರಿಕ ಮಟ್ಟಕ್ಕೆ ಅನುಗುಣ ವಾಗಿದ್ದಿತು. ಈ ಸಾಮಾನ್ಯ ವಿದ್ಯಮಾನಗಳನ್ನು ಪರಿಶೀಲಿಸುವ ಮೂಲಕ, ವರ್ಗಗಳಿಲ್ಲದಿದ್ದಾಗ ಶೋಷಕರು, ಶೋಷಿತರು ಇಲ್ಲದಿದ್ದಾಗ ಪ್ರಭುತ್ವ ಏಕೆ ಅಸ್ತಿತ್ವದಲ್ಲಿರಲಿಲ್ಲ ಮತ್ತು ವರ್ಗಗಳು ಕಾಣಿಸಿ ಕೊಂಡ ಕೂಡಲೇ ಅದೂ ಏಕೆ ಕಾಣಿಸಿಕೊಂಡಿತು. ಎಂದು ನಮ್ಮನ್ನೇ ನಾವು ಕೇಳಿಕೊಳ್ಳುವ ಮೂಲಕ - ಈ ಮೂಲಕವಷ್ಟೇ ನಾವು ಪ್ರಭುತ್ವದ ಸಾರ ಹಾಗೂ ಮಹತ್ವ ಎಂತಹುದು ಎಂಬ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರವನ್ನು ಕಂಡುಕೊಳ್ಳುವೆವು."

ಈಗ ಬಂಡವಾಳಶಾಹಿ ಪ್ರಭುತ್ವದ ಬಗ್ಗೆ ವಿಚಾರ ಮಾಡೋಣ. ಲೆನಿನ್ ಹೇಳುತ್ತಾರೆ "ಜಾಗತಿಕ ಬಂಡವಾಳದ ವಿರುದ್ಧ ಪ್ರಾರಂಭವಾಗಿರುವ ಹೋರಾಟ ವನ್ನು ಅರ್ಥಮಾಡಿಕೊಳ್ಳಲು, ನಾವು ಒಂದು ಅಂಶವನ್ನು-ಬಂಡವಾಳಶಾಹಿ ಪ್ರಭುತ್ವವು ಪಾಳೆಯ ಗಾರಿ ಪ್ರಭುತ್ವದ ವಿರುದ್ಧ ಮುಂದುವರಿದಾಗ, ಸ್ವಾತಂತ್ರ್ಯ ಘೋಷಣೆಯನ್ನು ಹೇಳಿ ಕೊಂಡು ಹೋರಾಟವನ್ನು ಪ್ರವೇಶಿಸಿತು, ಎಂಬ ಅಂಶವನ್ನು ನೆನಪಿನಲ್ಲಿಟ್ಟಿರಬೇಕು. ಪಾಳೆಯಗಾರಿ ಪದ್ಧತಿಯ ನಿರ್ಮೂಲವೂ ಬಂಡವಾಳಶಾಹಿ ಪ್ರಭುತ್ವದ ಪ್ರತಿನಿಧಿಗಳಿಗೆ ಸ್ವಾತಂತ್ರ್ಯ ಎಂಬ ಅರ್ಥವನ್ನು ಕೊಟ್ಟಿದ್ದಿತು. ಅದು ಅವರ ಉದ್ದೇಶಕ್ಕೆ ನೆರವಾಯಿತು. ಏಕೆಂದರೆ ಭೂದಾಸ ಪದ್ಧತಿ ಮುರಿದು ಬೀಳುತ್ತಿದ್ದಿತು ಮತ್ತು ರೈತರು ಪರಿಹಾರ ಧನ ನೀಡಿ ಕೊಂಡುಕೊಂಡಿದ್ದ ಅಥವಾ ಭಾಗಶಃ ಗೇಣಿ ಮಾಡುವುದಕ್ಕೆ ಬದಲಾಗಿ ಹಣಕೊಟ್ಟು ಪಡೆದುಕೊಂಡಿದ್ದ ಭೂಮಿಯನ್ನು ಸಂಪೂರ್ಣ, ಆಸ್ತಿಯಾಗಿ ಹೊಂದುವ ಅವಕಾಶ ಪಡೆದುಕೊಂಡಿದ್ದರು. ಈ ಆಸ್ತಿ ಹೇಗೆ ಬಂತು ಎಂಬುದರ ಬಗ್ಗೆ ಪ್ರಭುತ್ವಕ್ಕೆ ಆಸಕ್ತಿ ಇರಲಿಲ್ಲ. ಆಸ್ತಿಯ ಮೂಲ ಏನೇ ಇದ್ದರೂ ಅದು ಆಸ್ತಿಯ ರಕ್ಷಣೆ ಮಾಡಿತು. ಏಕೆಂದರೆ ಆ ಪ್ರಭುತ್ವವು ಖಾಸಗಿ ಆಸ್ತಿಯ ಮೇಲೆಯೇ ಸಂಸ್ಥಾಪಿತವಾಗಿದ್ದಿತು. ಆಧುನಿಕ ನಾಗರೀಕ ಪ್ರಭುತ್ವಗಳಲ್ಲೆಲ್ಲಾ ರೈತರು ಖಾಸಗಿ ಮಾಲೀಕರಾದರು. ಭೂ ಮಾಲೀಕನು ತನ್ನ ಭೂಮಿಯ ಒಂದು ಭಾಗವನ್ನು ರೈತನಿಗೆ ಬಿಟ್ಟು ಕೊಟ್ಟಾಗಲೂ ಪ್ರಭುತ್ವವು ಖಾಸಗಿ ಆಸ್ತಿಯನ್ನು ಸಂರಕ್ಷಿಸಿತು, ಪರಿಹಾರಧನ ಒದಗಿಸುವ ಮೂಲಕ, ಭೂಮಿ ಕೊಟ್ಟುದ್ದಕ್ಕಾಗಿ ಹಣ ತೆಗೆದುಕೊಳ್ಳಲು ಅನುಮತಿ ನೀಡುವ ಮೂಲಕ, ಭೂಮಾಲೀಕನಿಗೆ ಪ್ರತಿಫಲ ನೀಡಿತು. ತಾನು ಖಾಸಗಿ ಆಸ್ತಿಯನ್ನು ಸಂಪೂರ್ಣವಾಗಿ ಸಂರಕ್ಷಿಸುವುದಾಗಿ ಘೋಷಿಸುವಂತೆ ವರ್ತಿಸಿ ಪ್ರಭುತ್ವವು ಅದಕ್ಕೆ ಎಲ್ಲ ಬೆಂಬಲ, ರಕ್ಷಣೆ ನೀಡಿತು. ಪ್ರಭುತ್ವವು ಪ್ರತಿಯೊಬ್ಬ ವರ್ತಕನ, ಕೈಗಾರಿಕೋದ್ಯಮಿಯ ಹಾಗೂ ಕಾರ್ಖಾನೆ ಒಡೆಯನ ಆಸ್ತಿ ಹಕ್ಕುಗಳಿಗೆ ಮನ್ನಣೆ ನೀಡಿತು. ಖಾಸಗಿ ಆಸ್ತಿಯ ಮೇಲೆ ಬಂಡವಾಳದ ಅಧಿಕಾರದ ಮೇಲೆ, ಆಸ್ತಿ ರಹಿತ ಕಾರ್ಮಿಕರನ್ನು ದುಡಿಯುವ ರೈತ ಸಮೂಹವನ್ನು ಬಂಡವಾಳಕ್ಕೆ ಸಂಪೂರ್ಣವಾಗಿ ಅಧೀನಗೊಳಿಸುವುದರ ಮೇಲೆ, ಆಧರಿಸಿದ್ದ ಈ ಸಮಾಜವು ತನ್ನ ಆಳ್ವಿಕೆಯು ಸ್ವಾತಂತ್ರ್ಯದ ಮೇಲೆ ಆಧರಿಸಿದ್ದಿತೆಂದು ಘೋಷಿಸಿತು. ಪಾಳೆಯಶಾಹಿಯ ವಿರುದ್ಧ ಹೋರಾಡುತ್ತಾ ಅದು ಆಸ್ತಿಯ ಸ್ವಾತಂತ್ರ್ಯವನ್ನು ಘೋಷಿಸಿತು. ತಾನು ಇನ್ನೇ ಮಾತ್ರವೂ ವರ್ಗಪ್ರಭುತ್ವವಾಗಿಲ್ಲವೆಂದು ಹೇಳಿಕೊಂ ಅದರಿಂದ ತುಂಬ ಹೆಮ್ಮೆ ಪಟ್ಟುಕೊಂಡಿತು.

"ಆದರೂ ಪ್ರಭುತ್ವವು ಬಂಡವಾಳಗಾರ ಬಡರೈತನ್ನು ಕಾರ್ಮಿಕ ವರ್ಗವನ್ನು ಅಧೀನದಲ್ಲಿ ಕೊಳ್ಳಲು ಸಹಾಯಮಾಡುವ ಯಂತ್ರವಾಗಿಯ ಇದ್ದಿತು. ಆದರೆ ಹೊರನೋಟಕ್ಕೆ ಅದು ಸ್ವತಂತ್ರವಾ ದ್ದಿತು. ಅದು ಸಾರ್ವತ್ರಿಕ ಮತದಾನದ ಹಕ್ಕ ಘೋಷಿಸಿತು. ತಾನು ವರ್ಗ ಪ್ರಭುತ್ವವಲ್ಲವೆಂ ತನ್ನ ಸಮರ್ಥಕರ ಮೂಲಕ, ತನ್ನ ಬೋಧಕ ಪಂಡಿತರ ಹಾಗೂ ದಾರ್ಶನಿಕರ ಮೂ ಘೋಷಿಸಿತು..... ಜಾಗತಿಕ ಬಂಡವಾಳದ ವಿರು ಹೋರಾಟವು ವಿಶೇಷವಾಗಿ ತೀವ್ರವಾಗಿರುವಾ ಪ್ರಭುತ್ವದ ಕುರಿತಾದ ಪ್ರಶ್ನೆಯು ಅತ್ಯಂತ ಹೆಚ್ಚ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇ ಅತ್ಯಂತ ಜ್ವಲಂತ ಪ್ರಶ್ನೆಯಾಗಿ, ಎಲ್ಲ ಪ್ರ ರಾಜಕೀಯ ಪ್ರಶ್ನೆಗಳ ಹಾಗೂ ರಾಜಕೀಯ ವಿವಾದಗಳ ಕೇಂದ್ರ ಬಿಂದುವಾಗಿದೆ, ಎಂ ಹೇಳಬಹುದು".

ಬಂಡವಾಳಶಾಹಿ ಪ್ರಭುತ್ವ, ಅದು ಹೇಳುವಂ ವರ್ಗಪ್ರಭುತ್ವ ಅಲ್ಲ ಎಂಬುದು ನಿಜವೇ?

ಲೆನಿನ್ ಹೇಳುತ್ತಾರೆ: "ಕುಟುಂಬ, ಖಾಸಗಿ ಆ ಹಾಗೂ ಪ್ರಭುತ್ವಗಳ ಉಗಮ" ಎಂಬ ಎಂಗೆಲ್ಸ ಕೃತಿಯ ನೆರವು ಪಡೆಯಬೇಕೆಂದು ನಾನಾಗಲ ನಿಮಗೆ ಸಲಹೆ ನೀಡಿದ್ದೇನೆ. ಯಾವ ಪ್ರಭುತ್ವದಲ ಭೂಮಿಯ ಹಾಗೂ ಉತ್ಪಾದನಾ ಸಾಧನಗಳ ಖಾಸ

ನೇಣುಗಂಬಕ್ಕೆ ಹೋಗುವ ಮೊದಲು
ಭಗತ್‌ಸಿಂಗ್ ಓದುತ್ತಿದ್ದ ಪುಸ್ತಕ

ಪುಸ್ತಕ ಓದುತ್ತಿದ್ದ ಕೈದಿ ನಿಧಾನವಾಗಿ ತಲೆ ಎತ್ತಿದ. ಕಿಟಕಿಯ ಜಾಲರಿಯ ಮೂಲಕ ದೃಷ್ಟಿ ಹರಿಸಿದ. "ಇನ್ನೇನು ಅವರು ಬಂದುಬಿಡುತ್ತಾರೆ" ಎಂದುಕೊಂಡ." ಈ ಪುಸ್ತಕ ಓದುಮುಗಿಸಲು ನನ್ನಿಂದ ಸಾಧ್ಯವಾಗುವಂತಿಲ್ಲ....... ಲೆನಿನ್.... ಎಂಥಹ ಮನುಷ್ಯ! ಮಹಾವ್ಯಕ್ತಿಗಳಲ್ಲಿ ಅತ್ಯಂತ ಮಹಾವ್ಯಕ್ತಿ..."

ಆತ ಪುಸ್ತಕದ ಕಡೆ ನೋಡಿದ. ರಕ್ಷಾಪತ್ರದಿಂದ ತನ್ನ ಕಡೆಗೆ ನೋಡುತ್ತಿದ್ದ ಎರಡು ದಯಾಪೂರ್ಣ ಕಣ್ಣುಗಳು, ಮಿನುಗುವ ಕಣ್ಣುಗಳು! ತನ್ನ ಹೃದಯ ವನ್ನು, ಅಂತರಾಳವನ್ನು ಮುಟ್ಟಿ ಎಚ್ಚರಿಸುವಂತೆ ಅವು ಕಾಣಿಸಿದವು. ತುಟಿಗಳು ಏನನ್ನೊ ತಿಳಿಸುವಂತೆ ಭಾಸವಾದವು.....

ಸೆರೆಮನೆಯ ದೊಡ್ಡ ಕಬ್ಬಿಣದ ಬಾಗಿಲು ತೆರೆದ ಸದ್ದಾಯಿತು. ಆಗ ಆತ ತನ್ನ ಕಲ್ಪನಾರಾಜ್ಯದಿಂದ ಎಚ್ಚೆತ್ತ.

ಬ್ರಿಟಿಷ್ ಅಧಿಕಾರಿಯೊಬ್ಬ ಒಳಬರುತ್ತಾ ಹೇಳಿದ: "ಸಿದ್ಧರಾಗಿ, ಸರ್ದಾರ್‌ಜೀ, ನಿಮ್ಮ ಮರಣದಂಡನೆಯ ಆಜ್ಞೆ ಇಲ್ಲಿದೆ.!

ಇಬ್ಬರು ಗಾರ್ಡುಗಳು ಬಾಗಿಲಿನ ಬಳಿ ಕಾವಲು ನಿಂತರು.

ಮರಣದಂಡನೆಯ ದಿವಸ ತಮ್ಮ ಸಾವಿಗೆ ಸ್ವಲ್ಪ ಹೊತ್ತಿಗೆ ಮುಂಚೆ ಭಗತ್ ಸಿಂಗ್‌ರು ಲೆನಿನ್‌ರ ಬಗೆಗೆ ಓದುತ್ತಿದ್ದರು.

ಆದರೆ ಯಾವ ಪುಸ್ತಕ? ಈ ವಿಸ್ತಾರವಾದ ಬಹುಭಾಷಾ ದೇಶದಲ್ಲಿ ಲೆನಿನ್‌ರ ಬಗೆಗೆ ಮೊದಲ ಪುಸ್ತಕ ಯಾವಾಗ ಪ್ರಕಟವಾಯಿತು?

ಭೂಗತರಾಗಿದ್ದಾಗ ಮಾರುವೇಷದಲ್ಲಿ

ಲೆನಿನ್



ಮಾಲೀಕತ್ವ ಇರುತ್ತದೋ, ಬಂಡವಾಳವು ಪ್ರಾಬಲ್ಯ ಹೊಂದಿರುತ್ತದೋ, ಆ ಪ್ರಭುತ್ವವು ಎಷ್ಟೇ ಪ್ರಜಾಸತ್ತಾತ್ಮಕವಾಗಿದ್ದರೂ ಬಂಡವಾಳಶಾಹಿ ಪ್ರಭುತ್ವವೇ ಆಗಿರುತ್ತದೆ; ಅದು ಕಾರ್ಮಿಕವರ್ಗವನ್ನು ಬಡರೈತರನ್ನು ಅಧೀನದಲ್ಲಿರಿಸಿಕೊಳ್ಳಲು ಬಂಡವಾಳಗಾರರು ಉಪಯೋಗಿಸುವ ಒಂದು ಸಾಧನವಾಗಿರುತ್ತದೆ; ಸಾರ್ವತ್ರಿಕ ಮತದಾನ, ವಿಧಾನಸಭೆ, ಸಂಸತ್ತು ಇವುಗಳೆಲ್ಲ ನಿಜವಾದ ವಸ್ತುಸ್ಥಿತಿಯನ್ನು ಬದಲಿಸದಂಥ ಒಂದು ರೀತಿಯ ವಾಗ್ದಾನ ಪತ್ರ, ಒಂದು ಹೊರ ರೂಪವಷ್ಟೆ ಆಗಿರುತ್ತದೆ- ಎಂದು ಗ್ರಂಥ ತಿಳಿಸುತ್ತದೆ. . . . ."

". . ..ಸೋವಿಯತ್ ಗಣತಂತ್ರವು ಸ್ಥಾಪಿತವಾದಾಗ ಅದು ಈ ಬಂಡವಾಳಶಾಹಿ ಸುಳ್ಳುಗಳನ್ನು ತಳ್ಳಿ ಹಾಕಿ ಬಹಿರಂಗವಾಗಿಯೇ ಹೀಗೆ ಘೋಷಿಸಿತು: ನಿಮ್ಮ ಪ್ರಭುತ್ವವು ಸ್ವತಂತ್ರವೆಂದು ನೀವು ಹೇಳುತ್ತೀರಿ. ಆದರೆ ವಾಸ್ತವವಾಗಿ, ಖಾಸಗಿ ಆಸ್ತಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ನಿಮ್ಮ ಪ್ರಭುತ್ವವು, ಅದೊಂದು ಪ್ರಜಾಸತ್ತಾತ್ಮಕ ಗಣತಂತ್ರವಾಗಿದ್ದರೂ ಸರಿಯೆ, ಕಾರ್ಮಿಕರನ್ನು ತುಳಿಯಲು ಬಂಡವಾಳಗಾರರು, ಉಪಯೋಗಿಸುವ ಯಂತ್ರವಲ್ಲದೆ ಬೇರೇನೂ ಅಲ್ಲ. ನಿಮ್ಮ ಪ್ರಭುತ್ವವು ಎಷ್ಟು ಹೆಚ್ಚು ಸ್ವತಂತ್ರವೋ, ಪ್ರಭುತ್ವದ ಈ ಲಕ್ಷಣವು ಅಷ್ಟೂ ಹೆಚ್ಚು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ........

"ಗಣತಂತ್ರವು ಯಾವುದೇ ರೂಪವನ್ನು ಧರಿಸಿದ್ದರೂ, ಅದು ಎಷ್ಟೇ ಪ್ರಜಾಸತ್ತಾತ್ಮಕವಾಗಿದ್ದರೂ, ಅದೊಂದುಬಂಡವಾಳಶಾಹಿ ಗಣತಂತ್ರವಾಗಿದ್ದರೆ, ಭೂಮಿ ಹಾಗೂ ಕಾರ್ಖಾನೆಗಳ ಖಾಸಗಿ ಮಾಲೀಕತ್ವವನ್ನು ಉಳಿಸಿ ಕೊಂಡಿದ್ದರೆ, ಖಾಸಗಿ ಬಂಡವಾಳವು ಇಡೀ ಸಮಾಜವನ್ನು ಕೂಲಿ ಗುಲಾಮಗಿರಿಯಲ್ಲಿ ಇರಿಸಿದ್ದರೆ.....ಆಗ ಈ ಪ್ರಭುತ್ವವು ಕೆಲವು ಜನರನ್ನು ಹತ್ತಿಕ್ಕಲು ಬಳಸುವ ಯಂತ್ರವಾಗಿರುತ್ತದೆ. ನಾವು ಈ ಯಂತ್ರವನ್ನು ಬಂಡವಾಳದ ಅಧಿಕಾರವನ್ನು ಉರುಳಿಸುವ ವರ್ಗದ ಕೈಯಲ್ಲಿ ಇರಿಸುವೆವು. ಸಾರ್ವತ್ರಿಕ ಸಮಾನತೆ ಎಂದು ಅರ್ಥ ನೀಡುವಂಥ ಪ್ರಭುತ್ವದ ಬಗೆಗಿನ ಎಲ್ಲ ಹಳೆಯ ಪೂರ್ವಾಗ್ರಹಗಳನ್ನೂ ನಾವು ತಿರಸ್ಕರಿಸುವೆವು. ಏಕೆಂದರೆ ಅದು ಶುದ್ಧ ಮೋಸ. ಶೋಷಣೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಸಮಾನತೆ ಇರಲು ಸಾಧ್ಯವೇ ಇಲ್ಲ. ಭೂಮಾಲೀಕನು ಕೆಲಸಗಾರನಿಗೆ ಸಮಾನನಾಗಲಾರ, ಅಥವಾ ಹಸಿದ ಮನುಷ್ಯನು ಹೊಟ್ಟೆ ತುಂಬಿದ ಮನುಷ್ಯನಿಗೆ ಸಮಾನನಾಗಲಾರ.ಪ್ರಭುತ್ವ ಎಂದರೆ ಸರ್ವಜನ ಆಳ್ವಿಕೆ ಎಂಬ ಹಳೆಯ ಕಥೆಗಳನ್ನು - ನಂಬಿಕೊಂಡು ಜನರು ಕುರುಡು ಭಯ ಭಕ್ತಿಗಳೊಂದಿಗೆ ಯಾವುದರ ಮುಂದೆ ತಲೆಬಾಗಿ ನಮಿಸುತ್ತಿದ್ದಾರೋ ಆ ಪ್ರಭುತ್ವ ಎಂದು ಕರೆಯಲಾಗುವಂತಹ ಯಂತ್ರವನ್ನು ಕಾರ್ಮಿಕವರ್ಗವು ಕೊಡೆದು ಹಾಕುವುದು. ಇದುವರೆವಿಗೂ ನಾವು ಬಂಡವಾಳಗಾರರ ಕೈಯಿಂದ ಈ ಯಂತ್ರವನ್ನು ಕಸಿದುಕೊಂಡಿದ್ದೇವೆ, ಅದನ್ನು ನಾವೇ ತೆಗೆದುಕೊಂಡಿದ್ದೇವೆ, ಎಲ್ಲ ಶೋಷಣೆಯನ್ನೂ ನಾಶಪಡಿಸಲು ನಾವು ಈ ಯಂತ್ರವನ್ನು ಅಥವಾ ಗಧೆಯನ್ನು ಉಪಯೋಗಿಸುವೆವು. ಜಗತ್ತಿನಲ್ಲಿ ಯಾವ ಎಡೆಯಲ್ಲೇ ಆಗಲಿ ಶೋಷಣೆ ಮಾಡುವ ಸಾಧ್ಯತೆ ಇಲ್ಲವಾದಾಗ, ಭೂಮಿಯ ಮಾಲೀಕರಾಗಲಿ ಕಾರ್ಖಾನೆಗಳ ಮಾಲೀಕರಾಗಲಿ ಇನ್ನೆಷ್ಟು ಮಾತ್ರವೂ ಇರದಾದಾಗ ಕೆಲವರು ಕಂಠ ಪೂರ್ತಿ ತಿಂದು ಇತರರು ಹಸಿವಿನಿಂದ/ನರಳುತ್ತಿರುವಂಥ ಸ್ಥಿತಿ ಇನ್ನೆಷ್ಟು ಮಾತ್ರವೂ ಇರದಾದಾಗ, ಇದರ ಸಾಧ್ಯತೆ



ಇನ್ನೆಷ್ಟು ಮಾತ್ರವೂ ಇರದಾದಾಗಲಷ್ಟೆ, ಈ ಯಂತ್ರವನ್ನು ಕಳಚಿ ಮೂಲೆಗೆ ಎಸೆಯುವೆವು. ಆಗ ಪ್ರಭುತ್ವವೂ ಇರುವುದಿಲ್ಲ, ಶೋಷಣೆಯೂ ಇರುವುದಿಲ್ಲ. ಇದು ನಮ್ಮ ಕಮ್ಯುನಿಸ್ಟ್ ಪಕ್ಷದ ಅಭಿಪ್ರಾಯವಾಗಿದೆ......"

ಲೆನಿನ್ನರು ೧೯೧೯ ರ ಜುಲೈ ೧೧ ರಂದು ಪ್ರಭುತ್ವದ ಕುರಿತು ಮಾಡಿದ ಉಪನ್ಯಾಸವು ಇಂದೂ ಸಹ ಯಥಾರ್ಥವಾಗಿದೆ, ಸತ್ಯವಾಗಿದೆ ಎಂಬುದನ್ನು ನಮ್ಮ ದೈನಂದಿನ ಜೀವನದ ಅನುಭವದಿಂದ ಕಂಡುಕೊಳ್ಳಬಹುದಾಗಿದೆ.

(ವಿಸೂ: ಮೇಲಿನ ಲೇಖನದಲ್ಲಿರುವ ಒತ್ತುಗಳೆಲ್ಲವೂ ಲೇಖಕರವು.)



ಕ್ರಾಂತಿ ಮತ್ತು ಲೆನಿನ್....

ಪುಟ 12ರಿಂದ

ಪೆಟ್ರೋಗ್ರಾಡ್‌ನಿಂದ ದೂರ ಹೋಗಿದ್ದರು. ಜುಲೈ ೧೬ರಂದು ಕಾರ್ಮಿಕರು, ಸೈನಿಕರು ರೋಸಿ ಹೋಗಿ ದಂಗೆ ಎದ್ದರು. ಪ್ರದರ್ಶನದ ಮೇಲೆ ಸರ್ಕಾರಿ ಪಡೆಗಳು ಪ್ರತಿಗಾಮಿ ಸಶಸ್ತ್ರ ಕಾರ್ಯಕರ್ತರು ಆಕ್ರಮಣ ಮಾಡಿದರು. ಇಂತಹ ಸಂದಿಗ್ಧ ಪರಿಸ್ಥಿಯಲ್ಲಿ ಲೆನಿನ್ ತಮ್ಮ ವಿಶ್ರಾಂತಿ ಮೊಟಕು ಗೊಳಿಸಿ ಜುಲೈ ೧೭ರಂದು ಪೆಟ್ರೋ ಗ್ರಾಡ್‌ಗೆ ವಾಪಸಾದರು. ಬೊಲ್ಶೆವಿಕ್ ಪಕ್ಷದ ಮೇಲೆ, ಪತ್ರಿಕೆಗಳ ಮೇಲೆ ಲೆನಿನ್‌ರ ಮೇಲೆ ಸರ್ಕಾರದ ಸೈನಿಕ ಕಾರ್ಯಾಚರಣೆ ಆರಂಭ ವಾಯಿತು.

'ದ್ವಂದ್ವ ಅಧಿಕಾರ' ಕೊನೆಗೊಂಡಿತು. ಆದರೆ ಅದರಲ್ಲಿದ್ದ ಎರಡು ಅಂಗಗಳಲ್ಲಿ ಕೊನೆ ಗೊಂಡದ್ದು ಸೋವಿಯತ್ ಅಧಿಕಾರ ಬಂಡವಾಳಶಾಹಿ ಮಿಲಿಟರಿ ದಬ್ಬಾಳಿಕೆಯ ಅಧಿಕಾರ ಮಾತ್ರ ಉಳಿದಿತ್ತು.

ಭೂಗತರಾದ ಲೆನಿನ್ನರಿಂದ ಕ್ರಾಂತಿಯ ನಿರ್ದೇಶನ

'ಪ್ರಾವ್ದಾ' ಪತ್ರಿಕೆಯ ಕಛೇರಿಗಳ ಮೇಲೆ ನಡೆದ ಸಶಸ್ತ್ರ ಕಾರ್ಯಾಚರಣೆಯಿಂದ ಲೆನಿನ್ ಕೆಲವೇ ಮಿನಿಟುಗಳ ಅಂತರದಲ್ಲಿ ಬದುಕುಳಿದರು. ಈ ಪರಿಸ್ಥಿತಿ ನೋಡಿ ಲೆನಿನ್ ಕೂಡಲೇ ಭೂಗತರಾಗ ಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿತು. ಜುಲೈ ೨೦ ರಂದು ಲೆನಿನ್‌ರ ವಿರುದ್ಧ ಸರ್ಕಾರ ಬಂಧನದ ವಾರಂಟ್ ಹೊರಡಿಸಿತ್ತು. ಅದರ ನಂತರ ಹೆಚ್ಚು ಕಡಿಮೆ ಅಕ್ಟೋಬರ್ ನವರೆಗೆ ಭೂಗತರಾಗಿದ್ದ ಕೊಂಡೆ ಅದೂ ಪಟ್ಟಣದಿಂದ ಪಟ್ಟಣಕ್ಕೆ ಬದಲಾಯಿಸುತ್ತಾ, ಅತ್ಯಂತ ನಂಬಿಕಸ್ತ ಬೊಲ್ಶೆವಿಕರ ಮನೆಯಿಂದ ಮನೆಗೆ ಬದಲಾಯಿಸುತ್ತಾ ಲೆನಿನ್ ಮುಂದಿನ ಹಂತದ ಚಲುವಳಿಗೆ ಮಾರ್ಗದರ್ಶನ ನೀಡಿದರು. ಲೆನಿನ್‌ಗೂ ಕೇಂದ್ರ ಸಮಿತಿಗೂ ಆಗಾಗ್ಗೆ ಹೋಗಿ ಬರುತ್ತಿದ್ದ ಗುಪ್ತ ದೂತರು ಮತ್ತು ಪತ್ರಿಕೆಗಳು, ಬಳಿ ಇಷ್ಟೇ ಮಾಹಿತಿ ಆಧಾರದ ಮೇಲೆ ಲೆನಿನ್ ಪಕ್ಷದ ಕಾರ್ಯ ತಂತ್ರಗಳನ್ನು ರೂಪಿಸಿದರು. ಈ ಹಂತದಲ್ಲಿ ಬೂರ್ಜ್ವಾ ಆಕ್ರಮಣ ಕಾರಿಯಾಗಿರುವಾಗ ಕಾರ್ಮಿಕ ವರ್ಗ ತನ್ನ ಕ್ರಾಂತಿಕಾರಿ ಚೈತನ್ಯ ವ್ಯರ್ಥ ಮಾಡದೆಹಾಳೆ ಯಿಂದಿರಬೇಕು. ಸೋವಿಯತ್‌ಗಳ 'ಮೆನ್ಶೆವಿಕ್ ಧೋರಣೆಯಿಂದ ಅವು ಬಲಹೀನ ವಾಗಿದೆ. ಈಗ ಸೋವಿಯತ್‌ಗಳಲ್ಲಿ ತಾತ್ಕಾಲಿಕ ಸರ್ಕಾರದ ಬಲ ಎದುರಿಸುವ ಶಕ್ತಿ ಉಳಿದಿಲ್ಲ. ಆದ್ದರಿಂದ ಶಾಂತಿಯುತ ಬದಲಾವಣೆಯ ಸಾಧ್ಯತೆ ಗಳು ಮುಗಿದಿವೆ ಎಂದು ಲೆನಿನ್ ನಿರ್ಧಾರಕ್ಕೆ ಬಂದರು. ಪ್ರತಿಕ್ರಾಂತಿಕಾರಿಗಳು ತಾತ್ಕಾಲಿಕ ಮೇಲುಗೈ ಸಾಧಿಸಿದ್ದು ಪಕ್ಷ ಈಗ, ಕಾನೂನು ಬದ್ಧ ಮತ್ತು ಕಾನೂನುಬಾಹಿರ ಎರಡೂ ಕ್ರಮಗಳನ್ನು ಪ್ರತಿಕ್ರಾಂತಿಕಾರಿಗಳ ವಿರುದ್ಧ ಬಳಸಬೇಕೆಂದು, ಎಲ್ಲಾ ಅಧಿಕಾರಗಳನ್ನು ಸೋವಿಯತ್‌ಗಳಿಗೆ ಕೊಡಿ ಎಂಬ ಘೋಷಣೆ ಹಿಂತೆಗೆದುಕೊಳ್ಳಬೇಕೆಂದು ಕರೆ ನೀಡಿದರು. ಈಗ ಸಶಸ್ತ್ರ ಕಾರ್ಯಾಚರಣೆಗೆ ತಯಾರಿ ನಡೆಸುವುದು ಪಕ್ಷದ, ಕಾರ್ಮಿಕ ವರ್ಗದ ಕರ್ತವ್ಯ ಎಂದರು. ಇದೇ ಅವಧಿಯಲ್ಲಿ ಅವರ ಪ್ರಖ್ಯಾತ ಪುಸ್ತಕ "ಪ್ರಭುತ್ವ ಮತ್ತು ಕ್ರಾಂತಿ" ಬರೆಯಲು ಆರಂಭಿಸಿದ್ದು. ಅದು ಮುಗಿಸುವ ಹೊತ್ತಿಗೆ ಅಕ್ಟೋಬರ್ ಕ್ರಾಂತಿ ಆಗಿತ್ತು!

ಆಗಸ್ಟ್ ೮ ರಿಂದ ಆರನೇ ಬೊಲ್ಶೆವಿಕ್ ಪಕ್ಷದ ಕಾಂಗ್ರೆಸ್ ಆರಂಭವಾಯಿತು. ಲೆನಿನ್ ಇದರಲ್ಲಿ ಭಾಗವಹಿಸಲಿಲ್ಲ. ಈ ಕಾಂಗ್ರೆಸ್ ತಾತ್ಕಾಲಿಕ ಸರ್ಕಾರದ ಭಾರಿ ದಮನಕಾರಿ ಕ್ರಮಗಳ ನಡುವೆಯೂ ನಡೆಯಿತು. ಕಾಂಗ್ರೆಸ್‌ನ ಜಾಗವನ್ನು ಹಲವು ಬಾರಿ



ಅಕ್ಟೋಬರ್ ಕ್ರಾಂತಿ

ಬದಲಾಯಿಸ ಬೇಕಾಯ್ತು. ಕಾಂಗ್ರೆಸ್‌ನ್ನು ಹಲವು ಸಣ್ಣ ಅಧಿವೇಶನಗಳಾಗಿ ವಿಂಗಡಿಸಬೇಕಾಯಿತು. ಲೆನಿನ್ ಇದರಲ್ಲಿ ನೇರವಾಗಿ ಭಾಗವಹಿಸದಿದ್ದರೂ ದೈನಂದಿನ ದೂತನ ಸಂಪರ್ಕದಿಂದ ಸಮ್ಮೇಳನದಲ್ಲಿ ಲೆನಿನ್‌ರ ಪಾತ್ರ ಎದ್ದು ಕಾಣುವಂತಿರುತ್ತಿತ್ತು. ಪುನಃ ರೈತ ವರ್ಗದ ಜತೆ ಸಖ್ಯದಿಂದ ಸಶಸ್ತ್ರ ಕ್ರಾಂತಿಯ ಮೂಲಕವೇ ಕ್ರಾಂತಿಯ ಮುನ್ನಡೆ ಸಾಧ್ಯ ಎಂಬ ಲೆನಿನ್‌ರ ಸೂಚನೆಗೆ ಬುಖಾರಿನ್ ಮತ್ತು ಟ್ರಾಟ್‌ಸ್ಕಿಯಿಂದ ತೀವ್ರ ವಿರೋಧ ಕಂಡು ಬಂತು. ರೈತವರ್ಗ ಕ್ರಾಂತಿ ಕಾರಿ ಮಿತ್ರರಾಗಲು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು. ಆದರೆ ಕಾಂಗ್ರೆಸ್ ಲೆನಿನ್‌ರ ನಿಲುವನ್ನೇ ಎತ್ತಿ ಹಿಡಿಯಿತು. ಸಶಸ್ತ್ರ ಹೋರಾಟಕ್ಕೆ ಸಿದ್ಧತೆ ನಡೆಸಲು ನಿರ್ಧರಿಸಿತು. ಸೋವಿಯತ್‌ಗಳ ಬೋಲ್ಶೆವೀಕರಣ ಆಗದೆ, ಸೋವಿಯತ್‌ಗಳಿಗೆ ಎಲ್ಲಾ ಅಧಿಕಾರದ ಘೋಷಣೆಯನ್ನು ಸದ್ಯಕ್ಕೆ ಬಿಡಲು ನಿರ್ಧರಿಸಿತು.

ಲೆನಿನ್ ರಾಝುಲೀವ್ ಎಂಬ ಪೆಟ್ರೋಗ್ರಾಡ್‌ನಿಂದ ದೂರವಿರುವ ಪಟ್ಟಣದಲ್ಲಿ ಫಿನ್‌ಲ್ಯಾಂಡಿನ ವಲಸೆ ಹೋಗುವ ಕೃಷಿ ಕಾರ್ಮಿಕರ ವೇಷದಲ್ಲಿ ಬೋಲ್ಶೆವಿಕನ ತೋಟದ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದರು. ಸರ್ಕಾರ ಲೆನಿನ್‌ರನ್ನು ಬಂಧಿಸಬೇಕೆಂದು ಪಟ್ಟು ಹಿಡಿದಿತ್ತು. ಎಲ್ಲಿಯವರೆಗೆ ಎಂದರೆ ಮಾರು ವೇಷದಿಂದ ಲೆನಿನ್ ಸುತ್ತಾಡುವುದನ್ನು ತಪ್ಪಿಸಲು ವೇಷದ ವಿಗ್ ಕೊಂಡವರ ವಿವರಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂಬ ಆಜ್ಞೆ ಆಗಿತ್ತು. ಆದ್ದರಿಂದ ಲೆನಿನರನ್ನು ಇನ್ನೂ ದೂರಕ್ಕೆ ಭದ್ರ ಭೂಗತ ನೆಲೆಗೆ ಕಳಿಸಲು ಕೇಂದ್ರ ಸಮಿತಿ ನಿರ್ಧರಿಸಿತು. ಜಾಲಿ ಪಾಸ್‌ಪೋರ್ಟ್ ಮಾಡಿ ಕೊಂಡು ಲೆನಿನ್ ರೈಲ್ವೆ ಇಂಜಿನ್ ಡ್ರೈವರ್‌ನ ಇದ್ದಿಲು ಹಾಕುವ ಸಹಾಯಕನ ಮಾರು ವೇಷದಲ್ಲಿ ಫಿನ್‌ಲ್ಯಾಂಡ್‌ನ ರಾಜಧಾನಿ ಹೆಲ್ಸಿಂಕಿ ತಲುಪಿದರು. ಅಲ್ಲಿ ಲೆನಿನ್ ಭೂಗತರಾಗಿದ್ದುದು ಹೆಲ್ಸಿಂಕಿಯ ಪೋಲೀಸ್ ಸೂಪರಿಂಟೆಂಡೆಂಟ್ ಮನೆಯಲ್ಲಿ! ಆತ ಪೆಟ್ರೋಗ್ರೇಡ್‌ನಲ್ಲಿ ಹಿಂದೆ ಕಾರ್ಮಿಕನಾಗಿದ್ದಾಗ ಬೋಲ್ಶೆವಿಕ್ ಆಗಿದ್ದ.

ಕೊರ್ನಿಲೋವ್ ಪಿತೂರಿಯ ಕರ್ಮಕಾಂಡ

ಲೆನಿನ್, ಪಕ್ಷದ ಕಾನೂನುಬದ್ಧ, ಜೊತೆಗೆ ಕಾನೂನು ಬಾಹಿರ ಪತ್ರಿಕೆಗಳಿಗೆ ಲೇಖನಗಳು, ಬೋಲ್ಶೆವಿಕ್ ಸಮಿತಿಗಳಿಗೆ ಪತ್ರಗಳು ಇತ್ಯಾದಿಗಳ ಮೂಲಕ ಕಾರ್ಮಿಕರ ಸಂಪರ್ಕ ಇರಿಸಿ ಕೊಂಡಿದ್ದರು. ಈ ಮಧ್ಯೆ ಜುಲೈ ಪ್ರತಿಕ್ರಾಂತಿ ಮೇಲುಗೈಯಿಂದ ಉತ್ತೇಜಿತರಾದ ಬಂಡವಾಳ ಶಾಹಿಗಳು ಪೂರ್ತಿ ಮಿಲಿಟರಿ ಸರ್ವಾಧಿಕಾರ ನಡೆಸಬೇಕೆಂದು ಪಿತೂರಿ ಹೂಡಿದರು. ಇದಕ್ಕಾಗಿ ಕೊರ್ನಿಲೋವ್ ಎಂಬ ದುಷ್ಟ ಜನರಲ್ ಎಂದೂ ಮಾಡಿರದ ಸಾಹಸಗಳನ್ನು ಕೊಂಡಾಡಲಾಯಿತು. ಅವನನ್ನು ಮಿಲಿಟರಿ ಸರ್ವಾಧಿಕಾರ ಮಾಡುವ ಪಿತೂರಿಯ ಭಾಗವಾಗಿ ಅಗಸ್ಟ್ ೨೫ ರಂದು ಮಾಸ್ಕೋದಲ್ಲಿ ರಾಜಕೀಯ ಪಕ್ಷಗಳ ರಾಷ್ಟ್ರೀಯ ಸಮ್ಮೇಳನವನ್ನು ಸಂಘಟಿಸಲಾಯಿತು. ಬೋಲ್ಶೆವಿಕರು ಈ ಸಮ್ಮೇಳನಕ್ಕೆ ಹೋಗಿ ನಿರ್ಣಯ ಮಂಡಿಸಿ, ಸಭಾತ್ಯಾಗ ನಡೆಸುವುದು ಎಂದು ನಿರ್ಧರಿಸಿದ್ದರು. ಈ ಸಮ್ಮೇಳನಕ್ಕೆ ಬೋಲ್ಶೆವಿಕ್‌ರಿಗೆ ಪ್ರಾತಿನಿಧ್ಯವೇ ಕೊಡಲಿಲ್ಲ. ಆದರೆ ಸಮ್ಮೇಳನವನ್ನು ಸಶಸ್ತ್ರ ಸೈನ್ಯ ಪಡೆಗಳ ರಕ್ಷಣೆಯಲ್ಲಿ ನಡೆಸಬೇಕಾಯಿತು. ಈ ಸಮ್ಮೇಳನದ ವಿರುದ್ಧ ಎಲ್ಲೆಡೆ ಪ್ರತಿಭಟನಾ

ಮರೆಗುಳಿ ನಿಕೋಲಸ್

ಮೈಕೋವ್‌ಸ್ಕಿ ಯವರ ಒಂದು ಕವನ ವ್ಯಂಗ್ಯ ಚಿತ್ರ

ನಾನವರನ್ನೆಲ್ಲಾ ತಿರುಚುತ್ತೇನೆ
ನಾನಾವರನ್ನೆಲ್ಲಾ ಬಗ್ಗಿಸುತ್ತೇನೆ
ಯೋಚಿಸಿದ ಝಾರ್
ಕೊಟ್ಟನು ಶಸ್ತ್ರಾಸ್ತ್ರ
ಆದರೆ ಮರೆತೇಬಿಟ್ಟ
ಸೈನಿಕ
[illegible]ನಲ್ಲಿ ರೈತ ಎಂದು



ಮುಷ್ಕರಗಳು ನಡೆದವು. ಸೋವಿಯತ್‌ಗಳನ್ನು ಬರಖಾಸ್ತು ಮಾಡಬೇಕು. ಕೈಗಾರಿಕಾ ಮತ್ತು ಸಾರಿಗೆಯನ್ನು ಮಿಲಿಟರಿಗೆ ವಹಿಸಿಕೊಡಬೇಕು. ಲೆನಿನ್‌ರನ್ನು ತತ್‌ಕ್ಷಣ ಸೆರೆ ಹಿಡಿಯಬೇಕು ಎಂದು ಜನರಲ್ ಕೊರ್ನಿಲೋವ್‌ನ ಒತ್ತಾಯವಾಗಿತ್ತು. ಇದು ಯಾವುದೂ ನಡೆಯದ್ದರಿಂದ ದುಷ್ಟ ಕೊರ್ನಿಲೋವ್ ಪೆಟ್ರೋಗ್ರಾಡ್‌ನಲ್ಲಿ ಕಾರ್ಮಿಕ, ಬೊಲ್ಶೆವಿಕ್ ಬಲ ಮುರಿಯಲು ಜರ್ಮನ್ ಸೈನ್ಯವು ಅಲ್ಲಿಯವರೆಗೆ ನುಗ್ಗಿ ಬರುವಂತೆ ರಿಗಾ ಎಂಬಲ್ಲಿ ರಷ್ಯನ್ ಸೇನೆ ಬೇಕಂತಲೆ ಸೋಲುವಂತೆ ಮಾಡಿದ. ಕಾರ್ಮಿಕರನ್ನು ಪ್ರಚೋದಿಸಿ ದಂಗೆ ಏಳುವಂತೆ ಮಾಡಿ ದಮನಕಾರಿ ಛತ್ರ ಕೈಗೊಳ್ಳಬೇಕೆಂಬ ಕೆರೆನ್‌ಸ್ಕಿ ಮತ್ತು ಜನರಲ್ ಕೊರ್ನಿಲೋವ್‌ನ ಪಿತೂರಿ ಯಾಗಿತ್ತು. ಆದರೆ ಸೆಪ್ಟೆಂಬರ್ ೭ ರ ಹೊತ್ತಿಗೆ ಅವರೀರ್ವರ ನಡುವೆ ಭಿನ್ನಾಭಿಪ್ರಾಯ ಬಂದು ಜನರಲ್ ಕೊರ್ನಿಲೋವ್‌ನನ್ನು ಅವನ ಸ್ಥಾನದಿಂದ ತೆಗೆಯಲಾಯಿತು.

ಆದರೆ ಜನರಲ್ ಕೊರ್ನಿಲೋವ್ ಸೈನ್ಯ ತೆಗೆದುಕೊಂಡು ಪೆಟ್ರೋಗ್ರಾಡ್ ಕಡೆಗೆ ದಂಡ ಯಾತ್ರೆಹೊರಡುತ್ತಾನೆ. ತಾತ್ಕಾಲಿಕ ಸರ್ಕಾರ ಯಾವುದೇ ಅಧಿಕಾರ ಚಲಾಯಿಸಲು ಆಗದೆ ತತ್ತರಿಸುತ್ತದೆ. ಸೆಪ್ಟೆಂಬರ್ ೯ರಂದು ಬೊಲ್ಶೆವಿಕ್ ಪಕ್ಷ ಸೈನಿಕರಿಗೆ, ಕಾರ್ಮಿಕರಿಗೆ ಆತನ ದಂಡಯಾತ್ರೆಗೆ ಪ್ರತಿರೋಧ ಒಡ್ಡಲು ಕರೆ ಕೊಡುತ್ತದೆ. ರೈಲ್ವೆ ಕಾರ್ಮಿಕರು, ಸೈನಿಕರು, ನೌಕಾ ಸೈನಿಕರು, ಕಾರ್ಮಿಕ ಸ್ವಯಂ ಸೇವಕರ ತುಕಡಿಗಳು ಪೆಟ್ರೋಗ್ರಾಡ್‌ನ ಹತ್ತಿರವೂ ಜನರಲ್ ಕೊರ್ನಿಲೋವ್ ಸೈನ್ಯ ಸುಳಿಯದಂತೆ ತಡೆಯುವ ಬೊಲ್ಶೆವಿಕ್ ಕರೆಗೆ ಓಗೊಡುತ್ತದೆ. ದೇಶದ ಗಂಡಾಂತರದ ವಿರುದ್ಧ ಬೊಲ್ಶೆವಿಕರ ಸಾಮರ್ಥ್ಯ ಪ್ರದರ್ಶನ ಸೋವಿಯತ್‌ಗಳಲ್ಲಿ ಬೊಲ್ಶೆವಿಕ್ ವಿಚಾರಗಳು ಬಹುಮತಕ್ಕೆ ಬರಲು ಸಹಾಯ ಮಾಡುತ್ತದೆ. ಬೊಲ್ಶೆವಿಕರು ಪೆಟ್ರೋಗ್ರಾಡ್ ಸೋವಿಯತ್‌ನಲ್ಲಿ ಬಹುಮತ ಪಡೆಯುತ್ತಾರೆ. ಲೆನಿನ್ ಈ ಬಗ್ಗೆ "ಕೊರ್ನಿಲೋವ್ ಕರ್ಮಕಾಂಡ ಸೋವಿಯತ್‌ಗಳಲ್ಲಿದ್ದ ಜೊಳ್ಳು ಗಾಳಿಯಲ್ಲಿ ತೂರಿ ಹೋಗುವಂತೆ ಮಾಡಿತು" ಎಂದಿದ್ದಾರೆ. ಪ್ರತಿಕ್ರಾಂತಿಕಾರಿ ಶಕ್ತಿಗಳು ಬಂಡವಾಳಶಾಹಿ ಭೂಮಾಲೀಕರುಗಳು ರಷ್ಯಾದ ಮೇಲೆ ಮಿಲಿಟರಿ ಸರ್ವಾಧಿಕಾರವನ್ನು ಹೇರುವ ಹೇಯ ಕೆಲಸ ನಡೆಸುತ್ತಿದ್ದಾಗಲೂ ಲೆನಿನ್ ಶಾಂತಿಯುತವಾಗಿ ಸಮಾಜ ಕ್ರಾಂತಿಯನ್ನು ತರುವ ಸಾಧ್ಯತೆಯ ಬಗ್ಗೆ ವಿಚಾರ ಮಾಡುತ್ತಾರೆ. ಲೆನಿನ್‌ರವರ ಅಧ್ಭುತ ವಾದ ಸಲಹೆಯ ಮೇರೆಗೆ ಬೊಲ್ಶೆವಿಕ್ ಪಕ್ಷ ಮೆನ್ಷೆವಿಕ್ ಮತ್ತು ಸಾಮಾಜಿಕ ಕ್ರಾಂತಿಕಾರಿಗಳಿಗೆ, ಬಂಡವಾಳ ಶಾಹಿ ಪ್ರತಿನಿಧಿಗಳನ್ನು ಕಿತ್ತು ಹಾಕಿ ಸಮಿಶ್ರ ಸರ್ಕಾರ ರಚಿಸುವ ಸೂಚನೆ ಮಂಡಿಸುತ್ತದೆ. ಇದು ಲೆನಿನ್ ಹೇಳುವಂತೆ "ಶಾಂತಿಯುತ ಸಮಾಜವಾದಿ ಕ್ರಾಂತಿಗೆ ಕೊನೆಯ ಅವಕಾಶ". ಆದರೆ ಈ ಅವಕಾಶ ಮೆನ್ಷೆವಿಕರು ಮತ್ತು ಸಾಮಾಜಿಕ ಕ್ರಾಂತಿಕಾರಿಗಳ ಮಂಕುತನ ಹಾಗೂ ಭಂಡತನದಿಂದ ವಿಫಲವಾಗುತ್ತದೆ.

ಸಶಸ್ತ್ರ ಹೋರಾಟಕ್ಕೆ ನಿಮಿಷವೂ ತಡಬೇಡ!

ಪ್ರತಿಗಾಮಿ ಬೂರ್ಜ್ವಾ ಕೊರ್ನಿಲೋವ್ ಪಿತೂರಿಯ ಮುಖಭಂಗದ ನಂತರ ಬಿಕ್ಕಟ್ಟಿನಲ್ಲಿರುವ ಮೆನ್ಷೆವಿಕರು ಸಾಮಾಜಿಕ ಕ್ರಾಂತಿಕಾರಿಗಳು ತೂಗುಯ್ಯಾಲೆಯಲ್ಲಿರುವ ಜನತೆಯ ಮುಂಚೂಣಿಯಿಲ್ಲಿರುವ ಕಾರ್ಮಿಕ "ಸೋವಿಯತ್‌ಗಳಲ್ಲಿ ನಮಗೆ ಬಹುಮತ ಇರುವ ಈಗಿನ ಸ್ಥಿತಿಯಲ್ಲಿ ಬೊಲ್ಶೆವಿಕರು ಸಶಸ್ತ್ರವಾಗಿ ಅಧಿಕಾರ ಕೈಗೆ ತೆಗೆದುಕೊಳ್ಳಬೇಕು ಎಂದು ಲೆನಿನ್ ಸೆಪ್ಟೆಂಬರ್ ಕೊನೆಯ ಹೊತ್ತಿಗೆ ಕೇಂದ್ರ ಸಮಿತಿಗೆ ಬರೆಯುತ್ತಾರೆ. ಬೆಳವಣಿಗೆಗಳು ಇಷ್ಟು ವೇಗವಾಗಿ ಹೋಗುತ್ತಿರುವಾಗ ಹೆಲ್ಸಿಂಕಿ ಬಹಳ ದೂರ ಎಂದು ಲೆನಿನ್ ಪೆಟ್ರೋಗ್ರಾಡ್ ಹತ್ತಿರದ ವೈಬೋರ್ಗ್‌ಗೆ ಬರುತ್ತಾರೆ. ಮುದುಕನೊಬ್ಬನ ಮಾರುವೇಷದಲ್ಲಿ.


ಸೋವಿಯತ್‌ಗಳಲ್ಲಿ ಬಹುಮತ ಕಳೆದು ಕೊಂಡ ಮೇಲೆ ಮೆನ್ಷೆವಿಕರು, ಸಾಮಾಜಿಕ ಕ್ರಾಂತಿಕಾರಿಗಳು ಹೊಸ ಉಪಾಯ ಹೂಡುತ್ತಾರೆ. ತಮ್ಮ ನಿರಂಕುಶ ಅಧಿಕಾರಕ್ಕೆ ಹೊಸ ಪ್ರಜಾಸತ್ತೆಯ ಮೆರುಗು ಕೊಡಲು ಪ್ರಜಾಪ್ರಭುತ್ವ ಸಮ್ಮೇಳನ ಅಥವಾ ಪ್ರಾಂರಭಿಕ ಪಾರ್ಲಿಮೆಂಟು ಕರೆಯಲು ಅನುವಾಗುತ್ತಾರೆ. ಬೊಲ್ಶೆವಿಕ್ ಕೇಂದ್ರ ಸಮಿತಿ ಇದರಲ್ಲಿ ಭಾಗವಹಿಸಿ. ಅದನ್ನು ಬಯಲು ಪಡಿಸಲು ನಿರ್ಧರಿಸುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಇಂತಹ ನಾಟಕಗಳಿಗೆ ಬೊಲ್ಶೆವಿಕ್ ಭಾಗವಹಿಸುವಿಕೆಯಿಂದ ಜನತೆಯಲ್ಲಿ ಭ್ರಮೆ ಹರಡುವ ಸಾಧ್ಯತೆ ಇದೆ. ಇದನ್ನು ಬಹಿಷ್ಕರಿಸಿ ಈ ನಾಟಕದ ಬಗ್ಗೆ ಕಾರ್ಮಿಕರಿಗೆ, ರೈತರಿಗೆ, ಸೈನಿಕರಿಗೆ ತಿಳಿ ಹೇಳಿ ಎನ್ನುತ್ತಾರೆ.

ಸಶಸ್ತ್ರ ಹೋರಾಟಕ್ಕೆ ತೀವ್ರ ತಯಾರಿ ನಡೆಸಬೇಕು ಎಂಬ ಲೆನಿನ್ ನಿಲುವಿಗೆ ಪುನಃ ಕಾಮನೇವ್, ಝಿನೋವೈವ್, ಟ್ರಾಟ್‌ಸ್ಕಿ ವಿರೋಧಿಸುತ್ತಾರೆ. ಲೆನಿನ್ ಇವರಿಗೆ ನಿಲುವಿನ ತುರ್ತನ್ನೂ ಅನಿವಾರ್ಯತೆಯನ್ನು ತಿಳಿ ಹೇಳಲು ಎಲ್ಲಾ ಪ್ರಯತ್ನ ನಡೆಸುತ್ತಾರೆ. ಸತತ ಸಂಪರ್ಕದ ಅಭಾವದಿಂದ ಈ ಕೆಲಸ ಇನ್ನೂ ಕಷ್ಟವಾಗುತ್ತದೆ. ತಮ್ಮ ನಿಲುವಿಗೆ ಯಾವುದೇ ಉತ್ಸಾಹ ಬರದಾಗ ಲೆನಿನ್ ಕೇಂದ್ರ ಸಮಿತಿಯಿಂದ ತಾನು ಹೊರ ಬರುತ್ತೇನೆ ಎಂದು ತಿಳಿಸುವಷ್ಟು ಚಡಪಡಿಸುತ್ತಾರೆ. ಇಂತಹ ಅದ್ಭುತ ಅವಕಾಶವನ್ನು ಬಳಸಿಕೊಂಡು ಸಶಸ್ತ್ರ ಹೋರಾಟಕ್ಕೆ ಕೇಂದ್ರ ಸಮಿತಿ ಒಪ್ಪದಿದ್ದರೆ, ಸಜ್ಜಾಗದಿದ್ದರೆ ನೇರವಾಗಿ ಕಾರ್ಮಿಕರಿಗೆ, ರೈತರಿಗೆ, ಸೈನಿಕರಿಗೆ ಇಂತಹ ಮನವಿ ಮಾಡಲು ಲೆನಿನ್ ತಯಾರಾಗುತ್ತಾರೆ. ಲೆನಿನರ ಬುದ್ಧಿ ಮತ್ತೆ, ಕಾರ್ಯತಂತ್ರಗಳ ನಿರೂಪಣೆ ಎಂದೆಂದೂ ಜನ ಸಮುದಾಯ ಸಮಸ್ತವನ್ನು ಕಣ್ಣೆದುರು ಇರಿಸಿಕೊಂಡಿತ್ತು. ಜನ ಸಮುದಾಯದ ಎಲ್ಲ ಅಂಗಗಳ ಕ್ರಿಯಾ ಶೀಲತೆಗೆ ಅವಕಾಶ ಕೊಡುವ ಕಾರ್ಯದಲ್ಲಿ ಲೆನಿನ್‌ರಿಗೆ ಅವರ ಮೇಲಿದ್ದ ಧೃಢ ನಂಬಿಕೆಯೂ ವ್ಯಕ್ತವಾಗುತ್ತದೆ.

ಕೇಂದ್ರ ಸಮಿತಿಯಲ್ಲಿ ವಿರೋಧ ಮುಂದುವರಿಯುತ್ತದೆ. ಟ್ರಾಟ್‌ಸ್ಕಿ ಅಕ್ಟೋಬರ್ ಕೊನೆಯ ಹೊತ್ತಿಗೆ ಸೇರಬೇಕಾದ ಎರಡನೇ ಸೋವಿಯತ್‌ಗಳ ಕಾಂಗ್ರೆಸ್‌ನಲ್ಲಿ ಸಶಸ್ತ್ರ ಬಂಡಾಯದ ಬಗ್ಗೆ ನಿರ್ಣಯ ತೆಗೆದುಕೊಂಡ ಮೇಲೆ ಮಾತ್ರ ಕಾರ್ಯಗತ ಮಾಡಬಹುದು ಎಂದು ಸಲಹೆ ಮಾಡುತ್ತಾರೆ. ಲೆನಿನ್ ಇದನ್ನು ಒಂದು ವರ್ಗದ ಮುಂಚೂಣಿಯಾದ ಕ್ರಾಂತಿ ಕಾರಿ ಪಕ್ಷಕ್ಕೆ ನಾಚಿಕೆಗೇಡು ಎನ್ನುತ್ತಾರೆ. ಈ ವಾದ ಇತ್ಯರ್ಥವಾಗಬೇಕಾದ ತುರ್ತಿನದಾದ್ದರಿಂದ ಲೆನಿನ್ ಅಕ್ಟೋಬರ್ ೧೬ರಂದು ಪೆಟ್ರೋಗ್ರಾಡ್‌ಗೆ ಗುಪ್ತವಾಗಿ ಹಿಂದಿರುಗಬೇಕೆಂದು ಕೇಂದ್ರ ಸಮಿತಿ, ಲೆನಿನ್ ಒತ್ತಾಯದ ಮೇರೆಗೆ ನಿರ್ಧರಿಸುತ್ತದೆ.

ಅಕ್ಟೋಬರ್ ೨೩-೨೪ರ ಕೇಂದ್ರ ಸಮಿತಿಯ ಅತಿ ಗುಪ್ತಸಭೆ ೧೦-೨ ಬಹುಮತದಿಂದ ಸಶಸ್ತ್ರ ಬಂಡಾಯಕ್ಕೆ ಕರೆ ಕೊಡಲು ನಿರ್ಧರಿಸುತ್ತದೆ. ಕೆಂಪು ಸೈನಿಕರ ಮಿಲಿಟರಿ ಶಿಕ್ಷಣಕ್ಕೆ ತೊಡಗುತ್ತದೆ. ಸಶಸ್ತ್ರ ಬಂಡಾಯಕ್ಕೆ ತಾಂತ್ರಿಕ ತಯಾರಿ ನಡೆಸಲು ಎಲ್ಲಾ ವರ್ಗಶಕ್ತಿಗಳನ್ನು ಕ್ರೋಢೀಕರಿಸಲು ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ರಚಿಸಲಾಗುತ್ತದೆ. ಇದರಲ್ಲಿ ಎಲ್ಲಾ ಸಮರಶೀಲ ಸಾಮೂಹಿಕ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಇರುತ್ತಾರೆ. ಇಂತಹ ಸಮಿತಿಯೊಂದು ಸಶಸ್ತ್ರ ಬಂಡಾಯವನ್ನು ಕಾರ್ಯಗತ ಮಾಡಿದ್ದರಿಂದ, ಮುಂದೆ ನಡೆದ ಕ್ರಾಂತಿ ಜನತಾ ಕ್ರಾಂತಿಯಾಯಿತು. ಬರಿಯ "ಬೊಲ್ಶೆವಿಕ್" ಪಿತೂರಿಯಾಗಲಿಲ್ಲ. ಕೇಂದ್ರ ಸಮಿತಿಯ ಮತ್ತು ಟ್ರೇಡ್ ಯೂನಿಯನ್ ಸಮಿತಿ ಜಂಟಿ ಸಭೆ ಸಶಸ್ತ್ರ ಬಂಡಾಯದ ನಿರ್ಧಾರವನ್ನು ಪುನಃ ಸಮರ್ಥಿಸುತ್ತದೆ. ಇದರಲ್ಲಿ ಪರಾಜಿತರಾದ ಝಿನೋವ್ಯೇವ್ ಮತ್ತು ಕಮನೇವ್ ಅತ್ಯಂತ ಹೇಯವಾದ ಕೆಲಸ ಮಾಡುತ್ತಾರೆ. ಮೆನ್ಷೆವಿಕ್ ಪತ್ರಿಕೆಗೆ ಲೇಖನ ಬರೆದು ಈ ಅತ್ಯಂತ ಗುಪ್ತ ನಿರ್ಧಾರವನ್ನು ಪ್ರಕಟ ಗೊಳಿಸುವುದಲ್ಲದೆ ಬಂಡಾಯದ ದಿನಾಂಕವನ್ನು ಸಹ ಬಯಲು ಪಡಿಸುತ್ತಾರೆ. ನವೆಂಬರ್ ೨ ರಂದು ಮೊದಲು ಆಗಬೇಕಿದ್ದು ಆ ಮೇಲೆ ನವಂಬರ್ ೭ ಕ್ಕೆ ಮುಂದೂಡಲ್ಪಟ್ಟ ಎರಡನೇ ಸೋವಿಯತ್ ಕಾಂಗ್ರೆಸ್ ಅಧಿವೇಶನ ಸೇರುವ ಮೊದಲು ಎಂದು ಈ ಪತ್ರಿಕಾ ಲೇಖನದಲ್ಲಿ ಹೇಳಲಾಗುತ್ತದೆ. ಇದು ಬಹಿರಂಗವಾದುದರಿಂದ ರಷ್ಯದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ಆದ್ದರಿಂದ ಇನ್ನೂ ಹೆಚ್ಚಿನ ನಿಖರವಾದ, ವಿವರವಾದ ತಯಾರಿ ನಡೆಸಬೇಕು ಎಂಬ ವಾದದ ಮೇಲೆ ದಂಗೆಯ ತಾರೀಕು ಮುಂದೆ ಹಾಕಬೇಕೆಂಬ ಸಲಹೆಯನ್ನು ಲೆನಿನ್ ತಳ್ಳಿ ಹಾಕುತ್ತಾರೆ. ಬಹಿರಂಗವಾಗಿರುವುದರಿಂದ ಇನ್ನೂ ಬೇಗ ಆಗಬೇಕು. ಶತಾಯ ಗತಾಯ ಸೋವಿಯತ್‌ಗಳ ಕಾಂಗ್ರೆಸ್ ಸೇರುವ ಮೊದಲು ಆಗಬೇಕು ಎಂದು ಲೆನಿನ್ ಪಟ್ಟುಹಿಡಿಯುತ್ತಾರೆ. ಕಾರ್ಮಿಕವರ್ಗ ಮೊದಲು ಅಧಿಕಾರ ಕಿತ್ತುಕೊಳ್ಳಬೇಕು. ಆ ಮೇಲೆ ಕಾರ್ಮಿಕ ಪ್ರತಿನಿಧಿಗಳ

ಪುಟ 47 ನೋಡಿ



ಕಮ್ಯುನಿಸ್ಟ್ ಅಂತರಾಷ್ಟ್ರೀಯ, ಮೇ ೧, ೧೯೧೯

ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ವಿಶ್ವ ಕ್ರಾಂತಿ ಶಕ್ತಿಗಳೊಂದಿಗೆ ಬೆಸೆದ ಲೆನಿನ್‌ವಾದ

ರಷ್ಯಾದಲ್ಲಿ ಫೆಬ್ರುವರಿ ಕ್ರಾಂತಿಯಾದ ಕೂಡಲೇ ಲೆನಿನ್ ತಯಾರಿಸಿದ ಮೊದಲ ದಸ್ತಾವೇಜಿನಲ್ಲಿ (ಎಪ್ರಿಲ್ ಥೀಸಸ್) ನಲ್ಲಿ ಅವರು ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಮಾಜವಾದಿ ಕ್ರಾಂತಿಯಾಗಿ ಬೆಳೆಸುವ ತನ್ನಧ್ಯೆ ದ್ವಿತೀಯ ಅಂತರ್ರಾಷ್ಟ್ರೀಯದ ಸಂದರ್ಭಸಾಧಕತನದ ವಿರುದ್ಧ ಹೋರಾಟವನ್ನು ನಿರ್ಣಾಯಕ ಘಟ್ಟದ ವರೆಗೆ ಮುಂದುವರೆಸಬೇಕೆಂಬ ಕಣ್ಣೋಟವನ್ನು ರಷ್ಯನ್ ಸಂಗಾತಿಗಳಿಗೆ ನೀಡಿದರು.

"ಯಾರಿಗೆ ಬಹಳ ವರದಾನ ದೊರೆತಿದೆಯೋ ಅವನಿಂದ ಬಹಳವಾಗಿ ನಿರೀಕ್ಷಿಸಬೇಕು. ಈಗ ರಷ್ಯಾದಷ್ಟು ವಿಶ್ವದಲ್ಲಿ ಬೇರಾವ ದೇಶವೂ ಮುಕ್ತವಾಗಿಲ್ಲ. ಈ ಸ್ವಾತಂತ್ರ್ಯದ ಪ್ರಯೋಜನ ಪಡೆಯೋಣ - ಬೂರ್ಜ್ವಾವರ್ಗಕ್ಕೆ ಬೆಂಬಲದ ಅಥವಾ ಬೂರ್ಜ್ವಾ ರಕ್ಷಣ ಕೋರತನದ ಪ್ರತಿಪಾದನೆಗೆ ಅಲ್ಲ-ಬದಲಿಗೆ ಧೀರ, ಪ್ರಾಮಾಣಿಕ, ಅಂತರಾಷ್ಟ್ರೀಯವಾದಿ ಬೈಬ್ನೆಕ್ಟ ಮಾದರಿಯಲ್ಲಿ ಮೂರನೇ ಅಂತರಾಷ್ಟ್ರೀಯ' ವನ್ನು ಸ್ಥಾಪಿಸಲಿಕ್ಕೆ, ಸಾಮಾಜಿಕ-ಸಂಕುಚಿತವಾದಿ ಘಾತುಕರ ಮತ್ತು ಎಡಬಿಡಂಗಿ 'ಮಧ್ಯಪಂಥೀಯ' ರೊಂದಿಗೆ ಯಾವ ರಾಜಿಯನ್ನು ಮಾಡಿಕೊಳ್ಳಲೊಪ್ಪದ ಮೂರನೇ ಅಂತರ್ರಾಷ್ಟ್ರೀಯದ ಸ್ಥಾಪನೆಗೆ" ಎಂದರು ಲೆನಿನ್.

ನವಂಬರ್ ೭ ರಂದು ಸಮಾಜವಾದಿ ಕ್ರಾಂತಿಯಾಯಿತು. ಮಾರ್ಚ್ ೧೯೧೯ ರಲ್ಲಿ ಕಮ್ಯುನಿಸ್ಟ್ ಅಂತರಾಷ್ಟ್ರೀಯ ಸಂಘಟನೆ ತೃತೀಯ ಅಂತರಾಷ್ಟ್ರೀಯವೂ ಸ್ಥಾಪನೆಯಾಯಿತು.

ದ್ವಿತೀಯ ಅಂತರಾಷ್ಟ್ರೀಯಕ್ಕಿಂತ ಅತ್ಯಂತ ಭಿನ್ನವಾದ ಕೆಲವು ಲಕ್ಷಣಗಳು ತೃತೀಯ ಅಂತರಾಷ್ಟ್ರೀಯಕ್ಕಿದ್ದವು. ಅವುಗಳಲ್ಲಿ ಮುಖ್ಯವಾದುವೆಂದರೆ, ಈ ಅಂತರರಾಷ್ಟ್ರೀಯ ಸಂಘಟನೆ ಕ್ರಾಂತಿಕಾರಿ ದುಡಿಯುವ ವರ್ಗದ ಹರಹನ್ನು ಗಮನಾರ್ಹವಾಗಿ ವಿಸ್ತರಿಸಿತು. ಸಾಮ್ರಾಜ್ಯಶಾಹಿ ಆಳ್ವಿಕೆಯಲ್ಲಿದ್ದ ದೇಶಗಳಲ್ಲಿ ಮೂಡಿಬರುತ್ತಿದ್ದ ಹೊಸ ಕ್ರಾಂತಿಕಾರಿಗುಂಪುಗಳನ್ನು ದೇಸಿಯ ಗುಂಪುಗಳನ್ನು ಸೇರಿಸಿಕೊಂಡಿತು. ಈ ಮೂಲಕ ಸಾಮ್ರಾಜ್ಯಶಾಹಿವಿರೋಧಿ ಹೋರಾಟಗಾರರ ಮಹತ್ವದ ವಿಭಾಗವನ್ನು ಹತ್ತಿರ ಸೆಳೆದು ವಿಶ್ವದ ಕ್ರಾಂತಿಕಾರಿ ಶಕ್ತಿಗಳ ಬಲವನ್ನು ಅಪಾರವಾಗಿ ಹೆಚ್ಚಿಸಿತು.

ಈ ಹಿನ್ನೆಲೆಯಲ್ಲಿ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಆಂದೋಲನಕ್ಕೆ ಹೊಸ ಆಯಾಮ ನೀಡಬೇಕಾಗಿತ್ತು. ಬಹುಪಾಲು ಪಾಶ್ಚಿಮಾತ್ಯ ಜಗತ್ತಿಗೇ ಸೀಮಿತವಾಗಿದ್ದು. ಕ್ರಾಂತಿಕಾರಿ ಆಂದೋಲನದೊಂದಿಗೆ ದೇಸೀ ಪ್ರಶ್ನೆ, ವಸಾಹತು ಪ್ರಶ್ನೆಯ ಸಂಬಂಧವೇನು ಎಂಬುದನ್ನು ಪರೀಕ್ಷಿಸಬೇಕಾಗಿತ್ತು. ಲೆನಿನ್ ಈ ಸಮಸ್ಯೆಯತ್ತ ವೈಯಕ್ತಿಕ ಗಮನ ಹರಿಸಿದರು.

ವಸಾಹತು ದೇಶಗಳ ಬೂರ್ಜ್ವಾ ವರ್ಗ ಸಾಮ್ರಾಜ್ಯಶಾಹಿಯ ಪಕ್ಷ ಹಿಡಿದಿದೆಯಾದ್ದರಿಂದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಹೋರಾಟದಲ್ಲಿ ಕಾರ್ಮಿಕ ವರ್ಗ ಸ್ವತಂತ್ರ ಪಾತ್ರವಹಿಸಬೇಕೆಂಬ ಎಂ.ಎನ್. ರಾಯ್‌ರವರ ಪಂಥವಾದಿ ಕಣ್ಣೋಟವನ್ನು ವಿರೋಧಿಸುತ್ತಾ ಲೆನಿನ್ ನೀಡಿದ ವಿವರಣೆ ಹೀಗಿತ್ತು.

"ಯಾವುದೇ ರಾಷ್ಟ್ರೀಯ ಆಂದೋಲನ ಕೇವಲ ಬೂರ್ಜ್ವಾ-ಪ್ರಜಾಪ್ರಭುತ್ವ ಆಂದೋಲನವಾಗಿರಲು ಮಾತ್ರ ಸಾಧ್ಯ. ಏಕೆಂದರೆ ಹಿಂದುಳಿದ ದೇಶಗಳಲ್ಲಿ ಬಹುಪಾಲು ಜನ ಬೂರ್ಜ್ವಾ ಬಂಡವಾಳಶಾಹಿ ಸಂಬಂಧಗಳನ್ನು ಪ್ರತಿನಿಧಿಸುವ ರೈತರು. ರೈತ ಆಂದೋಲನದೊಂದಿಗೆ ನಿರ್ದಿಷ್ಟ ಸಂಬಂಧ ಸ್ಥಾಪಿಸಿಕೊಳ್ಳದೆ, ಅದಕ್ಕೆ ಪರಿಣಾಮಕಾರಿ ಬೆಂಬಲ ನೀಡದೆ ಶ್ರಮಜೀವಿಗಳ ಪಕ್ಷಗಳು ಕಮ್ಯುನಿಸ್ಟ್ ತಂತ್ರಗಳನ್ನು, ಕಮ್ಯುನಿಸ್ಟ್ ಧೋರಣೆಗಳನ್ನು ಅನುಸರಿಸಬಲ್ಲವು ಎಂಬುದೊಂದು ಬರಿಯ ಕಲ್ಪನೆ" ಎಂದ ಲೆನಿನ್ ವಸಾಹತುಶಾಹಿ ದೇಶಗಳಲ್ಲಿ ಸುಧಾರಣಾವಾದಿ ಮತ್ತು ಕ್ರಾಂತಿಕಾರಿ ಆಂದೋಲನಗಳ ನಡುವಿನ ವ್ಯತ್ಯಾಸಗಳನ್ನೆಲ್ಲಾ ನಿರ್ಲಕ್ಷಿಸಲಾಗದು ಎಂದು ಎಚ್ಚರಿಸುತ್ತಾ "ವಸಾಹತುಗಳಲ್ಲಿ ಬೂರ್ಜ್ವಾ - ವಿಮೋಚನಾ ಆಂದೋಲನಗಳು ನೈಜ ಕ್ರಾಂತಿಕಾರಿ ಹೋರಾಟಗಳಾಗಿದ್ದರೆ ಮಾತ್ರವೇ, ಆ ಹೋರಾಟಗಳ ಪ್ರತಿಪಾದಕರು ರೈತರನ್ನು ಹಾಗೂ ಶೋಷಿತ ಜನಸಮೂಹಗಳಿಗೆ ಕ್ರಾಂತಿಕಾರಿ ಚೈತನ್ಯದ ಶಿಕ್ಷಣ ನೀಡುವ ಸಂಘಟಿಸುವ ನಮ್ಮ ಕೆಲಸಕ್ಕೆ ಅಡ್ಡಿ ಬರದಿದ್ದರೆ ನಾವು ಕಮ್ಯುನಿಸ್ಟರು, ಈ ಆಂದೋಲನವನ್ನು ಬೆಂಬಲಿಸಲೇಬೇಕು, ಖಂಡಿತಾ ಬೆಂಬಲಿಸುತ್ತೇವೆ. ಈ ಶರತ್ತುಗಳು ಪೂರೈಸುವ ಸ್ಥಿತಿಯಿಲ್ಲದಿದ್ದರೆ ಇಂತಹ ದೇಶಗಳ ಕಮ್ಯುನಿಸ್ಟರು ಸುಧಾರಣಾವಾದಿ ಬೂರ್ಜ್ವಾಗಳ ವಿರುದ್ಧ ಹೋರಾಟ ನಡೆಸಬೇಕು"ಎಂದರು.

ತೃತೀಯ ಅಂತರಾಷ್ಟ್ರೀಯ ದೇಶೀ ಪ್ರಶ್ನೆಗೆ ಸಂಬಂಧಪಟ್ಟಂತೆ ಹಿಂದಿನ ಅಂತರಾಷ್ಟ್ರೀಯ ಸಂಘಟನೆಗಳಿಗಿಂತ ಹೇಗೆ ತೀರಾ ಭಿನ್ನವಾಗಿತ್ತು ಎಂಬುದನ್ನು ಸ್ಟಾಲಿನ್ ಸಂಗ್ರಹ ರೂಪದಲ್ಲಿ ಹೀಗೆ ಹೇಳಿದ್ದಾರೆ-

"ಈ ಹಿಂದೆ, ದೇಶೀ ಪ್ರಶ್ನೆ ಕೆಲವೇ 'ಸುಸಂಸ್ಕೃತ' ದೇಶೀ ಗುಂಪುಗಳಿಗೆ ಸಂಬಂಧಪಟ್ಟ ಪ್ರಶ್ನೆಯಾಗಿತ್ತು. ಐರಿಷ್, ಹಂಗೇರಿಯನ್, ಪೋಲಿಷ್ ಜನ, ಫಿನ್‌ಲ್ಯಾಂಡಿನವರು ಇತ್ಯಾದಿ ಯುರೋಪಿನ ದೇಶಿ ಗುಂಪುಗಳಷ್ಟೆ ದ್ವಿತೀಯ ಅಂತರಾಷ್ಟ್ರೀಯದ ಹೀರೋಗಳ ಪಟ್ಟಿಯಲ್ಲಿದ್ದ ಹಕ್ಕುಕಳಕೊಂಡ ದೇಶಗಳಾಗಿದ್ದವು. ಅತ್ಯಂತ ಒರಟು ಹಾಗೂ ಭಯಾನಕ ಸ್ವರೂಪದ ರಾಷ್ಟ್ರೀಯ ದಮನಕ್ಕೊಳಗಾದ ಅಸಂಖ್ಯ ಕೋಟಿಗಟ್ಟಲೆ ಏಷ್ಯಾಟಿಕ್, ಆಫ್ರಿಕನ್ ಜನಗಳು ಅವರ ಕಣ್ಣಳವಿನಲ್ಲೇ ಇರಲಿಲ್ಲ.

ದೇಶೀ ಪ್ರಶ್ನೆಗೆ ಸಂಬಂಧಪಟ್ಟಂತೆ ಇಂತಹ ಇಬ್ಬಂದಿತನ, ಅರೆ ಕ್ರಮಗಳು ಈಗ ಹಳೆಯ ಸಂಗತಿ. ಲೆನಿನ್‌ವಾದ ಈ ಅಘಾತಕಾರಿ ಅಸಂಬದ್ಧತೆಯನ್ನು ಬಯಲುಗೊಳಿಸಿತು. ಬಿಳಿಯರು ಮತ್ತು ಕರಿಯರು, ಯುರೋಪಿಯನ್ನರು ಮತ್ತು ಏಷ್ಯನ್ನರು ಸಾಮ್ರಾಜ್ಯಶಾಹಿಯ 'ಸುಸಂಸ್ಕೃತ' ಮತ್ತು 'ಅಸುಸಂಸ್ಕೃತ' ಗುಲಾಮರ ನಡುವಿನ ಗೋಡೆಯನ್ನು ಉರುಳಿಸಿಬಿಟ್ಟಿತು. ಹೀಗೆ ದೇಶೀಯತೆಯ ಪ್ರಶ್ನೆಯನ್ನು ವಸಾಹತುಗಳ ಪ್ರಶ್ನೆಯೊಂದಿಗೆ ಬೆಸೆಯಿತು"



ಒಂದು ಶತಮಾನದ ಹಿಂದೆ ಶ್ರಮಜೀವಿವರ್ಗದ ಅಂತರ್ರಾಷ್ಟ್ರೀಯ ಸೌಹಾರ್ದ ಪ್ರದರ್ಶನದ ಪರಂಪರೆ ಸೃಷ್ಟಿಸಿದ

ಮೊದಲ ಮೇ ದಿನಾಚರಣೆ

'ನಾವು ಈ ಸಾಲುಗಳನ್ನು ಬರೆಯುತ್ತಿರುವಂತೆ ಯುರೋಪಿನ ಮತ್ತು ಅಮೇರಿಕಾದ ಶ್ರಮಜೀವಿ ವರ್ಗ ಮೊಟ್ಟಮೊದಲಬಾರಿಗೆ ಒಂದು ಸೇನೆಯಾಗಿ, ಒಂದು ಬಾವುಟದಡಿ, ಒಂದು ತಕ್ಷಣದ ಉದ್ದೇಶಕ್ಕಾಗಿ, ೧೮೬೬ರ ಅಂತರ್ರಾಷ್ಟ್ರೀಯದ ಜಿನೇವಾ ಮಹಾಧಿವೇಶನ ಸಾರಿದಂತೆ, ಮತ್ತೆ ೧೮೮೯ರ ಪ್ಯಾರಿಸ್‌ಕಾರ್ಮಿಕರ ಮಹಾಧಿವೇಶನ ಸಾರಿದಂತೆ ಎಂಟು ಗಂಟೆಗಳ ದುಡಿಮೆಯ ದಿನವನ್ನು ಶಾಸನಾತ್ಮಕವಾಗಿ ನಿಗದಿಪಡಿಸಬೇಕೆಂಬ ಉದ್ದೇಶದಿಂದ ಅಣಿನೆರೆದು ತನ್ನ ಹೋರಾಟಶೀಲ ಶಕ್ತಿಗಳ ಪರಾಮರ್ಶೆ ನಡೆಸುತ್ತಿದೆ. ಇಂದಿನ ದೃಶ್ಯ ಎಲ್ಲಾ ದೇಶಗಳ ದುಡಿಯುವ ಜನ ನಿಜವಾಗಿಯೂ ಒಗ್ಗಟ್ಟಾಗಿದ್ದಾರೆ ಎಂಬ ಸಂಗತಿಯತ್ತ ಎಲ್ಲಾ ದೇಶಗಳ ಬಂಡವಾಳಶಾಹಿಗಳ, ಭೂಮಾಲೀಕರ ಕಣ್ಣು ತೆರೆಸಲಿದೆ."

ಮೇ ೧, ೧೮೯೦ ರಂದು ಲಂಡನ್ನಿನಲ್ಲಿ ಫ್ರೆಡರಿಕ್ ಎಂಗೆಲ್ಸ್ 'ಕಮ್ಯುನಿಸ್ಟ್ ಪ್ರಣಾಳಿಕೆ'ಯ ೧೮೯೦ರ ಜರ್ಮನ್ ಆವೃತ್ತಿಗೆ ಈ ಮುನ್ನುಡಿ ಬರೆಯುತ್ತಿದ್ದಾಗ ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ್‌ನ ಹಲವಾರು ನಗರಗಳಲ್ಲಿ ಮೇ ೧, ೧೮೮೬ರ ಚಿಕಾಗೋ ಕಾರ್ಮಿಕರ ಧೀರ ಕಾರ್ಯಾಚರಣೆಯ ಸ್ಮರಣಾರ್ಥ ಹಲವಾರು ಕಾರ್ಖಾನೆಗಳಲ್ಲಿ ದೀರ್ಘ ಮುಷ್ಕರ ನಡೆಯುತ್ತಿತ್ತು. ವಿಯೆನ್ನಾದಲ್ಲಿ ಒಂದು ಲಕ್ಷ ಕಾರ್ಮಿಕರು, ಬುಡಾಪೆಸ್ಟ್‌ನಲ್ಲಿ ೬೦ ಸಾವಿರ, ಮಾರ್ಸೆಲ್ಸ್ ಮತ್ತು ಲ್ಯೋನ್ಸ್‌ನಲ್ಲಿ ೪೦ರಿಂದ ೫೦ ಸಾವಿರ, ಪ್ರಾಗ್‌ನಲ್ಲಿ ೩೫ ಸಾವಿರ, ರೂಬಾ, ಅಲ, ಸ್ಟಾಕ್‌ಹೋಂ, ಚಿಕಾಗೋ ಮತ್ತಿತರ ನಗರಗಳಲ್ಲಿ ೨೦ರಿಂದ ೩೦ ಸಾವಿರ, ವಾರ್ಸಾದಲ್ಲಿ ೨೦ ಸಾವಿರ, ಲ್ಯೋವ್‌ನಲ್ಲಿ ೩,೦೦೦ ಹೀಗೇ ಸಾವಿರ, ದಶಸಾವಿರ ಕಾರ್ಮಿಕರು ಅಭೂತಪೂರ್ವ ರ್‍ಯಾಲಿಗಳನ್ನು ನಡೆಸುತ್ತಿದ್ದರು. ಎಂಗೆಲ್ಸ್ ಬರೆಯುತ್ತಿದ್ದ ಲಂಡನ್‌ನಲ್ಲಿ ಹಾಗೂ ಬ್ರಿಟನ್ನಿನ ಇತರ ನಗರಗಳಲ್ಲಿ, ಸ್ಪೇನಿನಲ್ಲಿ ಮೇ ತಿಂಗಳ ಮೊದಲ ಭಾನುವಾರದಂದು, ಮೇ ೪, ೧೮೯೦ರಂದು ಅಂತರ್ರಾಷ್ಟ್ರೀಯ ಶ್ರಮಜೀವಿ ಸೌಹಾರ್ದತೆಯ ದಿನವನ್ನು ಆಚರಿಸಲಾಯಿತು. ಬಾರ್ಸೆಲೋನಾದಲ್ಲಿ ೧ ಲಕ್ಷ ಕಾರ್ಮಿಕರು ಭಾಗವಹಿಸಿದರೆ ಲಂಡನ್ನಿನಲ್ಲಿ ಹೈಡ್ ಪಾರ್ಕಿನಲ್ಲಿ ಮೂರು ಲಕ್ಷ ಕಾರ್ಮಿಕರು ನೆರೆದರು. ಫ್ರೆಂಚ್, ಜರ್ಮನ್, ರಷ್ಯನ್ ಸಮಾಜವಾದಿಗಳ ಪ್ರತಿನಿಧಿಗಳೂ ಇದರಲ್ಲಿ ಪಾಲುಗೊಂಡಿದ್ದರು. 'ಲಂಡನ್ನಿನ ಜನರೆಲ್ಲಾ ಅಲ್ಲಿ ಸೇರಿದ್ದರೇನೋ ಎಂಬಂತೆ ಭಾಸವಾಗುತ್ತಿದೆ' ಎಂದು ಲಂಡನ್ ಪತ್ರಿಕೆಯೊಂದು ವರದಿ ಮಾಡುತ್ತಾ "ಒರಟು ಬಟ್ಟೆ ಧರಿಸಿದ್ದ ಬಂದರು ಕೆಲಸಗಾರರು ಅಲ್ಲಿದ್ದರು. ನಾಜೂಕು ಬಟ್ಟೆಗಳ ಕಂಪೋಸಿಟರ್‌ಗಳು ಅಲ್ಲಿದ್ದರು. ಎಲ್ಲರೂ ಎಂಟು ಗಂಟೆಗಳ ದುಡಿಯುವ ದಿನ ನಿಗದಿಪಡಿಸಬೇಕೆಂಬ ಘೋಷಣೆ ಕೂಗುತ್ತಿದ್ದರು" ಎಂದಿತು.

ಹೌದು ಎಂಗೆಲ್ಸ್ ಈ ಸಾಲುಗಳನ್ನು ಬರೆಯುವಾಗ, ನಲ್ವತ್ತು ವರ್ಷಗಳ ಹಿಂದೆ ಮಾರ್ಕ್ಸ್ ಮತ್ತು ತಾನು "ವಿಶ್ವದ ಕಾರ್ಮಿಕರೇ ಒಂದಾಗಿ" ಎಂಬ ಘೋಷಣೆ ಕೊಟ್ಟಾಗ ಸ್ಪಂದಿಸಿದವರು ಕೆಲವೇ ಮಂದಿ ಎಂದು ನೆನಪಿಸಿಕೊಳ್ಳುತ್ತಿದ್ದಾಗ ಈ ಮೊದಲ ಅಂತರಾಷ್ಟ್ರೀಯ ಸೌಹಾರ್ದತೆಯ ಪ್ರತೀಕ ಇಷ್ಟೊಂದು ಭವ್ಯವಾಗಿತ್ತು ಎಂಬುದು ಅವರಿಗೆ ಗೊತ್ತಿರಲಿಲ್ಲ. ಆದರೆ ಮಾರ್ಕ್ಸ್‌ರೊಂದಿಗೆ ವಿಶ್ವದ ಕಾರ್ಮಿಕ ವರ್ಗದ ಮೊದಲ ಅಂತರಾಷ್ಟ್ರೀಯ ಸಂಘಟನೆ ಕಟ್ಟಿದ, ಪ್ಯಾರಿಸ್ ಮಹಾಧಿವೇಶನದಲ್ಲಿ ಎರಡನೇ ಅಂತರಾಷ್ಟ್ರೀಯ ಸ್ಥಾಪನೆಗೆ ಮಾರ್ಗದರ್ಶನ ನೀಡಿದ ಎಂಗೆಲ್ಸ್ ವಿಜ್ಞಾನಿಯ ವಿಶ್ವಾಸದಿಂದ ಅಂತರಾಷ್ಟ್ರೀಯವಾಗಿ ಆಚರಿಸಲ್ಪಡಲಿದ್ದ ಮೊದಲ ಮೇ ದಿನದ ಯಶಸ್ಸಿನ ಬಗ್ಗೆ ಭವಿಷ್ಯವಾಣಿ ನುಡಿದಿದ್ದರು.

೧೮೮೬ ರ ಮೇ ದಿನ ಖಂಡಿತವಾಗಿಯೂ ಮಹತ್ವದ್ದು. ಯಾಕೆಂದರೆ ಆ ದಿನ ಬಹುದೇಶೀಯ ಅಮೆರಿಕನ್ ಕಾರ್ಮಿಕ ವರ್ಗ ಶ್ರಮಜೀವಿವರ್ಗದ ಸೌಹಾರ್ದತೆ ಬೆಳೆಯುತ್ತಿದ್ದ ಶಕ್ತಿಯನ್ನು ಪ್ರದರ್ಶಿಸಿತು. ೧೮೯೦ರ ಮೇ ದಿನಕ್ಕೆ ತನ್ನದೆ ಆದ ಮಹತ್ವವಿದೆ. ಏಕೆಂದರೆ ಅಂದು ಮೊತ್ತ ಮೊದಲಬಾರಿಗೆ ಮೇ ೧ ನ್ನು ಶ್ರಮಜೀವಿವರ್ಗದ ಅಂತರಾಷ್ಟ್ರೀಯ ಸೌಹಾರ್ದತೆಯ ದಿನವಾಗಿ ಆಚರಿಸಲಾಯಿತು. ಅಂತರ್ರಾಷ್ಟ್ರೀಯ ಸೌಹಾರ್ದತೆ ವ್ಯಕ್ತಗೊಂಡ ಈ ಚಾರಿತ್ರಿಕ ದಿನದ ಶತಮಾನೋತ್ಸವನ್ನು ವಿಶ್ವದ ಕಾರ್ಮಿಕ ವರ್ಗ ಈ ವರ್ಷ ಆಚರಿಸುತ್ತಿದೆ

ಮೇ ದಿನ ನಿರ್ಣಯದ ಹಿನ್ನೆಲೆ

ದುಡಿಯುವ ಜನಗಳ ಎರಡನೇ ಅಂತರಾಷ್ಟ್ರೀಯ ಸಂಘಟನೆಗೆ ದಾರಿ ಮಾಡಿಕೊಟ್ಟ ಪ್ಯಾರಿಸ್ ಮಹಾಧಿವೇಶನ ಮೇದಿನವನ್ನು ಅಂತರಾಷ್ಟ್ರಿಯವಾಗಿ ಆಚರಿಸಲು ಕರೆಕೊಟ್ಟದ್ದು ಕೇವಲ ಆಕಸ್ಮಿಕವಾಗಿರಲಿಲ್ಲ. ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಸಂಬಂಧಗಳು ಬೆಳೆಯದೆ ಈ ಕರೆ ಕೊಡುವುದು ಸಾಧ್ಯವೂ ಇರಲಿಲ್ಲ.

೧೮೬೪ ರಲ್ಲಿ ಪ್ರಥಮ ಅಂತರಾಷ್ಟ್ರೀಯವೆಂದು

ಮೇದಿನ 1917ರ



ಹೆಸರಾಗಿರುವ ಅಂತರಾಷ್ಟ್ರೀಯ ದುಡಿಯುವ ಜನರ ಸಂಘದ ಸ್ಥಾಪನೆಯ ಪರಿಣಾಮವಾಗಿ ಯುರೋಪಿನ ಪ್ರತಿಯೊಂದು ದೇಶದಲ್ಲೂ ಶ್ರಮಜೀವಿ ವರ್ಗದ ಪಕ್ಷಗಳು ಮೂಡಿಬರಲಾರಂಭಿಸಿದವು. ಕಾರ್ಮಿಕ ವರ್ಗದ ಆಂದೋಲನ ಮುನ್ನಡೆ ಸಾಧಿಸಲು ಇದು ಅತ್ಯಾವಶ್ಯವಾಗಿತ್ತು. ಈ ನಡುವೆ ಶ್ರಮಜೀವಿ ವರ್ಗದ ಅಂತರಾಷ್ಟ್ರೀಯ ಸಂಬಂಧಗಳು ವಿಸ್ತಾರಗೊಳ್ಳಲಾರಂಭಿಸಿದವು. ವಿವಿಧ ದೇಶಗಳ ಕಾರ್ಮಿಕ ಆಂದೋಲನಗಳ ಮುಖಂಡರು ಪರಸ್ಪರ ಸತತ ಸಂಪರ್ಕವಿಟ್ಟುಕೊಳ್ಳಲಾರಂಭಿಸಿದರು. ಇನ್ನೊಂದು ದೇಶದ ಮುಷ್ಕರ ನಿರತ ಕಾರ್ಮಿಕರಿಗೆ ನಿಧಿಸಂಗ್ರಹಣೆ ಮಾಡುವುದು ಆಗ ಎಲ್ಲೆಡೆ ಸಾಮಾನ್ಯ ಸಂಗತಿಯಾಗಿತ್ತು. ಸಮಾಜವಾದಿ ಪತ್ರಿಕಾರಂಗ ತಮ್ಮ ದೇಶದಲ್ಲದೆ ಬೇರೆ ದೇಶಗಳ ಕಾರ್ಮಿಕರ ಚಟುವಟಿಕೆಗಳಿಗೆ ಹೆಚ್ಚೆಚ್ಚು ಅವಕಾಶ ನೀಡಲಾರಂಭಿಸಿತ್ತು. ಸೋದರ ಪಕ್ಷಗಳ ಮುಖಂಡರ ಲೇಖನಗಳು ಹೆಚ್ಚೆಚ್ಚು ಪ್ರಕಟವಾಗುತ್ತಿದ್ದವು. ಇದು ಶ್ರಮಜೀವಿವರ್ಗದ ಅಂತರಾಷ್ಟ್ರೀಯತೆಯ ಭಾವನೆಯನ್ನು ಪೋಷಿಸಿ ಬೆಳೆಸಿತು.

ಜಗತ್ತಿನ ವಿವಿಧ ಭಾಗಗಳಲ್ಲಿ ಮಿಲಿಟರಿ ಶಿಕ್ಕಾಟ, ವಸಾಹತುಗಳ ವಿಸ್ತರಣೆ ಇತ್ಯಾದಿಗಳ ವಿರುದ್ಧವೂ ಈ ಆಂದೋಲನಗಳ, ಪಕ್ಷಗಳ ಜಂಟಿ ಮನವಿ ಹೇಳಿಕೆ ಮುಂತಾದವುಗಳು ಬರಲಾರಂಭಿಸಿದವು. ಮಿಲಿಟರಿವಾದ, ಯುದ್ಧದ ಬೆದರಿಕೆ ವಿರುದ್ಧ ಹೋರಾಟ ವಿವಿಧ ದೇಶಗಳ ಶ್ರಮಜೀವಿ ವರ್ಗವನ್ನು ಒಂದು ಗೂಡಿಸಿತು. ಉದಾಹರಣೆಗೆ, ೧೮೮೨ ರಲ್ಲಿ ಬ್ರಿಟನ್ ಈಜಿಪ್ಟ್‌ನ ವಿರುದ್ಧ ಘರ್ಷಣೆ ಆರಂಭಿಸಿದಾಗ ಬ್ರಿಟನ್, ಫ್ರಾನ್ಸ್, ಇಟಲಿ ಮತ್ತಿತರ ದೇಶಗಳ ಸಮಾಜವಾದಿಗಳು, ಕಾರ್ಮಿಕ ಸಂಘಟನೆಗಳು ಅದನ್ನು ತೀವ್ರವಾಗಿ ಖಂಡಿಸಿದವು. ಹಲವಾರು ನಗರಗಳಲ್ಲಿ ಪ್ರತಿಭಟನಾ ಮತಪ್ರದರ್ಶನ ನಡೆದವು. ಫ್ರೆಂಚ್ ಆಳುವ ವರ್ಗ ಯುದ್ಧ ಆರಂಭಿಸಿ ಇಂಡೋ ಚೀನಾದಲ್ಲಿ ವಸಾಹತುಗಳನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸಿದಾಗ ಫ್ರೆಂಚ್ ಸಮಾಜವಾದಿಗಳು ಬಹಿರಂಗವಾಗಿ ಯುದ್ಧ - ವಿರೋಧಿ ನಿಲುವು ತಳೆದು ವಸಾಹತುಶಾಹಿ ಧೋರಣೆಯ ವರ್ಗಸಾರವನ್ನು ಬಯಲಿಗೆಳೆದರು, ಇತ್ಯಾದಿ ಇತ್ಯಾದಿ.

ಈ ಹಿನ್ನೆಲೆಯಲ್ಲಿ ಒಂದು ಅಂತರಾಷ್ಟ್ರೀಯ ಸಂಘಟನೆಯ ಅಗತ್ಯ ಬೇರೆ ಬೇರೆ ದೇಶಗಳ ಕಾರ್ಮಿಕ ಮುಖಂಡರಲ್ಲಿ ಹೆಚ್ಚೆಚ್ಚು ಅನಿಸಲಾರಂಭಿಸಿತು. ಅಕ್ಟೋಬರ್ ೧೮೮೭ ರಲ್ಲಿ ನಡೆದ ಜರ್ಮನ್ ಸೋಶಿಯಲ್ - ಡೆಮೋಕ್ರಾಟಿಕ್ ಪಕ್ಷದ ಮಹಾಧಿವೇಶನ ಒಂದು ಅಂತರಾಷ್ಟ್ರೀಯ ಕಾರ್ಮಿಕ ಮಹಾಧಿ ವೇಶನ ನಡೆಯಬೇಕು ಎಂಬ ಸಲಹೆ ನೀಡಿ ಒಂದು ಠರಾವು ಅಂಗೀಕರಿಸಿತು. ಫ್ರೆಂಚ್ ಕಾರ್ಮಿಕಪಕ್ಷವೂ ಇದನ್ನು ಬೆಂಬಲಿಸಿತು.

ಇದರ ಫಲವೇ ಜುಲೈ ೧೪, ೧೮೮೯ ರಂದು ಪ್ಯಾರಿಸ್ಸಿನ ಪೆಟ್ರಿಲ್ ಹಾಲ್‌ನಲ್ಲಿ ನಡೆದ 'ದುಡಿಯುವ ಜನರ ಅಂತರಾಷ್ಟ್ರೀಯ ಸಮಾಜವಾದಿ ಮಹಾಧಿವೇಶನ'. ಜುಲೈ ೧೪ನ್ನು ಉದ್ದೇಶಪೂರ್ವಕವಾಗಿಯೇ ಆರಿಸಿಕೊಳ್ಳಲಾಗಿತ್ತು. ಏಕೆಂದರೆ ಅಂದಿನ ಫ್ರೆಂಚ್ ಕ್ರಾಂತಿಗೆ ನೂರು ವರ್ಷ ತುಂಬುತ್ತಿತ್ತು. ಫ್ರಾನ್ಸಿನ ಬೂರ್ಜ್ವಾವರ್ಗ ಶತಮಾನೋತ್ಸವ ಆಚರಿಸಲು ವಿಶ್ವದ ಬಂಡವಾಳಶಾಹಿಗಳನ್ನು ಮತ್ತು ಬಂಡವಾಳಶಾಹಿಯನ್ನು ಅಪ್ಪಿಕೊಳ್ಳಲಾರಂಭಿಸಿದ ಯುರೋಪಿನ ಪಾಳೆಯಗಾರಿ ಪ್ರಭುಗಳನ್ನು ಪ್ಯಾರಿಸ್ಸಿಗೆ ಆಹ್ವಾನಿಸಿತ್ತು. ಆ ದಿನವೇ ಕಾರ್ಮಿಕರ ಅಂತರ ರಾಷ್ಟ್ರೀಯ ಸಭೆಯೊಂದನ್ನು ನಡೆಸಿ ಫ್ರೆಂಚ್ ಪಾಳೆಯಗಾರಿಕೆಯ ಪ್ರತೀಕದಂತಿದ್ದ ಬೆಸ್ಟಿಲ್ ಕಾರಾಗ್ರಹವನ್ನು ನಾಶಮಾಡಿದ ಫ್ರೆಂಚ್ ಬಂಡವಾಳಶಾಹಿಗಳೇ ನಂತರದ ನೂರು ವರ್ಷಗಳಲ್ಲಿ ಹಲವಾರು ದೇಶಗಳನ್ನೇ ದುಡಿಯುವ ಜನತೆಗೆ ಕಾರಾಗ್ರಹಗಳನ್ನಾಗಿ ಮಾಡಿದ್ದಾರೆ, ಈ ಸೆರೆಮನೆಗಳನ್ನು ನಾಶಮಾಡುವುದೀಗ ಕಾರ್ಮಿಕವರ್ಗದ ಕೆಲಸ ಎಂಬ ಸಂಗತಿಯತ್ತ ಗಮನ ಸೆಳೆಯುವುದು ಮಹಾಧಿವೇಶನದ ಸಂಘಟಕರ ಉದ್ದೇಶವಾಗಿತ್ತು.

ಮೇ ದಿನದ ನಿರ್ಣಯ

ಪೆಟ್ರಿಲ್ ಹಾಲ್ ಕಿಕ್ಕಿರಿದು ತುಂಬಿತ್ತು. ಕಿಂಬಾವುಟದಿಂದ ಅಲಂಕೃತ ಹಾಲ್‌ನಲ್ಲಿ ಚಿನ್ನದ ಅಕ್ಷರಗಳನ್ನು ಹೊತ್ತ "ವಿಶ್ವದ ಕಾರ್ಮಿಕರೇ ಒಂದಾಗಿ" ಎಂಬ ದೊಡ್ಡ ಕೆಂಪು ಬ್ಯಾನರ್ ವೇದಿಕೆಯನ್ನು ಅಲಂಕರಿಸಿತ್ತು. ವೇದಿಕೆಯ ಎರಡೂ ಮಗ್ಗುಲುಗಳಲ್ಲಿ ಬರೆದ ವಾಕ್ಯಗಳು ಹೀಗಿದ್ದವು "ಬಂಡವಾಳಶಾಹಿಗಳ ವರ್ಗದಿಂದ ರಾಜಕೀಯ, ಆರ್ಥಿಕ ಅಧಿಕಾರ ಕಿತ್ತುಕೊಳ್ಳುವುದು, ಉತ್ಪಾದನೆಯ ಸಾಮಾಜೀಕರಣ ಸಮಾಜವಾದಿಗಳ ಗುರಿ" ಎಂದು ಒಂದೆಡೆ. "ಜೂನ್ ೧೮೪೮ರ, ಏಪ್ರಿಲ್-ಮೇ ೧೮೭೧ರ ಪ್ಯಾರಿಸ್‌ನ ಹೆಸರಿನಲ್ಲಿ, ಬೆಬೋಫ್, ಬ್ಲಾಂಕ್ವಿವರ್ಲಿನ್ ಹೆಸರಿನಲ್ಲಿ ಎರಡೂ ಗೋಳಾರ್ಧಗಳ ಸಮಾಜವಾದಿ ದುಡಿಯುವ ಜನಗಳನ್ನು ನಾವು ಸ್ವಾಗತಿಸುತ್ತೇವೆ" ಎಂದು ಇನ್ನೊಂದೆಡೆ. ಇಪ್ಪತ್ತು ದೇಶಗಳ ಒಟ್ಟು ೪೭೭ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಹಿಂದಿನ ಯಾವ ಸಮ್ಮೇಳನವೂ ಇಷ್ಟೊಂದು ಪ್ರಾತಿನಿಧಿಕವಾಗಿರಲಿಲ್ಲ. ಏಳು ದಿನಗಳ ಚರ್ಚೆ ನಡೆಸಿದ ಈ ಮಹಾಧಿವೇಶನ ಕಾರ್ಮಿಕ ವರ್ಗದ ನೇರ ಪ್ರಮುಖ ಬೇಡಿಕೆಗಳಿಗಾಗಿ ಒಂದು ವ್ಯಾಪಕ ಮೂರ್ತ ಕಾರ್ಯಕ್ರಮವನ್ನು ಪ್ರತಿಪಾದಿಸಿತು.

ಏಕ ಕಾಲದಲ್ಲಿ ವಿಶ್ವಾದ್ಯಂತ ಮತ ಪ್ರದರ್ಶನದ ವಿಚಾರ ಆಗಲೇ ಹಲವರಲ್ಲಿ ಇತ್ತು. ಪ್ಯಾರಿಸ್ ಮಹಾಧಿವೇಶನದ ಮೇ ದಿನದ ನಿರ್ಣಯ ಇದಕ್ಕೊಂದು ಸ್ಪಷ್ಟ ಸ್ವರೂಪ ನೀಡಿತು. ಫ್ರೆಂಚ್ ಪ್ರತಿನಿಧಿ ರೇಮಂಡ್ ಲವಿನ್ ಮಂಡಿಸಿದ ಮೂರು ಪರಿಚ್ಛೇದಗಳ ಮೇ ದಿನದ ನಿರ್ಣಯದ ಒಕ್ಕಣಿಕೆ ಹೀಗಿತ್ತು.

"ನಿರ್ಧಾರಿತ ದಿನದಂದು ಎಲ್ಲಾ ದೇಶಗಳಲ್ಲಿ, ಎಲ್ಲ ನಗರಗಳಲ್ಲಿ ಒಂದು ಬೃಹತ್ ಮತಪ್ರದರ್ಶನ ಜರುಗಲಿದೆ. ಅದರಲ್ಲಿ ದುಡಿಯುವ ದಿನವನ್ನು ೮ ಗಂಟೆಗಳಿಗೆ ಶಾಸನಾತ್ಮಕವಾಗಿ ಇಳಿಸಬೇಕೆಂದು ಮತ್ತು ಫ್ರೆಂಚ್ ಅಂತರ್ರಾಷ್ಟ್ರೀಯ ಮಹಾಧಿವೇಶನದ ಇತರ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಅಧಿಕಾರಿಗಳನ್ನು ದುಡಿಯುವ ಜನ ಎಲ್ಲಾಕಡೆ ಏಕಕಾಲದಲ್ಲಿ ಒತ್ತಾಯಿಸಲಿದ್ದಾರೆ.



ಮಹಿಳಾ ಸಮಾನತೆ:- ಪೆಟ್ರೋಗ್ರಾಡಿನಲ್ಲಿ 1917ರಲ್ಲಿ ಒಂದು ಪೋಸ್ಟರ್

ಸೈಂಟ್ ಲೂಯಿಯಲ್ಲಿ ಅಮೆರಿಕನ್ ಫೆಡರೇಶನ್ ಆಫ್ ಲೇಬರ್ ಅಕ್ಟೋಬರ್ ೧೮೮೮ ರಲ್ಲಿ ನಡೆದ ತನ್ನ ಮಹಾಧಿವೇಶನದಲ್ಲಿ ಮೇ ೧, ೧೮೯೦ ರಂದು ಇಂತಹುದೇ ಮತ ಪ್ರದರ್ಶನ ನಡೆಸಬೇಕೆಂಬ ನಿರ್ಣಯವನ್ನು ಈಗಾಗಲೇ ಅಂಗೀಕರಿಸಿರುವುದನ್ನು ಪರಿಗಣಿಸಿ ಈ ದಿನಕ್ಕೆ ಈ ಮೂಲಕ ಅಂಗೀಕಾರ ನೀಡಲಾಗಿದೆ.

ವಿವಿಧ ದೇಶಗಳ ದುಡಿಯುವ ಜನ ತಮ್ಮ ದೇಶದ ವಿಶಿಷ್ಟ ಪರಿಸ್ಥಿತಿಗಳಿಗನು ಗುಣವಾಗಿ ಮತ ಪ್ರದರ್ಶನ ನಡೆಸಬೇಕು".

ಈ ನಿರ್ಣಯ ಸರ್ವಾನುಮತದಿಂದ ಅಂಗೀಕಾರಗೊಂಡಿತು. "ನಮ್ಮ ಮಹಾಧಿ ವೇಶನದ ಅತ್ಯುತ್ತಮ ನಿರ್ಣಯ" ಎಂದು ನಂತರ ಎಂಗೆಲ್ಸ್ ಉದ್ಗರಿಸಿದ ಈ ನಿರ್ಣಯವರ್ಗ ಸಮರನ್ನು ತೀವ್ರ ಗೊಳಿಸುವಲ್ಲಿ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿತು".

ಇದೇ ಸಮಯದಲ್ಲಿ ಅದೇ ಪ್ಯಾರಿಸಿನಲ್ಲಿ ಕಾರ್ಮಿಕ ಆಂದೋಲನ ಇನ್ನೊಂದು ಅಂತರಾಷ್ಟ್ರೀಯ ಸಮ್ಮೇಳನವೂ ನಡೆಯಿತು. ಆದರೆ ಕೇವಲ ಟ್ರೇಡ್ ಯೂನಿಯನ್ ಸಮಸ್ಯೆಗಳಿಗೆ ತನ್ನನ್ನು ಮಿತಿಗೊಳಿಸಿಕೊಂಡ ಈ ಸಮ್ಮೇಳನ ಎರಡನೇ ಅಂತರಾಷ್ಟ್ರೀಯವನ್ನು ಸ್ಥಾಪಿಸಿದ, ಎಂಗೆಲ್ಸ್‌ರ ಮಾರ್ಗದರ್ಶನದಲ್ಲಿ ನಡೆದ, ಮೇ ದಿನದ ಐತಿಹಾಸಿಕ ನಿರ್ಣಯಿತಗೊಂಡ ಮಹಾಧಿವೇಶನದೆದುರು ಸಪ್ಪೆಯಾಗಿ ಬಿಟ್ಟಿತು.

ಮೇ ದಿನದ ನಿರ್ಣಯದ ಪ್ರಕಾರ ಮೊದಲ ಅಂತರಾಷ್ಟ್ರೀಯ ಪ್ರದರ್ಶನಕ್ಕೆ ಸಿದ್ಧತೆ ಬಿರುಸಿನಿಂದ ಆರಂಭವಾಯಿತು. ಇದೊಂದು ಅಭೂತ ಪೂರ್ವ ಪ್ರದರ್ಶನವಾಗಿದ್ದರಿಂದ ಕಾರ್ಮಿಕವರ್ಗದ ಮುಖಂಡರು ಇದನ್ನು ಸಂಘಟಿಸುವುದರಲ್ಲಿ ಹಲವಾರು ಪ್ರಶ್ನೆಗಳನ್ನು ಎದುರಿಸಬೇಕಾಗಿ ಬಂತು.

ಈ ನಡುವೆ ಒಂದು ಅತ್ಯಂತ ಮಹತ್ವದ ಘಟನೆ ನಡೆಯಿತು. ಜರ್ಮನ್ ಸಂಸತ್ತು ರೈಖ್‌ಸ್ಟಾಗ್‌ಗೆ ನಡೆದ ಚುನಾವಣೆಗಳಲ್ಲಿ ಜರ್ಮನ್ ಸಮಾಜವಾದಿಗಳು ೧೪ ಲಕ್ಷ ಮತಗಳಿಸಿ ೩೫ ಸ್ಥಾನಗಳನ್ನು ಗಿಟ್ಟಿಸಿದರು. ಇದೊಂದು ಅತ್ಯಂತ ಅನಿರೀಕ್ಷಿತ ವಿಜಯವಾಗಿತ್ತು. ಈ ವಿಜಯ ಮೊದಲ ಅಂತರ ರ್ರಾಷ್ಟ್ರೀಯ ಮೇ ದಿನಾಚರಣೆಯ ಸಿದ್ಧತೆಗಳಿಗೆ ಹೊಸ ಹುರುಪು ತುಂಬಿತು.

ಕಾರ್ಮಿಕರು ಸಿದ್ಧಗೊಳ್ಳುತ್ತಿದ್ದಾಗ ಬಂಡವಾಳ ಶಾಹಿಗಳು ಸುಮ್ಮನೆ ಕೂತಿರಲಿಲ್ಲ. ಅಂತರ ರ್ರಾಷ್ಟ್ರೀಯ ಶ್ರಮಜೀವಿ ಸೌಹಾರ್ದತೆಯ ಈ ಮೊದಲ ದಿನಾಚರಣೆ ನಡೆಯದಂತೆ ಮಾಡಲು ಸಾಧ್ಯವಿದ್ದ 'ಕಾನೂನುಬದ್ಧ' 'ಕಾನೂನು ಬಾಹಿರ' ಅನೈತಿಕ ಹೀಗೆ ಎಲ್ಲಾ ಕ್ರಮಗಳನ್ನು ಅವರು ಪ್ರಯತ್ನಿಸಿದರು.

ಕೆಲವು ಜರ್ಮನ್ ಬಂಡವಾಳಗಾರರು ಮೇ ದಿನಾಚರಣೆಯಲ್ಲಿ ಭಾಗವಹಿಸಿದವರನ್ನು ಕೆಲಸದಿಂದ ತೆಗೆದು ಹಾಕುವ ಬೆದರಿಕೆ ಹಾಕಿದರು. ಇನ್ನು ಕೆಲವರು. ಮೂರುವಾರ 'ಪ್ರತಿ ಮುಷ್ಕರ' ಮಾಡುವ ಅಂದರೆ ಲಾಕೌಟ್ ಮಾಡುವ ಬೆದರಿಕೆ ಹಾಕಿದರು.


೧೮೭೧ ರ ಪ್ಯಾರಿಸ್ ಕಮ್ಯೂನ್‌ನ ನೆನಪು ಇನ್ನೂ ಹಸಿರಾಗಿದ್ದ ಫ್ರೆಂಚ್ ಬೂರ್ಜ್ವಾ ವರ್ಗ ಭಯದಿಂದ ತತ್ತರಿಸಿ ಹೋಯಿತು. ೩೦ ಸಾವಿರ ಸೈನಿಕರಿದ್ದ ಪ್ಯಾರಿಸ್ ಗ್ಯಾರಿಸನ್‌ಗೆ ಇನ್ನಷ್ಟು ಪಡೆಗಳನ್ನು ಕಳಿಸಬೇಕೆಂಬ ಅದರ ಒತ್ತಾಯಕ್ಕೆ ಮಣಿದ ಫ್ರೆಂಚ್ ಸರ್ಕಾರ ೨ ವಿಶೇಷ ರೆಜಿಮೆಂಟ್‌ಗಳನ್ನು, ೮ ಮದ್ದು ಗುಂಡಿನ ಬಟಾಲಿಯನ್‌ಗಳನ್ನು ಕಳಿಸಿತು. 'ಫ್ರೆಂಚ್‌ಬ್ಯಾಂಕ್' ಸೈನಿಕರಿಂದ ತುಂಬಿದ ಕೋಟೆಯೇ ಆಗಿಬಿಟ್ಟಿತು- ಮೇ ೧, ೧೮೯೦ ರಂದು.

ಸಂಕುಚಿತ ಭಾವನೆಗಳನ್ನು ಕೆರಳಿಸಿ ಕಾರ್ಮಿಕ ವರ್ಗದ ಒಗ್ಗಟ್ಟನ್ನು ಮುರಿಯುವ ಪ್ರಯತ್ನಗಳು ನಡೆದವು. ಎಂಗೆಲ್ಸ್ ಜರ್ಮನ್ ಅಧಿಕಾರಿಗಳೊಂದಿಗೆ ಸೇರಿಕೊಂಡು ಫ್ರೆಂಚ್ ಆರ್ಥಿಕವನ್ನು ದುರ್ಬಲ ಗೊಳಿಸಲು ನಡೆಸಿದ ಪಿತೂರಿ ಇದು. ಎಂದು ಫ್ರೆಂಚ್ ಪರಂಪರೆಗೆ ಸಲ್ಲದ ಕೆಲಸ ಎಂದು ಫ್ರೆಂಚ್ ಬೂರ್ಜ್ವಾಗಳು ಪ್ರಚಾರ ನಡೆಸಿದರು- ಅತ್ತ ಅವರ ಜರ್ಮನ್. ವರ್ಗ ಗೆಳೆಯರೂ ಮೇ ದಿನಾ ಚರಣೆಯನ್ನು ವಿಫಲಗೊಳಿಸಲು ಯತ್ನಿಸುತ್ತಿದ್ದ ರೆಂಬುದನ್ನು ಮರೆಮಾಚಿ. ಆದರೆ ಜರ್ಮನ್, ಫ್ರೆಂಚ್ ಕಾರ್ಮಿಕರನ್ನು ಮೋಸ ಮಾಡುವುದು ಅವರಿಗಾಗಲಿಲ್ಲ. ಇಟಲಿಯಲ್ಲಿ ಮೇ ೧, ೧೮೯೦ ರಂದು ಘರ್ಷಣೆಗಳು ನಡೆದವು. ಮರುವರ್ಷ - ಫ್ರಾನ್ಸ್, ಇಟಲಿ, ಸ್ಪೇನ್‌ನಲ್ಲಿ ಇಂತಹ ಘರ್ಷಣೆಗಳು ನಡೆದವು. ಉತ್ತರ ಫ್ರಾನ್ಸ್‌ನ ಸಣ್ಣ ಕೈಗಾರಿಕಾ ಪಟ್ಟಣ ಫೋರ್ಮಿಯಲ್ಲಿ ಶಾಂತಿಯುತ ಮೇ ದಿನ ಪ್ರದರ್ಶಕರ ಮೇಲೆ ಅನಗತ್ಯ ಗುಂಡು ಹಾರಿಸಿ ೩೦ ಜನರನ್ನು ಬಂಡವಾಳಶಾಹಿಗಳು ಕೊಂದರು. ಫ್ರೆಂಚ್ ಕಾರ್ಮಿಕರು ಇದಕ್ಕೆ ಉಗ್ರ ಪ್ರತಿಭಟನೆ ತೋರಿದರು. ನಂತರ ನಡೆದ ಸಂಸತ್ತಿನ ಉಪ ಚುನಾವಣೆಯಲ್ಲಿ ಸಮಾಜವಾದಿ ಕಾರ್ಮಿಕ ಮುಖಂಡ ಪೌಲ್ ಲಾಫಾರ್ಗ್, ಇದೇ ಪಟ್ಟಣದಿಂದ ಭಾರೀ ಬಹುಮತದಿಂದ ಆರಿಸಲ್ಪಟ್ಟರು. ಆಗ ಫೋರ್ಮಿ ಹತ್ಯಾಕಾಂಡದ ವಿರುದ್ಧ ಮಾತನಾಡಿದುದಕ್ಕೆ ಅವರು ಸೆರೆ ಮನೆಯಲ್ಲಿದ್ದರು.

ಯಾವ ದಮನ, ದಬ್ಬಾಳಿಕೆಯೂ ಮೇ ದಿನದ ಪರಂಪರೆ ಮೂಡುವುದನ್ನು ತಪ್ಪಿಸಲು ಸಾಧ್ಯವಾಗ ಲಿಲ್ಲ. ಎಲ್ಲಾ ದೇಶಗಳ ಶ್ರಮ ಜೀವಿ ವರ್ಗದ ಏಕಕಾಲದ ಅಂತರಾಷ್ಟ್ರೀಯ ಕಾರ್ಯಾಚರಣೆಯ ಈ ವಿಚಾರ ತ್ವರಿತವಾಗಿ ಬೇರು ಬಿಟ್ಟಿತು.

ಮೇ ದಿನಾಚರಣೆಯನ್ನು ಪ್ರತಿದಿನ ನಡೆಸುವ ಯೋಜನೆ ಹಾಕಿರಲಿಲ್ಲ. ಆದರೆ ಮೊದಲ ಮೇ ದಿನಾಚರಣೆಯ ನಂತರ ನಡೆದ ವಿವಿಧ ಕಾರ್ಮಿಕ ಪಕ್ಷಗಳ ಮಹಾಧಿವೇಶನಗಳು ೧೮೯೧ ರಲ್ಲೂ ಮೇ ದಿನದ ಮತಪ್ರದರ್ಶನ ನಡೆಸಲು ಕರೆನೀಡಿದವು.

೧೮೯೧ ರ ಆಗಸ್ಟ್‌ನಲ್ಲಿ ಬ್ರೆಸೆಲ್ಸ್‌ನಲ್ಲಿ ನಡೆದ ದ್ವಿತೀಯ ಅಂತರಾಷ್ಟ್ರೀಯದ ಎರಡನೇ ಮಹಾಧಿವೇಶನ ಈ ಎರಡು ಮೇ ದಿನಾಚರಣೆಗಳ ಅನುಭವಗಳನ್ನು ವಿಮರ್ಶಿಸಿತು. ಇವು ಸಮಸ್ತ ಅಂತರಾಷ್ಟ್ರೀಯ ಕಾರ್ಮಿಕ ಆಂದೋಲನಕ್ಕೆ ಬಹಳ ಪ್ರಯೋಜನಕಾರಿಯಾಯಿತು ಎಂಬ ಒಮ್ಮತಾಭಿ ಪ್ರಾಯ ಈ ಮಹಾಧಿವೇಶನದಲ್ಲಿ ಮೂಡಿತು. ಆದ್ದರಿಂದ ಮೇ ೧ರಂದು ಪ್ರತಿವರ್ಷ ಜಾಗತಿಕ ಮತ ಪ್ರದರ್ಶನ ನಡೆಸುವ ಪರಂಪರೆ ಸ್ಥಾಪಿಸಲು ಬ್ರಸೆಲ್ಸ್ ಮಹಾಧಿವೇಶನ ನಿರ್ಧರಿಸಿತು.



ಪತ್ನಿ ನಾದೆಝ್ಡಾ ಕೃಪ್ಸ್‌ಕಾಯಾ ರೊಂದಿಗೆ,

ಕ್ರಾಂತಿ ಮತ್ತು ಲೆನಿನ್

ಪುಟ 42 ರಿಂದ

ಪ್ರಜಾಪ್ರಭುತ್ವ ಸಾಧಿಸಲು ಅವಕ್ಕೆ ಕಾನೂನುಬದ್ಧತೆ ಕೊಡುವ ಸರ್ಕಾರ ರಚಿಸಲು ಪಾರ್ಲಿಮೆಂಟಿನ ಎಂದು ಲೆನಿನ್ನರ ಯೋಜನೆ.

ಮಿಲಿಟರಿ ಕ್ರಾಂತಿಕಾರಿ ಸಮಿತಿ ಸುಮಾರು 3 ಲಕ್ಷ ಕಾರ್ಮಿಕರು, ಸೈನಿಕರು, ನೌಕಾ ಸೈನಿಕರನ್ನು ಸಂ[illegible] ಕೊಡಲು ಸಶಸ್ತ್ರ ಕ್ರಾಂತಿಗೆ [illegible] ಸನ್ನಿಗೆ ಕಾಯುತ್ತದೆ. ನವೆಂಬರ್ 7 ರಂದು ಕೆರೆನ್ಸ್ಕಿ ಸರ್ಕಾರ [illegible] ದಮನದಿಂದ ಕ್ರಾಂತಿ ಬರು[illegible] ಪಾರ್ಟಿ ಎಂದು [illegible]ತ್ತದೆ. ಬೊಲ್ಶವಿಕ್ ಪತ್ರಿಕಾ ಕಛೇರಿ[illegible] ಮುಚ್ಚುವ [illegible] ಸಶಸ್ತ್ರ [illegible]ಗಳನ್ನು [illegible]ತ್ತದೆ. ಕ್ರಾಂತಿಕಾರಿ [illegible]ಗಳು ಇದನ್ನು [illegible]ಸುತ್ತದೆ. ಇದರಿಂದ ಸಶಸ್ತ್ರ [illegible] ಆರಂಭವಾಗುತ್ತದೆ. ನವೆಂಬರ್ 7-8ರಂದು ಸೋವಿಯೆಟ್ ಕಾಂಗ್ರೆಸ್‌ನ [illegible] ನಂತರ [illegible] ಎಂಬ ಘೋಷಣೆ [illegible]ಸುತ್ತದೆ. ನವೆಂಬರ್ 6ರ ರಾತ್ರಿ ಹೊತ್ತಿಗೆ ಲೆನಿನ್‌ರ ಸಲಹೆ ಮತ್ತು [illegible] ಮೇಲೆ [illegible] ಸರ್ಕಾರ ಕೈಗೊಳ್ಳಲಾಗುತ್ತದೆ.

ನವೆಂಬರ್ 7ರ ಬೆಳಗಿನ ಹೊತ್ತಿಗೆ ಲೆನಿನ್ ಸಶಸ್ತ್ರ ಕ್ರಾಂತಿಯ ಕಮಾಂಡರ್‌ನ ಪಾತ್ರ ವಹಿಸುತ್ತಾರೆ. ಮೊದಲೇ [illegible] ಪೆಟ್ರೋಗ್ರಾಡ್‌ನ [illegible] ಕಾರ್ಯಗಳನ್ನು [illegible]ತ್ತದೆ. ಟೆಲಿಫೋನ್, ಟೆಲಿಗ್ರಾಫ್ ಎಕ್ಸ್‌ಚೇಂಜ್ ಮತ್ತು ರೈಲ್ವೆ ಸ್ಟೇಷನ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಆ ನಂತರ [illegible] ಎಲ್ಲ ಪ್ರಮುಖ ಸರ್ಕಾರಿ ಕಚೇರಿಗಳನ್ನು ವಶಪಡಿಸಿಕೊಳ್ಳಲಾಯಿತು. [illegible] ಬಂಧಿಸಲಾಯಿತು.


ನವೆಂಬರ್ 2ನೇ [illegible] ಸೋವಿಯೆಟ್ ಕಾಂಗ್ರೆಸ್‌ನಲ್ಲಿ ಎಲ್ಲ ಅಧಿಕಾರಗಳೂ ಸೋವಿಯೆಟ್‌ಗಳಿಗೆ ಎಂಬ ಘೋಷಣೆ [illegible]ತ್ತದೆ. ಶಾಂತಿ, ಭೂಮಿ ಮತ್ತು ಸೋವಿಯೆಟ್ ಸರ್ಕಾರದ ಸ್ಥಾಪನೆ ಬಗ್ಗೆ ಸೋವಿಯೆಟ್‌ಗಳ ಕಾಂಗ್ರೆಸ್ [illegible] ಕೈಗೊಂಡ [illegible] ಅಂಗೀಕರಿಸುತ್ತದೆ.

ರಷ್ಯನ್ ಕ್ರಾಂತಿ ಜಗತ್ತಿನ ಕ್ರಾಂತಿಗಳಲ್ಲಿ [illegible] [illegible] ಕ್ರಾಂತಿ. [illegible] ಕೆಲವೇ ದಿನಗಳಲ್ಲಿ [illegible]. [illegible] 50 [illegible].



ವಿದ್ಯುತ್ ನೇಗಿಲಿನ ಪ್ರದರ್ಶನ ವೀಕ್ಷಿಸುತ್ತಿರುವುದು

KRNW/BGS - 312 MAG (2) PRB DECR 319 - 78/79



PRINTED AND PUBLISHED BY P. RAMACHANDRA RAO ON BEHALF OF COMMUNIST PARTY OF INDIA (MARXIST), KARNATAKA STATE COMMITTEE, L-56, K.V. TEMPLE STREET, BANGALORE-560053. Ph: 75331 ರೂ. 4.00
EDITOR: P. RAMACHANDRA RAO